ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ


ಕನ್ನಡ ವಾರಪತ್ರಿಕೆ

ಸಂಪುಟ 16 | ಸಂಚಿಕೆ 8 | ಫೆಬ್ರವರಿ 14–20, 2022 | ಪುಟ 16 | ರೂ. 10

https://janashakthi.wordpress.com e-mail : js_weekly@yahoo.com



ಜೆಎನ್‌ಯು ಹೊಸ ವಿಸಿ



ಲಗಾಮು ಇಲ್ಲದ ಮಂತ್ರಿಗಳು





23ನೇ ಮಹಾಧಿವೇಶನ ಕರಡು ರಾಜಕೀಯ ವರದಿ ಬಿಡುಗಡೆ

“ಬಲಿಷ್ಟ ಕಮ್ಯುನಿಸ್ಟ್ ಪಕ್ಷ ಕಟ್ಟುವುದನ್ನು ಬಲಪಡಿಸುವ ಸಂಕಲ್ಪವನ್ನು ದ್ವಿಗುಣಗೊಳಿಸೋಣ”



ಮುಸ್ಲಿಂ ಹುಡುಗಿಯರಿಗೆ ಶಿಕ್ಷಣದ ಹಕ್ಕಿನ ನಿರಾಕರಣೆ

“ಹೆಚ್ಚುತ್ತಿದೆ ಅಸುರಕ್ಷೆ ತಕ್ಷಣ ಮಧ್ಯೆ ಪ್ರವೇಶಿಸಿ”

ಮಹಿಳಾ ಧ್ವನಿಗಳ ಒತ್ತಾಯ



ಕೇರಳದ ಸಿಲ್ವರ್ ಲೈನ್ ರೈಲು ಯೋಜನೆ



“ಹಿಜಾಬ್–ಕೇಸರಿ ಶಾಲು: ಅನಗತ್ಯ ವಿವಾದ ನಿಲ್ಲಿಸಿ” ರಾಜ್ಯಾದ್ಯಂತ ಪ್ರತಿಭಟನೆ

ಹಳಸಲು ಆಶ್ವಾಸನೆಗಳ ಬಿಜೆಪಿ ಪ್ರಣಾಳಿಕೆ: ಈ ರೈತ-ವಿರೋಧಿ ಪಕ್ಷವನ್ನು ಶಿಕ್ಷಿಸಿ-ಎಸ್‌ಕೆಎಂ

ಉತ್ತರ ಪ್ರದೇಶದಲ್ಲಿ ಬಿಜೆಪಿಯ ಚುನಾವಣಾ ಪ್ರಣಾಳಿಕೆ ಸುಳ್ಳುಗಳ ಕಂತೆ ಎಂದಿರುವ ಸಂಯುಕ್ತ ಕಿಸಾನ್ ಮೋರ್ಚಾ(ಎಸ್‌ಕೆಎಂ)ದ ಮುಖಂಡರು ಈ ರೈತ-ವಿರೋಧಿ ಪಕ್ಷವನ್ನು ಚುನಾವಣೆಗಳಲ್ಲಿ ಶಿಕ್ಷಿಸಿ ಎಂದು ನಾಗರಿಕರಿಗೆ ಕರೆ ನೀಡಿದ್ದಾರೆ.

ಫೆಬ್ರುವರಿ 9 ರಂದು ಅವರು ಉತ್ತರಪ್ರದೇಶದ ಮೊರಾದಾಬಾದ್‌ನಲ್ಲಿ ಮತ್ತು ಬರೇಲಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತಾಡುತ್ತ ಈ ಕರೆ ನೀಡಿದರು.

ಈ ಮೊದಲು ಫೆಬ್ರುವರಿ 3 ರಂದು ನವದೆಹಲಿಯಲ್ಲಿ ಪ್ರೆಸ್ ಕ್ಲಬ್‌ನಲ್ಲಿ ಪತ್ರಿಕಾಗೋಷ್ಠಿಯೊಂದರಲ್ಲಿ ಎಸ್‌ಕೆಎಂನ ಮುಖಂಡರು ರೈತ-ವಿರೋಧಿ ಬಿಜೆಪಿಗೆ ಮತ ನೀಡಬೇಡಿ ಎಂದು ಉತ್ತರಪ್ರದೇಶದ ಮತದಾರರನ್ನು ವಿನಂತಿಸುವ ಮನವಿ ಪತ್ರವನ್ನು ಬಿಡುಗಡೆ ಮಾಡಿದ್ದರು. ಇಂತಹ ಪತ್ರಿಕಾಗೋಷ್ಠಿಗಳನ್ನು ಉತ್ತರಪ್ರದೇಶದ 9 ಸ್ಥಳಗಳಲ್ಲಿ, ಮೇರಠ್, ಮೊರಾದಾಬಾದ್, ಲಕ್ನೌ, ಕಾನ್ಪುರ್, ಝಾನ್ಸಿ, ಅಲಹಾಬಾದ್, ಸಿದ್ಧಾರ್ಥನಗರ, ಬನಾರಸ್ ಮತ್ತು ಗೋರಖ್ಪುರ್ ನಲ್ಲಿ ನಡೆಸಲಾಗುವುದು ಎಂದು ಎಸ್‌ಕೆಎಂ ಮುಖಂಡರು ಹೇಳಿದ್ದರು.

ಆ ಪ್ರಕಾರ ಫೆಬ್ರುವರಿ 6ರಂದು ಮೇರಠ್ ನಲ್ಲಿ, ನಂತರ ಮೊರಾದಾಬಾದ್‌ನಲ್ಲಿ ಮತ್ತು ಬರೇಲಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿದ್ದಾರೆ.

ಬಿಜೆಪಿ ಪ್ರಕಟಿಸಿರುವ "ಲೋಕ ಕಲ್ಯಾಣ ಸಂಕಲ್ಪ ಪತ್ರ' ರಾಜ್ಯದ 86 ಲಕ್ಷ ರೈತರು ಒಟ್ಟು 36,000 ಕೋಟಿ ರೂ.ಗಳ ಸಾಲಮನ್ನಾ ಅನುಭವಿಸಿದ್ದಾರೆ, ಎರಡೂವರೆ ಕೋಟಿ ರೈತರಿಗೆ ಪಿಎಂ ಕಿಸಾನ್ ಸಮ್ಮಾನ್ ನಿಧಿಯಿಂದ 6000ರೂ.ಗಳ ವಾರ್ಷಿಕ ನೆರವು ಒದಗಿಸಲಾಗಿದೆ, ಈ ಮೂಲಕ ಉತ್ತರ ಪ್ರದೇಶ ಈ ರಂಗದಲ್ಲಿ ನಂ.1 ಆಗಿದೆ ಎಂದು ಹೇಳಿಕೊಂಡಿದೆ.

ಇದು ರಾಜ್ಯದ ಜನಗಳನ್ನು ದಾರಿ ತಪ್ಪಿಸುವ ಪ್ರಯತ್ನ ಎಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಎಸ್‌ಕೆಎಂ ಮುಖಂಡರಾದ ಹನ್ನನ್ ಮೊಲ್ಲ,



ಫೆಬ್ರುವರಿ 6 ರಂದು ಮೇರಠ್‌ನಲ್ಲಿ ಎಸ್‌ಕೆಎಂ ಪತ್ರಿಕಾಗೋಷ್ಠಿಯಲ್ಲಿ..


संयुक्त किसान मोर्चा की अपील

इस चुनाव में किसान विरोधी बीजेपी को सजा दें

[illegible]

किसान आंदोलन का एक सिपाही

ಯೋಗೇಂದ್ರ ಯಾದವ್, ಜಗಜಿತ್‌ಸಿಂಗ್ ದಲ್ಲೇವಾಲ್, ರಾಕೇಶ್ ಟಿಕಾಯ್ತ್, ಶಿವಕುಮಾರ್ ಶರ್ಮ ಮತ್ತು ಡಾ.ಸುನೀಲಂ ಟೀಕಿಸಿದರು.

14 ದಿನಗಳಲ್ಲಿ ಕಬ್ಬು ಬೆಳೆಗಾರರಿಗೆ ಅವರಿಗೆ ಬರಬೇಕಾದ ಬಾಕಿಗಳನ್ನು ತೆರಲಾಗುವುದು, ವಿಳಂಬ ಪಾವತಿಗಾಗಿ ಮಿಲ್ ಮಾಲಕರಿಂದ ಬಡ್ಡಿ ವಸೂಲಿ ಮಾಡಿ ಕೊಡಲಾಗುವದು ಎಂದು 2022ರ ಪ್ರಣಾಳಿಕೆಯಲ್ಲಿ ಮತ್ತೆ ಆಶ್ವಾಸನೆ ನೀಡಲಾಗಿದೆ. 2017ರಲ್ಲಿಯೂ ಇದೇ ಆಶ್ವಾಸನೆ ನೀಡಲಾಗಿತ್ತು, ಆದರೂ ಈಗಲೂ ರೈತರು 2017-18ರ ಸುಮಾರು 20 ಸಾವಿರ ಕೋಟಿ ರೂ. ಮತ್ತು 2020-21ರ ರೂ. 3752 ಕೋಟಿ ಬಾಕಿಗಾಗಿ ಕಾಯುತ್ತಲೇ ಇದ್ದಾರೆ ಎಂಬ ಸಂಗತಿಯತ್ತ ಎಸ್‌ಕೆಎಂ ಮುಖಂಡರು ಗಮನ ಸೆಳೆದರು.

ಕಳೆದ 10ವರ್ಷಗಳ ವಿಳಂಬಕ್ಕಾಗಿ ರೂ. 8700 ಕೋಟಿ ಬಡ್ಡಿ ತೆರಬೇಕು ಎಂದು ಅಲಹಾಬಾದ್ ಹೈಕೋರ್ಟ್ ಮಾರ್ಚ್ 2017ರಲ್ಲಿ ಆದೇಶ ನೀಡಿದ್ದರೂ, ರೈತರಿಗೆ ಇದುವರೆಗೂ ಅದು ಸಿಕ್ಕಿಲ್ಲ ಎಂದೂ ಅವರು ಹೇಳಿದರು.

ಬಿಜೆಪಿಯ ಈ 'ಸಂಕಲ್ಪ ಪತ್ರ'ದಲ್ಲಿ ಭತ್ತ, ಗೋದಿ, ಆಲೂಗಡ್ಡೆ, ಟೊಮ್ಯಾಟೊ, ಈರುಳ್ಳಿ ಮುಂತಾದ ಬೆಳೆಗಳನ್ನು ಕನಿಷ್ಟ ಬೆಂಬಲ ಬೆಲೆಗಳಲ್ಲಿ ಖರೀದಿಸುವ ಆಶ್ವಾಸನೆಯನ್ನೂ ನೀಡಿದೆ. 2017ರ ಪ್ರಣಾಳಿಕೆಯಲ್ಲೂ ನೀಡಿದ್ದ ಈ ಆಶ್ವಾಸನೆಯನ್ನು ಅಧಿಕಾರಕ್ಕೆ ಬಂದ ಕೂಡಲೇ ಮರೆತು ಬಿಡಲಾಗಿತ್ತು ಎಂದು ರೈತರು ಹೇಳುತ್ತಿದ್ದಾರೆ. ನಿಜ ಸಂಗತಿಯೆಂದರೆ ಕಳೆದ 5 ವರ್ಷಗಳಲ್ಲಿ ಈ ಸರಕಾರದಿಂದ ಈ ಬೆಳೆಗಳ ಮೂರನೇ ಒಂದು ಭಾಗಕ್ಕಿಂತಲೂ ಕಡಿಮೆ ಖರೀದಿ ನಡೆದಿದೆ. ಗೋಧಿಯ ವಿಷಯದಲ್ಲಂತೂ ರೈತರು ಬೆಳೆದ ಪ್ರತಿ ಆರು ಚೀಲದಲ್ಲೀ ಒಂದನ್ನು ಮಾತ್ರ ಸರಕಾರ ಖರೀದಿಸಿದೆ ಎಂದು ಎಸ್‌ಕೆಎಂ ಮುಖಂಡರು ಹೇಳಿದರು.

ಅದೇ ರೀತಿ ಮುಖ್ಯಮಂತ್ರಿ ಕೃಷಿ ನೀರಾವರಿ ಯೋಜನೆಯ ಮತ್ತು ಉಚಿತ ವಿದ್ಯುತ್ ಪೂರೈಕೆಯ ಆಶ್ವಾಸನೆಗಳೂ ಕಳೆದ ಬಾರಿಯ ಆಶ್ವಾಸನೆಗಳ ಪುನರುಚ್ಚಾರವಷ್ಟೇ. ಕಳೆದ ಬಾರಿ ನೀರಾವರಿಗಾಗಿ 20000 ಕೋಟಿ ರೂ.ಗಳ ಆಶ್ವಾಸನೆಯಿದ್ದರೂ ಅದಿನ್ನೂ ಕಾಣುತ್ತಿಲ್ಲ. ಈ ಬಾರಿ 5000ಕೋಟಿ ರೂ. ಗಳ ಆಶ್ವಾಸನೆಯಿದೆ. ಕಳೆದ 5 ವರ್ಷಗಳಲ್ಲಿ ಸಾಕಷ್ಟು ವಿದ್ಯುತ್ ಪೂರೈಕೆಯೂ ಆಗಿಲ್ಲ ಮತ್ತು ವಿದ್ಯುತ್ ದರಗಳು ಇಲ್ಲಿ ಇಡೀ ದೇಶದಲ್ಲೇ ಅತೀ ಹೆಚ್ಚು, ಕೊಳವೆ ಬಾವಿಗಳಿಗೆ ವಿದ್ಯುತ್ ದರವನ್ನು ಯುನಿಟಿಗೆ 1 ರೂ.ನಿಂದ 2 ರೂ.ಗೆ ಏರಿಸಲಾಗಿದೆ. 10 ಲಕ್ಷ ರೈತರಿಗೆ ವಿದ್ಯುತ್ ಉಳಿಸುವ ಪಂಪ್‌ಸೆಟ್‌ಗಳ ಆಶ್ವಾಸನೆಯಿತ್ತು. ಇದುವರೆಗೆ ಕೊಟ್ಟಿರುವುದು ಕೇವಲ 6068 ಪಂಪುಗಳಷ್ಟೇ. ಈಗ ಮತ್ತೆ ಸೌರ ಪಂಪುಗಳ ಆಶ್ವಾಸನೆ ಕೊಡಲಾಗಿದೆ.

ಉತ್ತರಪ್ರದೇಶದ ರೈತರಿಗೆ 5 ವರ್ಷಗಳ ಹಿಂದೆ ಕೊಟ್ಟ ಆಶ್ವಾಸನೆಗಳ ಗತಿ ಒಂದೆಡೆಯಾದರೆ, ಈಗ ರೈತರು ಲಖಿಂಪುರ್ ಖೇರಿಯಲ್ಲಿ ಕೇಂದ್ರ ಮಂತ್ರಿಯ ಮಗ ನಾಲ್ವರು ರೈತರು ಮತ್ತು ಒಬ್ಬ ಸ್ಥಳೀಯ ಪತ್ರಕರ್ತರ ಮೇಲೆ ಕಾರು ಹತ್ತಿಸಿ ಸಾಯಿಸಿದ್ದನ್ನೂ ರೈತರು ನೆನಪಿಸಿಕೊಳ್ಳಬೇಕು ಎಂದು ಎಸ್‌ಕೆಎಂ ಮುಖಂಡರು ಹೇಳಿದರು. ಡಿಸೆಂಬರ್ 9 ರಂದು ದಿಲ್ಲಿ ಗಡಿಗಳಲ್ಲಿ ಚಳುವಳಿಯನ್ನು ಸ್ಥಗಿತಗೊಳಿಸಲು ಸರಕಾರ ನೀಡಿದ ಲಿಖಿತ ಆಶ್ವಾಸನೆಗಳನ್ನು ಈಡೇರಿಸುವಲ್ಲಿಯೂ ಹಿಂದೇಟು ಹಾಕಿರವ ಬಗ್ಗೆಯೂ ಎಸ್‌ಕೆಎಂ ಮುಖಂಡರು ಮಾತಾಡಿದರು. ಆದ್ದರಿಂದಲೇ ಜನವರಿ 31 ರಂದು 'ವಿಶ್ವಾಸಘಾತ ದಿನ' ವನ್ನು ಆಚರಿಸಿದ ನಂತರ ಎಸ್‌ಕೆಎಂಗೆ ಸೇರಿದ 57 ರೈತರ ಸಂಘಟನೆಗಳು ಪ್ರತಿ ಬ್ಲಾಕಿನಲ್ಲಿ, ಗ್ರಾಮದಲ್ಲಿ ಮತ್ತು ಜಿಲ್ಲೆಯಲ್ಲಿ ರೈತ-ವಿರೋಧಿ ಬಿಜೆಪಿಯಲ್ಲಿ ಮತ್ತೊಮ್ಮೆ ವಿಶ್ವಾಸ ಇಡಬೇಡಿ ಎಂದು ಪ್ರಚಾರ ನಡೆಸಲು ನಿರ್ಧರಿಸಿದವು ಎಂದು ಹೇಳಿದ ಎಸ್‌ಕೆಎಂ ಮುಖಂಡರು, "ತಮ್ಮ ಬೆಳೆಗಳನ್ನು ಎಂಎಸ್‌ಪಿಗಿಂತ ಅರ್ಧ ಬೆಲೆಗಳಲ್ಲಿ ಮಾರಬೇಕಾಗಿ ಬಂದಿರುವ ರೈತರು, ತಮ್ಮ ಬೆಳೆಗಳನ್ನು ಬೀಡಾಡಿ ಪ್ರಾಣಿಗಳಿಂದ ಕಾಪಾಡಿಕೊಳ್ಳಲು ರಾತ್ರಿಯಿಡೀ ಎಚ್ಚರವಿರಬೇಕಾದ ರೈತರು ಖಂಡಿತವಾಗಿಯೂ ಬಿಜೆಪಿಗೆ ಒಂದು ಪಾಟ ಕಲಿಸುತ್ತಾರೆ ಎಂದರು.

"ಬಿಜೆಪಿ ಸರಕಾರಕ್ಕೆ ಸತ್ಯ ಮತ್ತು ಸುಳ್ಳಿನ ಭಾಷೆ ಅರ್ಥವಾಗುವುದಿಲ್ಲ, ಒಳಿತು ಮತ್ತು ಕೆಡುಕಿನ ವ್ಯತ್ಯಾಸ ಅರ್ಥವಾಗುವುದಿಲ್ಲ. ಸಂವಿಧಾನಿಕ ಮತ್ತು ಅಸಂವಿಧಾನಿಕದ ನಡುವಿನ ವ್ಯತ್ಯಾಸ ತಿಳಿಯುವುದಿಲ್ಲ. ಈ ಪಕ್ಷಕ್ಕೆ ಒಂದೇ ಭಾಷೆ ಗೊತ್ತಿರುವುದು-ವೋಟು, ಸೀಟು ಮತ್ತು ಅಧಿಕಾರ" ಎಂದು ಎಸ್‌ಕೆಎಂ ಪರವಾಗಿ ಪ್ರಕಟಿಸಿರುವ ಕರಪತ್ರ ಹೇಳುತ್ತದೆ.

ರಾಷ್ಟ್ರೀಯ ಮಹಿಳಾ ಆಯೋಗ ಮಹಿಳೆಯರ ಹಕ್ಕುಗಳನ್ನು ಪ್ರತಿನಿಧಿಸಬೇಕು, ಅವರ ಪ್ರಶ್ನೆಗಳಿಗೆ, ಆತಂಕಗಳಿಗೆ ದನಿ ನೀಡಬೇಕು-ಮಹಿಳಾ ಸಂಘಟನೆಗಳ ಜಂಟಿ ಮನವಿ

ಮಹಿಳೆಯರಿಗೆ ಹಿಂಸಾಚಾರದಿಂದ ರಕ್ಷಣೆ ಒದಗಿಸುವುದು ಮತ್ತು ಅವರ ಹಕ್ಕುಗಳನ್ನು ಬಲಪಡಿಸುವುದು ರಾಷ್ಟ್ರೀಯ ಮಹಿಳಾ ಆಯೋಗಕ್ಕಿರುವ ಆದೇಶ. ಆದ್ದರಿಂದ ಈಗಾಗಲೇ ಇರುವ ಮಹಿಳಾ-ಪರ ಶಾಸನಗಳನ್ನು ದುರ್ಬಲಗೊಳಿಸುವ ಯಾವುದೇ ಕಾನೂನನ್ನು ಆಯೋಗ ಸೂಚಿಸಬಾರದು ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘ(ಎಐಡಿಡಬ್ಲ್ಯುಎ), ಭಾರತೀಯ ಮಹಿಳೆಯರ ರಾಷ್ಟ್ರೀಯ ಒಕ್ಕೂಟ(ಎನ್‌ಎಫ್‌ಐಡಬ್ಲ್ಯು) ಮತ್ತು ಅಖಿಲ ಭಾರತ ಪ್ರಗತಿಪರ ಮಹಿಳಾ ಸಂಘ(ಎಐಪಿಡಬ್ಲ್ಯುಎ) ಹೇಳಿವೆ. ಆಯೋಗ ಪುರುಷರ ಗುಂಪುಗಳ ಅಣತಿಯಂತೆ ಅಥವ ಮಹಿಳೆಯರನ್ನು ಕುರಿತ ಕಾನೂನುಗಳು ಹೇಗಿರಬೇಕೆಂಬ ಅವರ ಕಣ್ಣೋಟಗಳಂತೆ ಕೆಲಸ ಮಾಡಬಾರದು ಎಂದು ಈ ಸಂಘಟನೆಗಳು ಆಗ್ರಹಿಸಿವೆ.

ರಾಷ್ಟ್ರೀಯ ಮಹಿಳಾ ಆಯೋಗ ಕ್ರಿಮಿನಲ್ ಕಾನೂನಿನ ಕೆಲವು ಪ್ರಾವಧಾನಗಳಲ್ಲಿ ಪ್ರಸ್ತಾವಿತ ಬದಲಾವಣೆಗಳನ್ನು ಕುರಿತಂತೆ ಎಲ್ಲ ಮಹಿಳಾ ಸಂಘಟನೆಗಳಿಗೆ ಕಳಿಸಿರುವ "ಚರ್ಚೆಯ ಅಂಶಗಳು" ಎಂಬುದಕ್ಕೆ ಪ್ರತಿಯಾಗಿ ಈ ಮೂರು ಸಂಘಟನೆಗಳು ಆಯೋಗಕ್ಕೆ ಸಲ್ಲಿಸಿರುವ ಜಂಟಿ ಮನವಿ ಪತ್ರದಲ್ಲಿ ಈ ಆಗ್ರಹವನ್ನು ಮಾಡಿವೆ.

ಆಯೋಗದ ಪತ್ರವೇ ಹೇಳುವಂತೆ, ಯಾವುದೇ ತಿದ್ದುಪಡಿಗಳನ್ನು "ಭಾರತದಲ್ಲಿ ಮಹಿಳೆಯರ ಕಣ್ಣೋಟವನ್ನು ಮತ್ತು ನಿಲುವನ್ನು" ಗಮನದಲ್ಲಿಟ್ಟುಕೊಂಡೇ ಸೂಚಿಸಬೇಕು ಎಂಬುದನ್ನು ಒತ್ತಿ ಹೇಳಿರುವ ಮನವಿ ಪತ್ರ ರಾಷ್ಟ್ರೀಯ ಮಹಿಳಾ ಆಯೋಗ ಮಹಿಳೆಯರ ಹಕ್ಕುಗಳನ್ನು ಪ್ರತಿನಿಧಿಸಬೇಕು ಮತ್ತು ಅವರ ಪ್ರಶ್ನೆಗಳಿಗೆ ಹಾಗೂ ಆತಂಕಗಳಿಗೆ ದನಿ ನೀಡಬೇಕು ಎಂಬುದನ್ನು ಆಯೋಗದ ಗಮನಕ್ಕೆ ತಂದಿದೆ.

ಹೀಗೆ ಮಹಿಳಾ ಆಯೋಗದ ಕ್ರಿಯೆ ಮಹಿಳೆಯರ ಸ್ಥಾನಮಾನವನ್ನು ಉತ್ತಮಪಡಿಸಲಿಕ್ಕಾಗಿ ಇರಬೇಕು. ಮಹಿಳೆಯರ ವಿರುದ್ಧ ಯಾವುದೇ ಅನ್ಯಾಯ ಮತ್ತು ತಾರತಮ್ಯವನ್ನು ತೆಗೆಯಲು ಸರಿಪಡಿಕೆ ಶಾಸನಾತ್ಮಕ ಕ್ರಮಗಳನ್ನು ಕೈಗೊಳ್ಳಬೇಕು, ಮಾತ್ರವಲ್ಲ, ಮಹಿಳೆಯರ ವಿರುದ್ಧ ತಾರತಮ್ಯದ ಅಥವ ಅನ್ಯಾಯದ ಯಾವುದೇ ಕಾನೂನು ತರದಂತೆ ಖಾತ್ರಿಪಡಿಸಬೇಕು.

ಆದರೆ ಆಯೋಗ ಕಳಿಸಿರುವ "ಚರ್ಚೆಯ ಅಂಶ"ಗಳಲ್ಲಿರುವ ಕೆಲವು ಪ್ರಶ್ನೆಗಳು ಕ್ರಿಮಿನಲ್ ಕಾನೂನಿನಲ್ಲಿನ ಅಂಶಗಳನ್ನು ಪುರುಷರ ಪರವಾಗಿ ದುರ್ಬಲಗೊಳಿಸುವಂತಿವೆ ಎಂಬ ತೀರ್ಮಾನಕ್ಕೆ ಒಯ್ಯುತ್ತವೆ ಎಂದು ಮಹಿಳಾ ಸಂಘಟನೆಗಳ ಈ ಜಂಟಿ ಮನವಿಯಲ್ಲಿ ಹೇಳಲಾಗಿದೆ. ಈ ಅಂಶಗಳು ಬಹಳಷ್ಟು ಹೋರಾಟಗಳ ನಂತರ ರೂಪುಗೊಂಡ ಶಾಸನಗಳಾಗಿವೆ ಎಂಬುದನ್ನು ಆಯೋಗಕ್ಕೆ ನೆನಪಿಸಿರುವ ಈ ಜಂಟಿ ಮನವಿ ಆಯೋಗ

ಪುಟ 14 ನೋಡಿ

ಯುಜಿಸಿ ಅಧ್ಯಕ್ಷರಾಗಿ ಜೆಎನ್‌ಯು ವಿಸಿಯ ನೇಮಕದ ವಿರುದ್ಧ ದೇಶಾದ್ಯಂತ ಪ್ರತಿಭಟನೆ: ಎಸ್‌ಎಫ್‌ಐ ಕರೆ

ಜವಹರಲಾಲ್ ನೆಹರು ವಿಶ್ವವಿದ್ಯಾಲಯ (ಜೆಎನ್‌ಯು)ದ ಉಪಕುಲಪತಿ ಪ್ರೊ.ಮಾಮಿದಾಳ ಜಗದೇಶ್ ಕುಮಾರ್ ಅವರನ್ನು ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ (ಯುಜಿಸಿ)ದ ಅಧ್ಯಕ್ಷ ಹುದ್ದೆಗೆ ನೇಮಿಸಿರುವುದನ್ನು ಪ್ರತಿಭಟಿಸುವಂತೆ ಎಸ್‌ಎಫ್‌ಐ ಕೇಂದ್ರೀಯ ಕಾರ್ಯಕಾರಿ ಸಮಿತಿ ತನ್ನ ಎಲ್ಲಾ ಘಟಕಗಳಿಗೆ ಕರೆ ನೀಡಿದೆ.

(ಯುಜಿಸಿ) ಅಧ್ಯಕ್ಷ ಹುದ್ದೆಗೆ ಜೆಎನ್‌ಯು ಉಪಕುಲಪತಿಗಳ ಈ ನೇಮಕವು ದೇಶದಾದ್ಯಂತ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ನವ-ಉದಾರವಾದಿ ನೀತಿಗಳನ್ನು ಮತ್ತಷ್ಟು ಹೆಚ್ಚಿಸುವ ಆರ್‌ಎಸ್‌ಎಸ್-ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಒಂದು ಹೆಜ್ಜೆಯಾಗಿದೆ ಎಂದು ಅದು ಅಭಿಪ್ರಾಯಪಟ್ಟಿದೆ.

ಕಳೆದ 6 ವರ್ಷಗಳ ಅನುಭವದಿಂದ, ಈ ಜೆಎನ್‌ಯು ಹಾಲಿ ಉಪಕುಲಪತಿ ಪ್ರೊ. ಮಾಮಿದಾಳ ಜಗದೇಶ್ ಕುಮಾರ್ ಅವರು ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಸಿಬ್ಬಂದಿಗಳ ವಿರುದ್ಧವಾದ ನಿರ್ಧಾರಗಳಿಗೆ ಕುಖ್ಯಾತರು. ಅಕಾಡೆಮಿಕ್ ಕೌನ್ಸಿಲ್ ಸೇರಿದಂತೆ ಎಕ್ಸಿಕ್ಯೂಟಿವ್ ಕೌನ್ಸಿಲ್‌ಗಳವರೆಗೆ ಪ್ರಜಾಸತ್ತಾತ್ಮಕ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯನ್ನು ಕಿತ್ತುಹಾಕುವುದರಿಂದ ಹಿಡಿದು ಶುಲ್ಕ ಹೆಚ್ಚಳ ಮತ್ತು ಖಾಸಗೀಕರಣದಂತಹ ಅಜೆಂಡಾಗಳನ್ನು ಮುಂತಳ್ಳುವ ವರೆಗೆ ಎಲ್ಲರಿಗೂ ತಿಳಿದಿದೆ. ಇಷ್ಟಕ್ಕೇ ಸೀಮಿತವಾಗದೆ, ನೇಮಕಾತಿ ಪ್ರಕ್ರಿಯೆಯನ್ನು ಉಲ್ಲಂಘಿಸಿ, GSCASH ನಂತಹ ಸಂಸ್ಥೆಗಳನ್ನು ಕಿತ್ತುಹಾಕುವಲ್ಲಿ ಜಗದೇಶ್ ಕುಮಾರ್ ಕುಖ್ಯಾತರಾಗಿದ್ದಾರೆ.

ಅವರ ಅಧಿಕಾರಾವಧಿಯಲ್ಲಿ, ಜೆಎನ್‌ಯು ಎಂಫಿಲ್/ಪಿಎಚ್‌ಡಿ ಕಾರ್ಯಕ್ರಮದಲ್ಲಿ ಗರಿಷ್ಠ ಸಂಖ್ಯೆಯ ಸೀಟುಗಳನ್ನು ಕಡಿತಗೊಳಿಸಿತು, ಜೆಎನ್‌ಯು ಪ್ರವೇಶ ಪರೀಕ್ಷೆಯನ್ನು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಗೆ ಹಸ್ತಾಂತರಿಸಿತು ಮತ್ತು ಜೆನ್‌ಯು ಹೊಂದಿದ್ದ ಪ್ರಖ್ಯಾತ ಪ್ರಗತಿಶೀಲ ಪ್ರವೇಶ ನೀತಿಯ ಮಾದರಿಯನ್ನು ಬದಲಾಯಿಸಿತು, ಪ್ರವೇಶ ಪ್ರಕ್ರಿಯೆಯಲ್ಲಿ ಮೀಸಲಾತಿ ನೀತಿಯನ್ನು ನಿರಂತರ ಉಲ್ಲಂಘಿಸಿತು. ಅವರ ಕೃತ್ಯಗಳು ಆಳುವ ಪಕ್ಷಕ್ಕೆ, ಅದರ ಕಾರ್ಯಸೂಚಿಗೆ ಅವರ ನಿಷ್ಠೆಯನ್ನು ತೋರಿಸುತ್ತದೆ.

ಪ್ರೊ. ಮಾಮಿದಾಳ ಜಗದೇಶ್ ಕುಮಾರ್ ಅವರನ್ನು ಯುಜಿಸಿಗೆ ನೇಮಕ ಮಾಡಿರುವುದು, ಶಿಕ್ಷಣದ ವ್ಯಾಪಾರೀಕರಣ, ಕೋಮುವಾದೀಕರಣ ಮತ್ತು ಕೇಸರೀಕರಣದ ಅಜೆಂಡಾವನ್ನು ಪೂರೈಸಲು ಜೆಎನ್‌ಯುನಲ್ಲಿ ತೆಗೆದುಕೊಂಡ ಸ್ವೇಚ್ಛಾಚಾರದ ನಿರ್ಧಾರಗಳನ್ನು ಇತರ ಶಿಕ್ಷಣ ಸಂಸ್ಥೆಗಳಲ್ಲಿ ಏಕರೂಪವಾಗಿ ಪುನರಾವರ್ತಿಸಲಾಗುವುದು ಎಂಬುದು ದೇಶಾದ್ಯಂತದ ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಸರ್ಕಾರದ ಸ್ಪಷ್ಟ ಸಂಕೇತವಾಗಿದೆ ಎಂದಿರುವ ಎಸ್‌ಎಫ್‌ಐ, ಈ ಕಾರಣಕ್ಕಾಗಿ ಈ ಪ್ರತಿಭಟನೆಗೆ ಕರೆ ನೀಡಿದೆ.

ಸಂಪಾದಕೀಯ

ಲಗಾಮು ಇಲ್ಲದ ಮಂತ್ರಿಗಳು

ಭಗವಾಧ್ವಜ ಮುಂದೆ ನೂರು ಇನ್ನುರು ವರ್ಷಗಳ ನಂತರ ರಾಷ್ಟ್ರ ಧ್ವಜ ಆಗಬಹುದು ಎಂದು ಸಚಿವ ಕೆ.ಎಸ್. ಈಶ್ವರಪ್ಪ ಹೇಳಿದ್ದಾರೆ. ಎಂದು ವರದಿಯಾಗಿದೆ. ಜವಾಬ್ದಾರಿಯುತ ಸ್ಥಾನದಲ್ಲಿರುವವರ ಇಂತಹ ಬೇಜವಾಬ್ದಾರಿಯುತ ಮಾತುಗಳಿಂದ ಪ್ರಚೋದನೆ ಪಡೆದು ಕರಾವಳಿಯ ಕೆಲವು ಕಾಲೇಜ್ ವಿದ್ಯಾರ್ಥಿಗಳ ನಡುವೆ ಉಂಟಾದ ವಿವಾದ ಇಂದು ದೇಶಾದ್ಯಂತ ಕಾಡ್ಗಿಚ್ಚಿನಂತೆ ಹರಡಿಕೊಂಡಿದೆ.

ಸಚಿವ ಈಶ್ವರಪ್ಪ ಇಂತಹ ಪ್ರಚೋದನಾಕಾರಿ ಮಾತುಗಳನ್ನು ಆಡುವುದರಲ್ಲಿ ನಿಸ್ಸೀಮರು. ಕಾಲೇಜ್ ಧ್ವಜ ಸ್ತಂಭದಲ್ಲಿ ಕೇಸರಿ ಬಾವುಟ ಹಾರಿಸಿದ ಬಗ್ಗೆ ಅವರ ಸಮರ್ಥನೆ ಶಿಕ್ಷಾರ್ಹ ಅಪರಾಧವಾಗಿದೆ. ರಾಷ್ಟ್ರಧ್ವಜಕ್ಕೆ ಅವರು ಎಸಗಿದ ಅವಮಾನವಾಗಿದೆ. ಬೆಂಕಿಗೆ ತುಪ್ಪ ಸುರಿದಂತೆ, ಇವರ ಮಗ ಸೂರತ್‌ನಿಂದ 50 ಲಕ್ಷ ಕೇಸರಿ ಶಾಲುಗಳನ್ನು ತರಿಸಿ ವಿದ್ಯಾರ್ಥಿಗಳಿಗೆ ವಿತರಿಸಿದ್ದಾರೆ. ಎನ್ನಲಾಗುತ್ತದೆ. ಕೇಸರಿ ಶಾಲು ಹಂಚಿರುವುದರಲ್ಲಿ ತಪ್ಪೇನಿಲ್ಲ ಎಂದು ಮಂತ್ರಿಗಳು ತಮ್ಮ ಮಗನ ಸಂವಿಧಾನ ವಿರೋಧಿ ಕೃತ್ಯವನ್ನು ಬೆಂಬಲಿಸಿ ಅಂತಹ ಪುಂಡರಿಗೆ ಕುಮ್ಮಕ್ಕು ನೀಡಿದ್ದಾರೆ.

ಹಿಂದುಗಳು ಬಳಸುವ ಕೇಸರಿ ಬಣ್ಣದ ಬಾವುಟಗಳನ್ನು ಉಳಿದ ಧರ್ಮಿಯರೂ ಸಹ ಇಷ್ಟು ದಿನ ಗೌರವದಿಂದ ಕಾಣುತ್ತಿದ್ದರು. ಅದನ್ನು ನಾಶ ಮಾಡುವ ಉದ್ದೇಶ ಯಾರಲ್ಲಿಯೂ ಇರುತ್ತಿರಲಿಲ್ಲ. ಆದರೆ ಬಾಬ್ರಿ ಮಸೀದಿಯನ್ನು ಧ್ವಂಸ ಮಾಡಲು ಹೋಗಿದ್ದ ಕರಸೇವಕರ(?) ಕೈಯಲ್ಲಿ ಇಂತಹ ಕೇಸರಿ ಧ್ವಜಗಳನ್ನು ದೇಶ ಕಂಡ ನಂತರ ಆ ಬಾವುಟದ ಬಗ್ಗೆ ಜನರ ದೃಷ್ಟಿ ಬದಲಾಯಿತು. ಅದೊಂದು ಆಕ್ರಮಣಕಾರಿ ಸಿದ್ಧಾಂತವನ್ನು ಪ್ರತಿಪಾದಿಸುವವರ ಲಾಂಛನವಾಯಿತು. ಕೇಸರಿ ಬಾವುಟದ ಬಗ್ಗೆ ಇದುವರೆಗೆ ಇದ್ದ ಗೌರವ ಮಾಯವಾಯಿತು. ಅದೊಂದು ಭಯ ಹುಟ್ಟಿಸುವ ಸಂಕೇತವಾಯಿತು.

ಆದಾಗ್ಯೂ ಶಾಲೆ ಕಾಲೇಜುಗಳಲ್ಲಿ ಅಂತಹ ವಾತಾವರಣ ಈಗಷ್ಟೇ ತೀವ್ರಗೊಂಡಿದೆ. ಕರಾವಳಿಯ ಜಿಲ್ಲೆಗಳಲ್ಲಿ ಅದು ಗೋಚರಿಸುತ್ತದೆ. ಭೀತಿ ಹುಟ್ಟಿಸುತ್ತದೆ. ಭೀತಿ ಹುಟ್ಟಿಸುವುದು ಅವರ ಉದ್ದೇಶವೇ ಆಗಿದೆ. ಇಲ್ಲಿಯವರೆಗೆ ಹಿಂದು ಮತ್ತು ಮುಸಲ್ಮಾನ ವಿದ್ಯಾರ್ಥಿ ವಿದ್ಯಾರ್ಥಿನಿಯರು ಅಣ್ಣ ತಮ್ಮಂದಿರಂತೆ, ಅಕ್ಕ ತಂಗಿಯರಂತೆ ಇದ್ದವರು ಈಗ ಪರಸ್ಪರ ವೈರಿಗಳಂತೆ ಕಾದಾಡಲು ಮುಂದಾಗುತ್ತಿದ್ದಾರೆ. ಕೇಸರಿ ಶಾಲು, ಕೇಸರಿ ಬಾವುಟ ಇಂದು ಭಯಾನಕ ಬೆಂಕಿಯನ್ನು ನೆನಪಿಸುತ್ತದೆ. ಕರಾವಳಿ ಜಿಲ್ಲೆಗಳನ್ನು ಕೇಸರಿ ಪ್ರಯೋಗ ಶಾಲೆಗಳನ್ನಾಗಿ ಪರಿವರ್ತಿಸಲಾಗುತ್ತಿದೆ. ವಿದ್ಯಾರ್ಥಿಗಳಲ್ಲಿದ್ದ ಪ್ರೀತಿ ವಿಶ್ವಾಸ ನಾಶಮಾಡಲಾಗುತ್ತಿದೆ. ಕೇಸರಿ ಶಾಲು ಧರಿಸಲು ನಿರಾಕರಿಸುವ ವಿದ್ಯಾರ್ಥಿಗಳ ಮೇಲೆ ಹಲ್ಲೆ ಮಾಡಲಾಗುತ್ತದೆ. ತಮ್ಮ ರಕ್ಷಣೆಗಾಗಿ ಮುಖಕ್ಕೆ ಕಟ್ಟಿಕೊಳ್ಳುವ ಹಿಜಾಬ್ ಮುಸ್ಲಿಂ ಹೆಣ್ಣು ಮಕ್ಕಳ ದೌರ್ಜನ್ಯಕ್ಕೆ ಕಾರಣವಾಗುತ್ತಿದೆ.

ಯಾಕೆ ಹೀಗೆ? ಬಲಹೀನರ ಮೇಲೆ ದೌರ್ಜನ್ಯ ಎಸಗುವುದು ಯಾಕೆ? ಅವರು ತಮ್ಮ ಪಾಡಿಗೆ ತಾವು ಶಿರವಸ್ತ್ರ ಧರಿಸುವುದನ್ನು ಯಾಕೆ ಸಹಿಸಲಾಗುತ್ತಿಲ್ಲ? ತಲೆಯ ಮೇಲೆ ಬಟ್ಟೆ ಮುಚ್ಚಿಕೊಳ್ಳುವುದು ಒಂದಲ್ಲ ಒಂದು ರೀತಿಯಲ್ಲಿ ಎಲ್ಲ ಸಂಸ್ಕೃತಿಗಳಲ್ಲಿ ಕಾಣುತ್ತೇವೆ. ಹಿಂದು ಮಹಿಳೆ ತಾನು ತೊಟ್ಟ ಸೀರೆಯ ಸೆರಗನ್ನು ತಲೆಗೆ ಮುಚ್ಚಿಕೊಳ್ಳುತ್ತಾಳೆ. ಮುಸ್ಲಿಂ ಸಮುದಾಯದ ಪುಟ್ಟ ಹುಡುಗಿಯು ಸಹ ಶಾಲೆಗೆ (ಮದರಾಸ) ಹೋಗುವಾಗ ತಲೆಗೆ ಒಂದು ಬಟ್ಟೆಯ ತುಂಡನ್ನಾದರೂ ಕಟ್ಟಿಕೊಳ್ಳುತ್ತಾಳೆ. ಕ್ರಿಶ್ಚಿಯನ್ ಹುಡುಗಿಯರು ಚರ್ಚಿಗೆ ಹೋಗುವಾಗ ತಲೆಯನ್ನು ಕಪ್ಪು ಅಥವ ಬಿಳಿ ವೇಲ್‌ನಿಂದ ಮುಚ್ಚಿಕೊಳ್ಳುತ್ತಾರೆ. ಹೀಗೆ ತಲೆ ಮುಖ ಮುಚ್ಚಿಕೊಳ್ಳುವ ಬೇರೆ ಬೇರೆ ಪದ್ಧತಿಗಳು ನಮ್ಮ ವಿಭಿನ್ನ ಸಂಸ್ಕೃತಿಯಲ್ಲಿ ಇವೆ. ಇದ್ಯಾವುದೂ ಆಕ್ಷೇಪಾರ್ಹವಾಗಿ ನಮಗೆ ಇದುವರೆಗೂ ಕಂಡಿಲ್ಲ. ಈಗ ಕೆಲವು ಹೆಣ್ಣುಮಕ್ಕಳನ್ನು ಪ್ರತ್ಯೇಕವಾಗಿ ಕಾಣುವ ಪ್ರವೃತ್ತಿಯನ್ನು ಬೆಳೆಸಲಾಗುತ್ತದೆ. ಈ ದ್ವೇಷ ಸಾಧನೆ, ಅಸಹಿಷ್ಣುತೆಗೆ ಕೇಸರಿ ಶಾಲು, ಕೇಸರಿ ಧ್ವಜವನ್ನು ಬಳಸಲಾಗುತ್ತದೆ. ವಿದ್ಯಾರ್ಥಿಗಳು ಆವೇಶಕ್ಕೆ ಒಳಗಾಗಿ, ಸಂಯಮದಿಂದ ವರ್ತಿಸುವ ಬದಲು ಇದುವರೆಗೆ ಸ್ನೇಹಿತರಾಗಿದ್ದವರನ್ನು ದ್ವೇಷಿಸಲು ಆರಂಭಿಸುತ್ತಿದ್ದಾರೆ. ಈ ವಾತಾವರಣ ವಿಕೋಪಕ್ಕೆ ಹೋಗುವ ಮೊದಲೇ ತಡೆಗಟ್ಟಬೇಕು. ಈ ಬೆಳವಣಿಗೆ ದೇಶದ ಹಿತಕ್ಕೆ ವಿರೋಧಿಯಾಗಿದೆ. ಲಗಾಮು ಇಲ್ಲದ ಮಂತ್ರಿಗಳ ಮಾತುಗಳ ಬಗ್ಗೆ ಎಚ್ಚರ ಇರಬೇಕು.

ಹಿಜಾಬ್-ಕೇಸರಿ ಶಾಲು ಅನಗತ್ಯ ವಿವಾದವನ್ನು ನಿಲ್ಲಿಸಿ-ಸಿಪಿಐ(ಎಂ) ಒತ್ತಾಯ

ಉಡುಪಿಯ ಕಾಲೇಜೊಂದರಲ್ಲಿ ಆರಂಭವಾಗಿ ಇಡಿ ರಾಜ್ಯಾದ್ಯಂತ ಶೈಕ್ಷಣಿಕ ಸಂಸ್ಥೆಗಳು ಹಾಗೂ ವಿದ್ಯಾರ್ಥಿ ಸಮುದಾಯಗಳಲ್ಲಿ ಕೋಮುವಿಭಜನೆ ಉಂಟು ಮಾಡಿರುವ ಹಿಜಾಬ್-ಕೇಸರಿ ಶಾಲು ಅನಗತ್ಯ ವಿವಾದವನ್ನು ಸಿಪಿಐ(ಎಂ) ರಾಜ್ಯ ಸಮಿತಿ ತೀವ್ರವಾಗಿ ಖಂಡಿಸುತ್ತದೆ ಮತ್ತು ಈ ಅನಗತ್ಯ ವಿವಾದವನ್ನು ಕೂಡಲೇ ನಿಲ್ಲಿಸಲು ರಾಜ್ಯ ಸರ್ಕಾರವು ಪ್ರಾಮಾಣಿಕವಾಗಿ ಮಧ್ಯಪ್ರವೇಶಿಸಬೇಕೆಂದು ಸಿಪಿಐ(ಎಂ) ಬಲವಾಗಿ ಒತ್ತಾಯಿಸುತ್ತದೆ.

ಇಡೀ ವಿವಾದಕ್ಕೆ ಮತ್ತು ರಾಜ್ಯದ ಈ ದುಸ್ಥಿತಿಗೆ ಸರಕಾರ ಮತ್ತು ಕೋಮುವಾದಿ ಸಂಘಟನೆಗಳು ಕಾರಣಗಳಾಗಿವೆ, ರಾಜ್ಯ ಸರ್ಕಾರವು ಇವುಗಳನ್ನು ಪೋಷಿಸುತ್ತಿರುವುದರಿಂದ ವಿದ್ಯಾರ್ಥಿಗಳ ನಡುವೆ ಉದ್ದೇಶಪೂರ್ವಕ ವಿಭಜನೆ ಸೃಷ್ಟಿಸಲಾಗುತ್ತಿದೆ.

ಕೆಲವು ವಿದ್ಯಾರ್ಥಿನಿಯರು ಹಿಜಾಬ್ (ತಲೆವಸ್ತ್ರ) ಧರಿಸುವುದು ಹಲವಾರು ವರ್ಷಗಳಿಂದ ಸಮವಸ್ತ್ರದ ಭಾಗವಾಗಿಯೇ ಬಂದಿದೆ. ವಿದ್ಯಾರ್ಥಿನಿಯರು ಸಮವಸ್ತ್ರದ ಜೊತೆಗೇ ಹಿಜಾಬ್ (ತಲೆ ವಸ್ತ್ರ) ಧರಿಸುವ ಪರಂಪರೆ ಹಲವು ಶಿಕ್ಷಣ ಸಂಸ್ಥೆಗಳಲ್ಲಿದೆ. ಕೆಲವು ಶಿಕ್ಷಣ ಸಂಸ್ಥೆಗಳು ಸಮವಸ್ತ್ರದ ಬಣ್ಣಕ್ಕೆ ಒಪ್ಪುವ ತಲೆವಸ್ತ್ರವನ್ನು ನಿಗದಿಪಡಿಸಿರುವುದೂ ಇದೆ. ಹೀಗಾಗಿ ಸಾಮಾನ್ಯ ಸಮವಸ್ತ್ರ ಸಂಹಿತೆಯನ್ನು ಇದು ಉಲ್ಲಂಘಿಸಿದಂತಾಗುವುದಿಲ್ಲ.

ಅಲ್ಪ ಸಂಖ್ಯಾತ ವಿದ್ಯಾರ್ಥಿನಿಯರಿಗೆ ಶಿಕ್ಷಣವನ್ನು ನಿರಾಕರಿಸುವಂತಹ ಮತ್ತು ವಿದ್ಯಾರ್ಥಿ ಸಮುದಾಯವನ್ನು ಕೋಮುವಾದಿ ನೆಲೆಯಲ್ಲಿ ವಿಭಜನೆ ಮಾಡುವ ದುರುದ್ದೇಶದಿಂದ ಮುಸ್ಲಿಂ ವಿದ್ಯಾರ್ಥಿನಿಯರು ಧರಿಸುವ ತಲೆವಸ್ತ್ರಕ್ಕೆ ವಿರುದ್ಧವಾಗಿ ಕೇಸರಿ ಶಾಲನ್ನು ಧರಿಸುವಂತೆ ಹಿಂದೂ ವಿದ್ಯಾರ್ಥಿಗಳನ್ನು ಎತ್ತಿಕಟ್ಟುವ ಕೆಲಸವನ್ನು ಕೆಲವು ಹಿಂದುತ್ವ ಕೋಮುವಾದಿ ಸಂಘಟನೆಗಳು ಮಾಡುತ್ತಿವೆ.

ಇದೇ ಸಂದರ್ಭದಲ್ಲಿ, ಮುಸ್ಲಿಂ ಅಲ್ಪಸಂಖ್ಯಾತರಲ್ಲಿ, ಹಿಂದುತ್ವ ಕೋಮುವಾದಿಗಳು ಮತ್ತು ರಾಜ್ಯದ ಬಿಜೆಪಿ ಸರ್ಕಾರ ಸೃಷ್ಟಿಸಿರುವ ಆತಂಕದ ಪರಿಸ್ಥಿತಿಯನ್ನು ಬಳಸಿಕೊಂಡು ಮುಸ್ಲಿಂ ವಿದ್ಯಾರ್ಥಿಗಳನ್ನು ಮತ್ತು ಮುಸ್ಲಿಂ ಜನತೆಯನ್ನು ಕೋಮುವಾದಿ ನೆಲೆಯಲ್ಲಿ ಕ್ರೋಢೀಕರಿಸಲು ಕೆಲವು ಮುಸ್ಲಿಂ ಮತಾಂಧ ಸಂಘಟನೆಗಳು ಪ್ರಯತ್ನಿಸುತ್ತಿವೆ.

ಬಿಜೆಪಿ ರಾಜ್ಯ ಸರ್ಕಾರವೇ ಸಂವಿಧಾನ ವಿರೋಧಿಯಾದ ಮತಾಂಧತೆಗೆ ಕುಮ್ಮಕ್ಕು ನೀಡುವ ಕಾಯ್ದೆಗಳಿಗೆ ಕ್ರಮವಹಿಸುವ ಮೂಲಕ ಮತಾಂಧ ಶಕ್ತಿಗಳಿಗೆ ಕುಮ್ಮಕ್ಕು ನೀಡುತ್ತಿದೆ. ಮಾತ್ರವಲ್ಲಾ, ವಿದ್ಯಾರ್ಥಿಗಳ ನಡುವೆ ಕೋಮು ವಿಭಜನೆಯನ್ನು ತೀವ್ರಗೊಳಿಸುವ ಉದ್ದೇಶದಿಂದ ಕೆಲವು ಸಚಿವರು ಮತ್ತು ಶಾಸಕರು ಸೌಹಾರ್ದತೆಗೆ ಭಂಗ ತರುವಂತಹ ಖಂಡನಾರ್ಹ ಪ್ರಚೋದನ ಕಾರಿ ಹೇಳಿಕೆಗಳನ್ನು ನೀಡುತ್ತಿದ್ದಾರೆ.

ಇಂತಹ ಎಲ್ಲಾ ಪ್ರಯತ್ನಗಳನ್ನು ಕೂಡಲೇ ತಡೆಯಬೇಕು.

ಸಾಮಾನ್ಯವಾಗಿ ದುರ್ಬಲ ವರ್ಗದ ಹೆಣ್ಣು ಮಕ್ಕಳು, ಅದರಲ್ಲೂ ಮುಸ್ಲಿಂ ವಿದ್ಯಾರ್ಥಿನಿಯರು ಶಿಕ್ಷಣವನ್ನು ಹೊಂದುವುದೇ ಕಷ್ಟಕರವಾಗಿರುವಾಗ, ಕೆಲವು ಚೌಕಟ್ಟುಗಳಿಗೆ ಒಳಪಟ್ಟು ಶಾಲಾ ಕಾಲೇಜಿಗೆ ಬರುತ್ತಾರೆ. ಅವರ ಶಿಕ್ಷಣಾಸಕ್ತಿಯನ್ನು ಬೆಂಬಲಿಸುವ ಮನೋಭಾವವನ್ನು ಎಲ್ಲಾ ವಿದ್ಯಾರ್ಥಿಗಳಲ್ಲೂ ಬೆಳೆಸುವುದು ಇಂದಿನ ಅಗತ್ಯವಾಗಿದೆ. ಆದ್ದರಿಂದ ಹಿಜಾಬ್ ಪ್ರಶ್ನೆಯನ್ನು ಕೋಮು ಪ್ರಶ್ನೆಯನ್ನಾಗಿ ಪರಿವರ್ತಿಸುವ ಪ್ರಯತ್ನಗಳನ್ನು ಸೋಲಿಸಬೇಕು.

ಭೇಟಿ ಪಡಾವ್ ಭೇಟಿ ಬಚಾವ್ ಘೋಷಣೆ ನೀಡುವ ಬಿಜೆಪಿ ಸರ್ಕಾರ, ಮುಸ್ಲಿಂ ಹೆಣ್ಣು ಮಕ್ಕಳ ವಿದ್ಯಾಭ್ಯಾಸವನ್ನು ಮೊಟಕು ಮಾಡುವ ಇಂತಹ ಸಂಚುಗಳನ್ನು ನಿಲ್ಲಿಸಬೇಕು.

ಕೇಂದ್ರ-ರಾಜ್ಯ ಸರ್ಕಾರಗಳ ನೀತಿಗಳು ಜನತೆಯಲ್ಲಿ ತೀವ್ರವಾದ ಅತೃಪ್ತಿಯನ್ನು ಸೃಷ್ಟಿಸುತ್ತಿವೆ. ಲೂಟಿಕೋರ ಕಾರ್ಪೊರೇಟ್ ಪರವಾದ ಕೇಂದ್ರ ಸರ್ಕಾರದ ಜನವಿರೋಧಿ ಬಜೆಟ್ ಹಾಗೂ ರೈತ ಮತ್ತು ಕೃಷಿ ವಿರೋಧಿ ಕಾಯ್ದೆಗಳು,ಕಾರ್ಮಿಕ ವಿರೋಧಿ ಸಂಹಿತೆಗಳು, ದಲಿತರು, ದುರ್ಬಲರು ಮತ್ತು ಜನಸಂಸ್ಕೃತಿಯ ವಿರೋಧಿಯಾದ ನೂತನ ಶಿಕ್ಷಣ ನೀತಿಯ ಜಾರಿ, ಮತಾಂಧ ಶಕ್ತಿಗಳು ಮತ್ತು ಕಾರ್ಪೊರೇಟ್ ಕಂಪನಿಗಳಿಗೆ ಜನರ ಭೂ ಸಂಪನ್ಮೂಲಗಳ ವರ್ಗಾವಣೆ, ಬೆಲೆ ಏರಿಕೆ, ನಿರುದ್ಯೋಗ, ಭ್ರಷ್ಟಾಚಾರ, ನಾರಾಯಣ ಗುರುಗಳ ಸ್ತಬ್ದ ಚಿತ್ರ ನಿರಾಕರಣೆ, ಮುಂತಾದ ವೈಫಲ್ಯಗಳನ್ನು ಮುಚ್ಚಿ ಹಾಕಿಕೊಳ್ಳಲು, ರಾಜ್ಯದ ಜನತೆಯ ಬೇರೆಡೆ ಸೆಳೆಯುವ ತಂತ್ರದ ಮುಂದುವರಿಕೆಯ ಭಾಗವಾಗಿ ಮುಂಬರುವ ಚುನಾವಣೆಗಳನ್ನು ಗುರಿಯಾಗಿಟ್ಟುಕೊಂಡು, ಹಿಜಾಬ್-ಕೇಸರಿ ಶಾಲು ವಿವಾದವನ್ನು ಅನಗತ್ಯವಾಗಿ ಸೃಷ್ಟಿಸಲಾಗಿದೆ. ರಾಜ್ಯ ಬಿಜೆಪಿ ಸರ್ಕಾರದ ವಿಭಜನಕಾರಿ ಕೋಮುವಾದಿ ಆಡಳಿತದಿಂದಾಗಿ ರಾಜ್ಯದಲ್ಲಿ ಅಪಾಯಕಾರಿ ಸನ್ನಿವೇಶವನ್ನು ಸೃಷ್ಟಿಸಲಾಗಿದೆ. ಕೋಮುವಾದಿ ಸಂಘಟನೆಗಳು ವಿದ್ಯಾರ್ಥಿಗಳನ್ನು ಹಿಂಸಾಚಾರದಲ್ಲಿ ತೊಡಗಿಸಿ, ಅವರ ಶೈಕ್ಷಣಿಕ ಭವಿಷ್ಯವನ್ನು ಮುಂದಿನ ಜೀವನವನ್ನು ವಿನಾಶದತ್ತ ನೂಕುತ್ತಿವೆ. ಮಾತ್ರವಲ್ಲಾ ಕಾನೂನು ಸುವ್ಯವಸ್ಥೆಯನ್ನು ಹಾಳು ಗೆಡವಲಾಗುತ್ತಿದೆ.

ಈ ಎಲ್ಲಾ ಹಿನ್ನೆಲೆಯಲ್ಲಿ, ರಾಜ್ಯ ಸರ್ಕಾರವು ತನ್ನ ಕೋಮುವಾದಿ ಮತ್ತು ವಿಭಜನಕಾರಿ ನೀತಿಯನ್ನು ಕೈಬಿಟ್ಟು, ವಿದ್ಯಾರ್ಥಿಗಳ ಹಾಗೂ ಶೈಕ್ಷಣಿಕ ಸಂಸ್ಥೆಗಳಲ್ಲಿ ಮತ್ತು ರಾಜ್ಯದ ಜನತೆಯ ನಡುವೆ ಸಾಮರಸ್ಯವನ್ನು ಮೂಡಿಸಲು ಮುಂದಾಗಬೇಕು. ವಿದ್ಯಾರ್ಥಿಗಳನ್ನು ಹಿಂಸಾಚಾರಕ್ಕೆ ನೂಕಲು ನೇರವಾಗಿ ಕುಮ್ಮಕ್ಕು ನೀಡಿರುವ ಬಜರಂಗದಳ ಮುಂತಾದ ಸಂಘಟನೆಗಳು ಮತ್ತು ವ್ಯಕ್ತಿಗಳ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಬೇಕು. ಮಂಡ್ಯದಲ್ಲಿ ಮುಸ್ಲಿಂ ವಿದ್ಯಾರ್ಥಿನಿಗೆ ರಕ್ಷಣೆ ನೀಡದೆ ದಾಳಿಯನ್ನು ಬೆಂಬಲಿಸಿದ ಪೊಲೀಸ್ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕು. ಹಿಂಸಾಚಾರದಲ್ಲಿ ಕೊಲ್ಲಲ್ಪಟ್ಟ ವಿದ್ಯಾರ್ಥಿಗೆ 10 ಲಕ್ಷ ರೂಗಳ ಪರಿಹಾರ ನೀಡಬೇಕು. ವಿದ್ಯಾರ್ಥಿಗಳ ಶೈಕ್ಷಣಿಕ ಜೀವನಕ್ಕೆ ತೊಂದರೆಯಾಗದ ರೀತಿಯಲ್ಲಿ ಶಾಲಾ ಕಾಲೇಜುಗಳನ್ನು ಪುನರಾರಂಭಿಸಬೇಕು, ಎಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯು ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

ಕಾನೂನು ಸುವ್ಯವಸ್ಥೆ ಕಾಪಾಡವಲ್ಲಿ ರಾಜ್ಯ ಬಿಜೆಪಿ ಸರ್ಕಾರ ವಿಫಲವಾಗಿದೆ. ಅದರ ನೇರ ಹೊಣೆಗಾರಿಕೆ ರಾಜ್ಯ ಗೃಹ ಸಚಿವರದಾಗಿದ್ದು ಅವರು ಕೂಡಲೆ ರಾಜಿನಾಮೆ ನೀಡಬೇಕೆಂದು ಇಲ್ಲವಾದಲ್ಲಿ ಅವರನ್ನು ಸಂಪುಟದಿಂದ ವಜಾ ಮಾಡ ಬೇಕು ಎಂದು ಸಿಪಿಐ(ಎಂ) ರಾಜ್ಯ ಸಮಿತಿಯು ಆಗ್ರಹಿಸುತ್ತದೆ.

ಶೈಕ್ಷಣಿಕ ಸಂಸ್ಥೆಗಳು, ವಿದ್ಯಾರ್ಥಿಗಳು ಮತ್ತು ನಾಗರಿಕರು ರಾಜ್ಯದಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಬಲಪಡಿಸಲು ಮತ್ತು ಕೋಮುವಾದಿ ಶಕ್ತಿಗಳನ್ನು ಜನಮನದಿಂದ ದೂರ ತಳ್ಳಬೇಕೆಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಮನವಿ ಮಾಡಿದೆ.

ಕರಾವಳಿಯಲ್ಲಿ ಪ್ರಾರಂಭವಾಗಿ ರಾಜ್ಯದ ಇತರೆಡೆ ಹಬ್ಬಲು ಪ್ರಯತ್ನಿಸುತ್ತಿರುವ ಶಿಕ್ಷಣ ಸಂಸ್ಥೆಗಳ ವಸ್ತ್ರ ಸಂಹಿತೆಯ ವಿವಾದ
ಮೂಲಭೂತವಾದಿ ಮತ್ತು ಕೋಮುವಾದೀ ಶಕ್ತಿಗಳಿಂದ ಶಿಕ್ಷಣ ಸಂಸ್ಥೆಗಳನ್ನು ರಕ್ಷಿಸಲು ಮತ್ತು ವಿದ್ಯಾರ್ಥಿನಿಯರ ಶಿಕ್ಷಣದ ಹಕ್ಕನ್ನು ಉಳಿಸಲು ಒತ್ತಾಯ

ಎಲ್ಲ ಧರ್ಮಗಳ ವಿದ್ಯಾರ್ಥಿಗಳ ಶೈಕ್ಷಣಿಕ ಹಕ್ಕು ಕಾಪಾಡಲು ಒತ್ತಾಯ

ಕೋವಿಡ್ ಕಾರಣದಿಂದ ಕಳೆದೆರಡು ವರ್ಷಗಳಿಂದ ನೇರ ತೊಂದರೆಗೆ ಒಳಗಾಗಿದ್ದ ಶಿಕ್ಷಣ ವ್ಯವಸ್ಥೆಯ ಮೇಲೆ ಈಗ ಮೂಲಭೂತವಾದ ಮತ್ತು ಕೋಮುವಾದದ ಕರಿ ನೆರಳು ಆವರಿಸಿದೆ. ಇದ್ದಕ್ಕಿದ್ದಂತೆ ಉಡುಪಿ ಸರಕಾರಿ ಪಿ.ಯು ಕಾಲೇಜಿನಲ್ಲಿ ಹಿಜಾಬ್–ಶಿರ ವಸ್ತ್ರದ ವಿವಾದ ಎದ್ದಿದೆ. ಅದು ಮುಂದುವರೆದು ಕುಂದಾಪುರ ಸರಕಾರಿ ಪಿ.ಯು.ಕಾಲೇಜಿನಲ್ಲಿ ಸ್ವತಃ ಪ್ರಿನ್ಸಿಪಾಲರೇ ಖುದ್ದಾಗಿ ಗೇಟ್ ಬಂದ್ ಮಾಡಿ ಹಿಜಾಬ್ ಧರಿಸಿ ಬಂದ ಮುಸ್ಲಿಂ ಯುವತಿಯರನ್ನು ಒಳಗೆ ಬಾರದಂತೆ ತಡೆದಿರುವುದು ಸಾಮಾಜಿಕ ಮಾಧ್ಯಮದಲ್ಲಿ ಬಿತ್ತರವಾಗಿದೆ. ಇದು ನಿಧಾನವಾಗಿ ಬೇರೆ ಬೇರೆ ಜಿಲ್ಲೆಗಳಿಗೂ ಹಬ್ಬುತ್ತಿರುವುದು ಅನಪೇಕ್ಷಿತ ಬೆಳವಣಿಗೆಯಾಗಿದೆ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ವಿರೋಧಿಸಿದೆ.

ಹಿಜಾಬ್–ಶಿರವಸ್ತ್ರಗಳನ್ನು ತಮ್ಮ ಧಾರ್ಮಿಕ ನಂಬಿಕೆಯ ಕಾರಣದಿಂದ ಮುಸ್ಲಿಂ ಮಹಿಳೆಯರು ತಮ್ಮ ಧಾರ್ಮಿಕ ಆಚರಣೆಯ ಭಾಗವಾಗಿ ಧರಿಸುವುದು ಕರ್ನಾಟಕದಂತಹ ರಾಜ್ಯಗಳಲ್ಲಿ ಸಾಮಾನ್ಯ ಸಂಗತಿಯಾಗಿದೆ. ಇದಕ್ಕೆ ವಿರೋಧವಾಗಿ ಕೆಲ ವಿದ್ಯಾರ್ಥಿಗಳು ಕಾಲೇಜಿಗೆ ಕೇಸರೀ ಶಾಲು ಹೊದ್ದು ಬಂದು ಅನಗತ್ಯ ಕೋಮು ಭಾವನೆಯನ್ನು ಕೆರಳಿಸಲು ಪ್ರಯತ್ನಗಳನ್ನು ನಡೆಸುತ್ತಿರುವುದೂ ವರದಿಯಾಗುತ್ತಿದೆ. ಈ ಘಟನೆಗಳನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ತೀವ್ರವಾಗಿ ಖಂಡಿಸಿದೆ.

ಮೂಲಭೂತವಾದಿ ಮತ್ತು ಕೋಮುವಾದೀ ಶಕ್ತಿಗಳು ಈ ತೆರನ ವಸ್ತ್ರ ವಿವಾದವನ್ನು ಆಗಾಗ ಕೆದಕಿ ಶೈಕ್ಷಣಿಕ ವಾತಾವರಣವನ್ನು ಹಾಳು ಮಾಡುವುದು ಕರ್ನಾಟಕದಲ್ಲಿ ನಡೆಯುತ್ತಲೇ ಇದೆ. ಆದರೆ ಸರಕಾರಗಳು ಇದಕ್ಕೊಂದು ಶಾಶ್ವತ ಪರಿಹಾರ ಕಂಡು ಹಿಡಿಯದೇ ಪ್ರಕ್ಷುಬ್ಧದ ಬೆಂಕಿಯಲ್ಲಿ ತಮ್ಮ ರಾಜಕೀಯ ಬೇಳೆಯನ್ನು ಬೆಯಿಸಿಕೊಳ್ಳುವ ಕುಟಿಲತೆಯನ್ನು ಮೆರೆದಿವೆ. ತತ್ಪರಿಣಾಮವಾಗಿ ಪ್ರಚೋದಕ ಶಕ್ತಿಗಳ ಕುಮ್ಮಕ್ಕಿನಿಂದ ಈ ಶೈಕ್ಷಣಿಕ ವರ್ಷದ ಅಂತಿಮ ಘಟ್ಟದಲ್ಲಿ ವಿದ್ಯಾರ್ಥಿಗಳು ಪರೀಕ್ಷೆಗೆ ತಯಾರಿ ನಡೆಸುವ ಬದಲು ವಸ್ತ್ರ ಸಂಹಿತೆಯ ವಿವಾದವನ್ನಿಟ್ಟುಕೊಂಡು ಬೀದಿಯ ಮೇಲೆ ಇರುವಂತಾಗಿದೆ. ಮತ್ತು ಅದರ ನೇರ ದುಷ್ಪರಿಣಾಮ ಮುಸ್ಲಿಂ ವಿದ್ಯಾರ್ಥಿನಿಯರ ಶಿಕ್ಷಣದ ಮೇಲಾಗುತ್ತಿದ್ದು ಅದನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯು ಉಗ್ರವಾಗಿ ಖಂಡಿಸಿದೆ.

ದೇಶದ ಸಂವಿಧಾನ ಪ್ರತಿಯೊಬ್ಬರ ಧಾರ್ಮಿಕ ಹಕ್ಕನ್ನು ಗೌರವಿಸಲು ಹೇಳುತ್ತದೆ. ಕಲಮು 25 ಇದನ್ನು ಸ್ಪಷ್ಟ ಪಡಿಸುತ್ತದೆ. ಹಾಗೆಯೇ ಕಲಮು 15(1) ಮತ್ತು 15(2) ಹುಟ್ಟಿದ ಸ್ಥಳ, ಧರ್ಮ, ಲಿಂಗ ಜಾತಿ ಮುಂತಾದ ಯಾವುದೇ ಕಾರಣಗಳಿಂದಾಗಿ ತಾರತಮ್ಯ ಮಾಡದಂತೆ ಮತ್ತು ಯಾರಿಗೂ ಸಾರ್ವಜನಿಕ ಸ್ಥಳಗಳಿಗೆ ಪ್ರವೇಶವನ್ನು ನಿರಾಕರಿಸಲಾಗದು ಎಂದಿದೆ. ಕಲಮು 21–ಎ ಶಿಕ್ಷಣದ ಹಕ್ಕನ್ನೂ ನೀಡುತ್ತದೆ. 29(2) ರಾಜ್ಯ ಸರಕಾರದ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಧರ್ಮದ ಆಧಾರದಲ್ಲಿ ತಾರತಮ್ಯ ಮಾಡುವುದವನ್ನು ನಿಷೇಧಿಸುತ್ತದೆ. ಹಾಗೆಯೇ ಕಲಮು 21 ಎಲ್ಲರಿಗೂ ಘನತೆಯ ಬದುಕನ್ನು ಖಚಿತಪಡಿಸುತ್ತದೆ. ಈಗ ಕರ್ನಾಟಕದಲ್ಲಿ ನಡೆಯುತ್ತಿರುವ ಘಟನೆಗಳಿಂದಾಗಿ ಮುಸ್ಲಿಂ ವಿದ್ಯಾರ್ಥಿನಿಯರು ಈ ಎಲ್ಲ ಹಕ್ಕುಗಳಿಂದ ವಂಚಿತರಾಗುತ್ತಾರೆ ಎಂದಿದೆ.

ಪ್ರಕರಣವೀಗ ಕರ್ನಾಟಕ ಹೈಕೋರ್ಟಿನ ಅಂಗಳದಲ್ಲಿದೆ. ಹಾಗಿದ್ದಾಗ್ಯೂ ಈ ಮಧ್ಯೆ ಕರ್ನಾಟಕ ಸರಕಾರವು 2014 ರಲ್ಲಿ ಶೈಕ್ಷಣಿಕ ಸಂಸ್ಥೆಗಳಲ್ಲಿನ ಸಮವಸ್ತ್ರದ ಕುರಿತು ಹೊರಡಿಸಲಾದ ಸರಕಾರದ ನಡವಳಿಯನ್ನು 05–02–2022 ರಂದು ಮತ್ತೆ ಹೊರಡಿಸಿ ಸಮವಸ್ತ್ರ ನೀತಿಯನ್ನು ಉಲ್ಲೇಖಿಸಿದೆ. ಆದರೆ ಇಡೀ ಶೈಕ್ಷಣಿಕ ವರ್ಷದಲ್ಲಿ ಈ ಬಗ್ಗೆ ಯಾವುದೇ ಸೂಚನೆ ಇಲ್ಲದೇ ಈಗ ಏಕಾಏಕಿ ವಿವಾದವನ್ನೂ ಎಬ್ಬಿಸಿ, ಸಮವಸ್ತ್ರ ನೀತಿಯನ್ನು ಉಲ್ಲೇಖಿಸಿದೆ. ಮತ್ತು ಸಮಾನತೆ ಐಕ್ಯತೆಯನ್ನು ಕಾಪಾಡಿಕೊಂಡು ಹಾಗೂ ಸಾರ್ವಜನಿಕ ಸುವ್ಯವಸ್ಥೆಗೆ ಭಂಗ ಬರದಂತೆ ಇರುವ ಉಡುಪುಗಳನ್ನು ಧರಿಸಿಕೊಳ್ಳತಕ್ಕದ್ದೆಂದು ಆದೇಶಿಸಿದೆ. ಇದೇ ಸಂದರ್ಭದಲ್ಲಿ ರಾಜ್ಯದ ಪದವಿ ಪೂರ್ವ ಶಿಕ್ಷಣ ಇಲಾಖೆಯ ಮಾರ್ಗಸೂಚಿ 2021–22 ರ ಪ್ರಕಾರ 'ಸರ್ಕಾರ ಪದವಿ ಪೂರ್ವ ಶಿಕ್ಷಣ ಇಲಾಖೆ/ಶಿಕ್ಷಣ ಕಾಯ್ದೆಯಲ್ಲಿ ಪದವಿ ಪೂರ್ವ ಶಿಕ್ಷಣದಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಸಮವಸ್ತ್ರ ಕಡ್ಡಾಯಗೊಳಿಸಿರುವುದಿಲ್ಲ. ಆದರೆ ಕೆಲವು ಕಾಲೇಜಿನ ಪ್ರಾಂಶುಪಾಲರು ಮತ್ತು ಆಡಳಿತ ಮಂಡಳಿಯವರು ಸಮವಸ್ತ್ರವನ್ನು ಕಡ್ಡಾಯಗೊಳಿಸಿರುವುದು ನಿಯಮಬಾಹಿರವಾಗಿರುತ್ತದೆ. ಮೇಲ್ಕಂಡ ಸೂಚನೆಗಳನ್ನು ಉಲ್ಲಂಘಿಸಿದಲ್ಲಿ ಗಂಭೀರವಾಗಿ ಪರಿಗಣಿಸಲಾಗುವುದು.' ಎಂದು ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. ಆದರೆ ರಾಜ್ಯದ ಶಿಕ್ಷಣ ಸಚಿವರು 'ರಾಜ್ಯದಲ್ಲಿ 2013 ಮತ್ತು 2018ರಲ್ಲಿ ರೂಪಿಸಿದ ನಿಯಮದ ಪ್ರಕಾರ ಶಾಲಾ ಕಾಲೇಜು ಅಭಿವೃದ್ಧಿ ಸಮಿತಿಗಳು ಸಮವಸ್ತ್ರ ಜಾರಿ ಮಾಡಿವೆ.' ಎಂದು ಹೇಳಿದ್ದಾರೆ. ಹೀಗೆ ಒಂದಕ್ಕೊಂದು ವ್ಯತಿರಿಕ್ತ ನಡವಳಿಗಳು, ಮಾರ್ಗಸೂಚಿಗಳು ಸರಕಾರದಿಂದಲೇ ಬಂದಿರುವಾಗ ಇವು ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯಕ್ಕೆ ಮಾರಕವಲ್ಲವೇ ಎಂದು ಸಂಘಟನೆಯು ಪ್ರಶ್ನಿಸಿದೆ.

ಮಹಿಳೆಯರ ಮೇಲೆ ದೌರ್ಜನ್ಯಗಳು ನಡೆದಾಗ ಅವರ ಮೈ ಮುಚ್ಚುವಂತೆ ಬಟ್ಟೆ ಧರಿಸಿಲ್ಲದ್ದಕ್ಕೇ ದೌರ್ಜನ್ಯಗಳು ನಡೆದವೆಂದು ದೂಷಣೆ ಮಾಡುವ ಮನಸ್ಸುಗಳೇ ತಮ್ಮ ಧಾರ್ಮಿಕ ನಂಬಿಕೆ ಮತ್ತು ಆಚರಣೆಯ ಭಾಗವಾಗಿ ಮುಸ್ಲಿಂ ಯುವತಿಯರು ಧರಿಸುವ ದೇಹದ ಕೆಲವು ಭಾಗಗಳನ್ನು ಮರೆ ಮಾಡುವ ಹಿಜಾಬ್–ಶಿರವಸ್ತ್ರಗಳು ಸಾರ್ವಜನಿಕ ಸುವ್ಯವಸ್ಥೆಗೆ ಭಂಗ ತರುವುದು ಎಂಬರ್ಥದ ಮಾತುಗಳಲ್ಲಿ ಸ್ಪಷ್ಟ ರಾಜಕಾರಣ ಇಣುಕುತ್ತಿದೆ. ಇದೇ ನಡವಳಿಯಲ್ಲಿ ಪ್ರಸ್ತಾಪಿಸಿದಂತೆ ಕಾಲೇಜು ಅಭಿವೃದ್ಧಿ ಮಂಡಳಿಗೆ ಸಮವಸ್ತ್ರವನ್ನು ನಿರ್ಧರಿಸುವ ಅಧಿಕಾರವನ್ನೂ ನೀಡಲಾಗಿದೆ. ಆ ಅಧಿಕಾರವನ್ನು ಪ್ರಯೋಗಿಸುವಾಗ ಅಭಿವೃದ್ಧಿ ಮಂಡಳಿಗಳು ತಮ್ಮ ಸೈದ್ಧಾಂತಿಕ ನಿಲುವಿಗನುಗುಣವಾಗಿ ಸಮವಸ್ತ್ರ ನೀತಿಯನ್ನು ರೂಪಿಸುವ ಅಪಾಯವಿದೆ. ಇವು ವಿದ್ಯಾರ್ಥಿಗಳ ಧಾರ್ಮಿಕ ನಂಬಿಕೆ ಆಚರಣೆಗಳು ಮತ್ತು ಪರಿಪಾಠಗಳನ್ನು ಪರಿಗಣನೆಗೆ ತೆಗೆದುಕೊಳ್ಳದೇ ಇದ್ದಲ್ಲಿ ಅದು ಕೆಟ್ಟ ಪರಿಣಾಮಗಳನ್ನು ಬೀರುತ್ತವೆ. ಈ ಎಚ್ಚರವನ್ನು ಸರಕಾರ ತೆಗೆದುಕೊಳ್ಳಬೇಕು ಮತ್ತು ಯಾವುದೇ ಕಾರಣದಿಂದ ಹೆಣ್ಣುಮಕ್ಕಳು ವಿದ್ಯಾಭ್ಯಾಸದ ಅವಕಾಶದಿಂದ ವಂಚಿತರಾಗದಂತೇ ಕ್ರಮ ವಹಿಸಬೇಕೆಂದು ಮತ್ತು ಸಧ್ಯದ ಪರಿಸ್ಥಿತಿಯಲ್ಲಿ ಯಥಾಸ್ಥಿತಿಯನ್ನು ಕಾಯ್ದುಕೊಳ್ಳುವುದೇ ಸರಿಯಾದ ನಡೆ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯು ಒತ್ತಾಯಿಸಿದೆ.

ಈ ಎಲ್ಲ ಹಿನ್ನೆಲೆಯಲ್ಲಿ ಉಡುಪಿನ ಕಾರಣದಿಂದ ಮುಸ್ಲಿಂ ವಿದ್ಯಾರ್ಥಿನಿಯರ ಶೈಕ್ಷಣಿಕ ಹಕ್ಕುಗಳನ್ನು ಕಿತ್ತುಕೊಳ್ಳುವ ಮತ್ತು ಆ ಮೂಲಕ ಪ್ರಜಾತಾಂತ್ರಿಕ ವ್ಯವಸ್ಥೆಯ ಭಾಗವಾಗಿ ಸ್ವತಂತ್ರ ವ್ಯಕ್ತಿತ್ವ ರೂಪಿಸಿಕೊಳ್ಳುವ ಅವಕಾಶದಿಂದ ಅವರನ್ನು ವಂಚಿತರನ್ನಾಗಿಸುವುದನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ವಿರೋದಿಸಿದೆ.

ವಿದ್ಯಾರ್ಥಿಗಳು ಪ್ರಚೋದಕರ ಪ್ರಚೋದನೆಗೆ ಒಳಗಾಗಿ ತಮ್ಮ ಭವಿಷ್ಯವನ್ನು ಹಾಳುಮಾಡಿಕೊಳ್ಳದೆಯೇ, ತಾವು ಶಿಕ್ಷಣದ ಸಂದರ್ಭದಲ್ಲಿ ಎದುರಿಸುತ್ತಿರುವ ಹಲವು ಮೂಲಭೂತ ಸಮಸ್ಯೆಗಳತ್ತ ಸರಕಾರದ ಗಮನ ಸೆಳೆಯುವ ಮತ್ತು ಆಡಳಿತ ಮಂಡಳಿಯು ಸಕ್ರಿಯಾತ್ಮಕವಾಗಿ ಸ್ಪಂದಿಸುವಂತೆ ಒತ್ತಾಯಿಸುವ ಪ್ರಗತಿಪರ ಹೋರಾಟಗಳ ಮೂಲಕ ರಾಜ್ಯದ ಶಿಕ್ಷಣ ವ್ಯವಸ್ಥೆಯನ್ನು ಬಲ ಪಡಿಸುವ ಕೆಲಸಕ್ಕೆ ತಮ್ಮ ಕೊಡುಗೆ ನೀಡಬೇಕೆಂದು ವಿನಂತಿಸಿದೆ.

ಒತ್ತಾಯಗಳು:

1. ಎಲ್ಲ ಧರ್ಮಗಳ ವಿದ್ಯಾರ್ಥಿಗಳ ಶೈಕ್ಷಣಿಕ ಹಕ್ಕುಗಳನ್ನು ರಕ್ಷಿಸಬೇಕು.
2. ಪ್ರಚೋದನೆ ಮಾಡುವ ಯಾವುದೇ ಮೂಲಭೂತವಾದೀ ಮತ್ತು ಕೋಮುವಾದೀ ಶಕ್ತಿಗಳ ಕೈ ಗೊಂಬೆಯಾಗದೇ ಸರಕಾರ ತನ್ನ ಸಾಂವಿಧಾನಿಕ ಹೊಣೆಗಾರಿಕೆಯ ಅಡಿ ಕೆಲಸ ಮಾಡಬೇಕು.
3. ಉದ್ದೇಶಪೂರ್ವಕವಾಗಿ ಶೈಕ್ಷಣಿಕ ವಾತಾವರಣವನ್ನು ಹಾಳುಗೆಡಹುವ ಶಕ್ತಿಗಳನ್ನು ನಿಯಂತ್ರಿಸಬೇಕು.
4. ಭಾರತೀಯ ಜನತಾ ಪಕ್ಷದ ಶಾಸಕರು, ಸಚಿವರುಗಳು ತಮ್ಮ ಮನ ಬಂದಂತೆಲ್ಲ ಆಡುತ್ತಿರುವ ಮಾತುಗಳಿಗೆ ಕಡಿವಾಣ ಹಾಕಬೇಕು.
5. ವಿದ್ಯಾರ್ಥಿಗಳ ಭವಿಷ್ಯಕ್ಕೆ ಮಾರಕವಾಗುವ ಯಾವುದೇ ಕ್ರಮಗಳನ್ನು ಕೈಗೊಳ್ಳದೆಯೇ ದೇಶದ ಸಂವಿಧಾನದ ಅಡಿಯಲ್ಲಿ ಎಲ್ಲರಿಗೂ ಸಮಾನ ಶಿಕ್ಷಣ ಸಮಾನ ಅವಕಾಶಗಳು ದೊರೆಯುವಂತೆ ಮಾಡಲು ಸರಕಾರ ಮುಂದಾಗಬೇಕು.
6. ಶಿಕ್ಷಣದ ಹಕ್ಕು ಮೂಲಭೂತ ಹಕ್ಕಾಗಿದ್ದು ಅದನ್ನು ಸಮಾನವಾಗಿ ಎಲ್ಲರಿಗೂ ದೊರೆಯುವಂತೆ ಮಾಡಲು ಸರಕಾರ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು.

ಹೆಚ್ಚುತ್ತಿದೆ ಅಸುರಕ್ಷೆ–ತಕ್ಷಣ ಮಧ್ಯ ಪ್ರವೇಶಿಸಲು ಮಹಿಳಾ ಧ್ವನಿಗಳ ಒತ್ತಾಯ

ಕರಾವಳಿಯ ಕಾಲೇಜಿನ ವಿದ್ಯಾರ್ಥಿನಿಯರ ವೈಯಕ್ತಿಕ ಮಾಹಿತಿಗಳ ಸೋರಿಕೆ ಮತ್ತು ಅದಕ್ಕೆ ಸಂಬಂಧಿಸಿದ ವಿದ್ಯಮಾನಗಳನ್ನು ಗಂಭೀರವಾಗಿ ಪರಿಗಣಿಸಿ ಕಟ್ಟುನಿಟ್ಟಿನ ಕ್ರಮಕ್ಕೆ ಮಹಿಳಾ ಧ್ವನಿಗಳು ಒತ್ತಾಯಿಸಿದ್ದು, ಈ ಬಗ್ಗೆ ಮಹಿಳಾ ಆಯೋಗ ಹಾಗೂ ಪಿಯು ಮಂಡಳಿಗೆ ಮನವಿಯನ್ನು ಸಲ್ಲಿಸಿದೆ.

ಚಿಂತಕಿ ಕೆ.ಎಸ್ ವಿಮಲಾ, ಜನವಾದಿ ಮಹಿಳಾ ಸಂಘಟನೆ ರಾಜ್ಯಾಧ್ಯಕ್ಷೆ ದೇವಿ, ಸಾಮಾಜಿಕ ಕಾರ್ಯಕರ್ತೆ ಕೆ.ಎಸ್.ಲಕ್ಷ್ಮಿ, ಗಮನ ಮಹಿಳಾ ಸಂಘಟನೆಯ ಮಧು ಭೂಷಣ್ ನೇತ್ರತ್ವದ ನಿಯೋಗ ಮಹಿಳಾ ಆಯೋಗ ಮತ್ತು ಪಿಯು ಮಂಡಳಿಗೆ ಮನವಿ ಪತ್ರ ಸಲ್ಲಿಸಿದೆ.

ಉಡುಪಿ ಕಾಲೇಜಿನ ವಸ್ತ್ರ ಸಂಹಿತೆಯ ವಿವಾದ ಹದ್ದು ಮೀರಿದೆ. ವಿವಾದವನ್ನು ಪ್ರಾರಂಭದಲ್ಲಿಯೇ ಶಾಂತಿಯುತವಾಗಿ ಬಗೆಹರಿಸುವ ಬದಲು, ಬಗೆಹರಿಸ ಬೇಕಾದವರೇ ಉರಿಯುವ ಬೆಂಕಿಗೆ ತುಪ್ಪ ಸುರಿದ ಕಾರಣದಿಂದ ಅದೀಗ ರಾಜ್ಯಾದ್ಯಂತ ವ್ಯಾಪಿಸಿದೆ. ಪರೀಕ್ಷೆಗಳೂ ಘೋಷಣೆಯಾದ ಹೊತ್ತಿನಲ್ಲಿ ಅಭ್ಯಾಸದ ಬಗ್ಗೆ ಗಮನ ಕೊಡಬೇಕಾದ ವಿದ್ಯಾರ್ಥಿಗಳು ಬೀದಿಯ ಮೇಲೆ ಸಲ್ಲದ ಕಾರಣಕ್ಕೆ ಜಗಳಕ್ಕೆ ಸಜ್ಜಾಗಿದ್ದಾರೆ ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ಈಗ ಮತ್ತೊಮ್ಮೆ ಕಾಲೇಜು ಆಡಳಿತ ಮಂಡಳಿಯೇ ಪ್ರಮಾದವೆಸಗಿದ್ದು ಮಾಧ್ಯಮಗಳಲ್ಲಿ ಬಿತ್ತರವಾಗುತ್ತಿದೆ. ಹಿಜಾಬ್ ಧರಿಸಿ ಕಾಲೇಜಿಗೆ ಹಾಜರಾಗಲು ಅನುಮತಿ ಕೋರಿ ನ್ಯಾಯಾಲಯದ ಮೆಟ್ಟಿಲೇರಿರುವ ಮುಸ್ಲಿಂ ಸಮುದಾಯದ ವಿದ್ಯಾರ್ಥಿನಿಯರ ವೈಯಕ್ತಿಕ ವಿವರಗಳನ್ನೊಳಗೊಂಡ (ದೂರವಾಣಿ ಸಂಖ್ಯೆ, ವಿಳಾಸ, ಪೋಷಕರ ಹೆಸರು ಇತ್ಯಾದಿ) ಮಾಹಿತಿಗಳು ಎಂದರೆ ಅವರ ದಾಖಲಾತಿ ವಿವರಗಳನ್ನು ಕಾಲೇಜಿನ ಕಡತದಿಂದ ಚಿತ್ರೀಕರಿಸಿ ಹೊರಬಿಡಲಾಗಿದೆ ಎನ್ನುತ್ತವೆ ವರದಿಗಳು ಮತ್ತು ಆ ಬಾಲಕಿಯರಿಗೆ ಬೆದರಿಕೆ ಕರೆಗಳು ಬರುತ್ತಿವೆ ಎಂಬುದು ವರದಿಯಾಗಿದೆ. ಇದು ಅತ್ಯಂತ ಕಳವಳಕಾರೀ ಸಂಗತಿ ಎಂದು ಮಹಿಳಾ ಧ್ವನಿಗಳು ತಿಳಿಸಿವೆ.



ಇದು ಕಾಲೇಜು ಆಡಳಿತ ಎಸಗಿದ ಬಹು ದೊಡ್ಡ ಪ್ರಮಾದವೆಂದೂ ಹೇಳುತ್ತೇವೆ. ನ್ಯಾಯಾಲಯದಲ್ಲಿ ಪ್ರಕರಣವೊಂದರ ವಿಚಾರಣೆ ನಡೆಯುತ್ತಿರುವಾಗ ಬೆದರಿಕೆ ಒಡ್ಡಲು ಬೇಕಾದ ಮಾಹಿತಿಗಳನ್ನು ಸೋರಿಕೆ ಮಾಡಿರುವುದು ಉದ್ದೇಶವೇನೆಂದು ಸ್ಪಷ್ಟವಾಗುತ್ತಿದೆ. ಇದು ವ್ಯಕ್ತಿಗಳ ವೈಯಕ್ತಿಕ ಗೋಪ್ಯತೆಯ ಹಕ್ಕಿನ ಉಲ್ಲಂಘನೆಯಲ್ಲವೇ? ಕರ್ನಾಟಕದ ಮಹಿಳೆಯರ ಘನತೆಯ ಬದುಕುವ ಹಕ್ಕನ್ನು ಉಳಿಸುವ ಮತ್ತು ಅಪಾಯದಲ್ಲಿರುವವರ ಪರವಾಗಿ ನಿಲ್ಲಬೇಕಾದುದು ರಾಜ್ಯ ಮಹಿಳಾ ಆಯೋಗದ ಪ್ರಮುಖ ಆದ್ಯತೆಯಾಗಬೇಕು ಎಂದು ಒತ್ತಾಯಿಸಿದೆ.



ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಮಹಿಳಾ ಆಯೋಗವು ತಕ್ಷಣ ಮಧ್ಯ ಪ್ರವೇಶಿಸಬೇಕು. ರಾಜ್ಯದ ಮಹಿಳಾ ಪರ ಸಂಘಟನೆಗಳು ಮತ್ತು ವ್ಯಕ್ತಿಗಳ ಜೊತೆ ಆಯೋಗದ ನಿಯೋಗವೊಂದು ಸ್ಥಳಕ್ಕೆ ಭೇಟಿ ನೀಡಿ ತೊಂದರೆಗೆ ಒಳಗಾದ ಬಾಲಕಿಯರಿಗೆ ಧೈರ್ಯ ನೀಡಬೇಕು ಮತ್ತು ಸರಿಯಾದ ಮಾಹಿತಿಗಳನ್ನು ಪಡೆಯಬೇಕು ಎಂದು ಆಗ್ರಹಿಸಿದೆ.

ಕಾಲೇಜಿನಿಂದ ವಿದ್ಯಾರ್ಥಿನಿಯರ ವೈಯಕ್ತಿಕ ಮಾಹಿತಿಗಳ ಸೋರಿಕೆ ಮಾಡಿದವರನ್ನು ಪತ್ತೆ ಮಾಡಿ ಕಠಿಣ ಕಾನೂನು ಕ್ರಮಕ್ಕೆ ಒಳಪಡಿಸಲು ಅಗತ್ಯವಾದ ಕ್ರಮ ಕೈಗೊಳ್ಳಬೇಕು. ವಿದ್ಯಾರ್ಥಿನಿಯರು ಮತ್ತು ಅವರ ಕುಟುಂಬದವರಿಗೆ ಯಾವುದೇ ಅಪಾಯವಾಗದಂತೆ ರಕ್ಷಣೆ ನೀಡಲು ಅಗತ್ಯವಾದ ಕ್ರಮಕೈಗೊಳ್ಳಲು ರಾಜ್ಯ ಸರಕಾರವನ್ನು ಒತ್ತಾಯಿಸಬೇಕೆಂದು ಮಹಿಳಾ ಆಯೋಗಕ್ಕೆ ಸಲ್ಲಿಸಿರುವ ಮನವಿಯಲ್ಲಿ ತಿಳಿಸಿದೆ.

ಎಲ್ಲ ಧರ್ಮದ ವಿದ್ಯಾರ್ಥಿನಿಯರ ಶಿಕ್ಷಣದ ಹಕ್ಕನ್ನು ಯಾವುದೇ ತೊಂದರೆಯಿಲ್ಲದೇ ಪಡೆಯಲು ಅಗತ್ಯವಾದ ಕ್ರಮಕ್ಕಾಗಿ ರಾಜ್ಯ ಸರಕಾರವನ್ನು ಒತ್ತಾಯಿಸಿದೆ.

ದೇವದಾಸಿಯರ ಮಕ್ಕಳಿಗೆ ವಸತಿ ಶಾಲೆಯಲ್ಲಿ ಶಿಕ್ಷಣ ನೀಡಿ: ನಾಗಮೋಹನ್ ದಾಸ್ ಆಗ್ರಹ



'ದೇವದಾಸಿಯರು ಹಾಗೂ ಅವರ ಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದಾರೆ. ಕಾನೂನಿನ ಅರಿವಿನ ಕೊರತೆಯಿಂದಾಗಿ ಈಗಲೂ ಈ ಅನಿಷ್ಟ ಪದ್ಧತಿ ನಡೆಯುತ್ತಲೇ ಇವೆ. ಅವರಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣ ಒದಗಿಸುವ ಮೂಲಕ ಈ ಪಿಡುಗಿನಿಂದ ಅವರನ್ನು ವಿಮುಖರನ್ನಾಗಿ ಮಾಡಬೇಕಾದ ಅಗತ್ಯವಿದೆ. ಈ ದಿಸೆಯಲ್ಲಿ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು' ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ್ ದಾಸ್ ಒತ್ತಾಯಿಸಿದರು.

ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘದ ರಾಜ್ಯ ಘಟಕ ಹಮ್ಮಿಕೊಂಡಿದ್ದ 'ದೌರ್ಜನ್ಯದ ದೇವದಾಸಿ ಪದ್ಧತಿ ಮತ್ತು ಸರ್ಕಾರಗಳು' ಕುರಿತ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

'ದೇವದಾಸಿಯರ ಮಕ್ಕಳು ಶಾಲೆಗಳಿಂದ ಹೊರಗುಳಿಯದಂತೆ ಕ್ರಮಕೈಗೊಳ್ಳಬೇಕು. ವಸತಿ ಶಾಲೆಗಳಲ್ಲಿ ಉಚಿತ ಶಿಕ್ಷಣ ಒದಗಿಸಬೇಕು. ದೇವದಾಸಿಯರಲ್ಲಿ ಕಾನೂನಿನ ಅರಿವು ಮೂಡಿಸಬೇಕು. ಅವರಿಗೆ ಕೆಲಸ ನೀಡಿ ಅದಕ್ಕೆ ಅನುಗುಣವಾಗಿ ಕೂಲಿ ನಿಗದಿಪಡಿಸಬೇಕು. ಅವರ ಬೇಡಿಕೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಬೇಕು. ಆ ಮೂಲಕ ಈ ಅನಿಷ್ಟ ಪದ್ಧತಿಯ ನಿರ್ಮೂಲನೆಗೆ ಸರ್ಕಾರ ಪ್ರಯತ್ನಿಸಬೇಕು' ಎಂದು ಆಗ್ರಹಿಸಿದರು.

'ದೇವದಾಸಿಯರು ಮೌಢ್ಯದಿಂದ ಹೊರಬರಬೇಕು. ಪ್ರಶ್ನಿಸುವ ಮನೋಭಾವ ಬೆಳೆಸಿಕೊಳ್ಳಬೇಕು. ವೈಜ್ಞಾನಿಕ ಚಿಂತನೆ ರೂಢಿಸಿಕೊಳ್ಳಬೇಕು. ಎಲ್ಲದಕ್ಕೂ ಸರ್ಕಾರದ ಮೇಲೆ ಅವಲಂಬನೆಯಾಗದೆ ಸ್ವವಿವೇಚನೆಯಿಂದ ನಿರ್ಧಾರಗಳನ್ನು ಕೈಗೊಳ್ಳಬೇಕು. ರಾಜ್ಯದಲ್ಲಿರುವ ದೇವದಾಸಿಯರು ಹಾಗೂ ಅವರ ಸ್ಥಿತಿಗತಿ ಬಗ್ಗೆ ಸರ್ಕಾರ ಕೂಡಲೇ ಅಧ್ಯಯನ ನಡೆಸಬೇಕು' ಎಂದರು.

'ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೀಸಲಾತಿ ಹೆಚ್ಚಳದ ಕುರಿತು ನಾನು ಸರ್ಕಾರಕ್ಕೆ ವರದಿ ಸಲ್ಲಿಸಿದ್ದು, ಅದರಲ್ಲಿ ದೇವದಾಸಿಯರ ಸಮಸ್ಯೆಗಳ ಕುರಿತು ಉಲ್ಲೇಖಿಸಿದ್ದೆ. ಅವರ ಶ್ರೇಯೋಭಿವೃದ್ಧಿಗೆ ಅಗತ್ಯ ವಿಶೇಷ ಕಾರ್ಯಕ್ರಮಗಳನ್ನೂ ಸೂಚಿಸಿದ್ದೆ' ಎಂದು ಹೇಳಿದರು.

ಮಾಸಿಕ ಪಿಂಚಣಿ ರೂ. 5 ಸಾವಿರಕ್ಕೆ ಹೆಚ್ಚಿಸಿ

'ದೇವದಾಸಿಯರಿಗೆ ನೀಡಲಾಗುತ್ತಿರುವ ಸಹಾಯ ಧನ ಅಥವಾ ಮಾಸಿಕ ಪಿಂಚಣಿಯನ್ನು ರೂ. 5 ಸಾವಿರಕ್ಕೆ ಹೆಚ್ಚಿಸುವುದೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಮಾರ್ಚ್ 3, 4 ಹಾಗೂ 5ರಂದು ರಾಜ್ಯದ 20 ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಲು ನಿರ್ಧರಿಸಿದ್ದೇವೆ' ಎಂದು ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘದ ಗೌರವ ಅಧ್ಯಕ್ಷ ಯು. ಬಸವರಾಜ ತಿಳಿಸಿದರು.

'ದೇವದಾಸಿಯರಿಗೆ 9 ತಿಂಗಳಿಂದ ಪಿಂಚಣಿ ನೀಡಿಲ್ಲ. ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ದೇವದಾಸಿಯರಿಗೆ ಕೊಟ್ಟಿರುವ ಹಲವು ಸೌಕರ್ಯಗಳನ್ನು ಹಿಂದಕ್ಕೆ ಪಡೆಯಲಾಗಿದೆ. ಮೊದಲು ರೂ. 1 ಲಕ್ಷ ಸಾಲ ನೀಡಲಾಗುತ್ತಿತ್ತು. ಅದನ್ನು ರೂ. 30 ಸಾವಿರಕ್ಕೆ ಇಳಿಸಲಾಗಿದೆ. ರೂ. 50 ಸಾವಿರ ಇದ್ದ ಸಬ್ಸಿಡಿ ಮೊತ್ತವನ್ನು ರೂ. 15 ಸಾವಿರಕ್ಕೆ ತಗ್ಗಿಸಲಾಗಿದೆ. ಬಿಪಿಎಲ್ ಕಾರ್ಡ್ ಹೊಂದಿರುವವರಿಗೆ ರೂ. 5 ಕೆ.ಜಿ. ಬದಲು ರೂ. 2 ಕೆ.ಜಿ.ಅಕ್ಕಿ ನೀಡಲಾಗುತ್ತಿದೆ' ಎಂದು ದೂರಿದರು.

ರಮೇಶ್ ಆದ್ಯಪಾಡಿ ಸಂಸ್ಮರಣ ವಿಚಾರಗೋಷ್ಠಿ

ದ.ಕ.ಜಿಲ್ಲೆಯಲ್ಲಿ ಡಿವೈಎಫ್ಐ ಜಿಲ್ಲಾ ಕಾರ್ಯದರ್ಶಿಯಾಗಿದ್ದ ರಮೇಶ್ ಆದ್ಯಪಾಡಿ ವಾಹನ ಅಪಘಾತದಲ್ಲಿ ದುರ್ಮರಣಕ್ಕೀಡಾಗಿ 10 ವರ್ಷಗಳು ಆಗುತ್ತಿರುವ ಸಂದರ್ಭದಲ್ಲಿ ಅವರ ನೆನಪಿನಲ್ಲಿ ಸಮಾನ ಮನಸ್ಕರು ಮಂಗಳೂರು ವತಿಯಿಂದ ಫೆಬ್ರವರಿ 7 ರಂದು ವಿಕಾಸ ಕಚೇರಿಯಲ್ಲಿ ಸಂಸ್ಮರಣ ಕಾರ್ಯಕ್ರಮ ನಡೆಯಿತು.

ಸಂಸ್ಮರಣ ಸಂದರ್ಭದಲ್ಲಿ ನಡೆದ ವಿಚಾರಗೋಷ್ಠಿಯಲ್ಲಿ ಯುವಜನರ ಮುಂದಿರುವ ಸವಾಲುಗಳು ವಿಷಯ ಕುರಿತು ಡಿವೈಎಫ್ಐ ದ.ಕ.ಜಿಲ್ಲಾ ಅಧ್ಯಕ್ಷ ಬಿ.ಕೆ.ಇಮ್ತಿಯಾಜ್ ವಿಚಾರ ಮಂಡಿಸಿದರು.



ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ●

ಕೇಂದ್ರ ಬಜೆಟ್ ವಿರುದ್ಧ ಉಡುಪಿಯಲ್ಲಿ ಪ್ರತಿಭಟನೆ

ಕೇಂದ್ರ ಸರಕಾರ ಮಂಡಿಸಿರುವ ಈ ಸಾಲಿನ ಬಜೆಟ್ ಜನವಿರೋಧಿ ಹಾಗೂ ವಿನಾಶಕಾರಿ ಆಗಿದೆ ಎಂದು ಆರೋಪಿಸಿ ಇದರ ವಿರುದ್ಧ ಸಿಐಟಿಯು ಉಡುಪಿ ತಾಲೂಕು ಸಮಿತಿ ವತಿಯಿಂದ ಫೆಬ್ರವರಿ 4 ರಂದು ಉಡುಪಿ ನಗರದ ಅಜ್ಜರಕಾಡುವಿನಲ್ಲಿ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆಯನ್ನುದ್ದೇಶಿಸಿ ಸಿಐಟಿಯು ಜಿಲ್ಲಾಧ್ಯಕ್ಷ ಬಾಲಕೃಷ್ಣ ಶೆಟ್ಟಿ ಮಾತನಾಡಿದರು. ಸಿಐಟಿಯು ಹಿರಿಯ ಮುಖಂಡರಾದ ಪಿ.ವಿಶ್ವನಾಥ ರೈ, ಜಿಲ್ಲಾ ಖಜಾಂಚಿ ಶಶಿಧರ ಗೊಲ್ಲ, ಸಿಐಟಿಯು ಉಡುಪಿ ತಾಲೂಕು ಕಾರ್ಯದರ್ಶಿ ಕವಿರಾಜ್, ಮುಖಂಡರಾದ ಉಮೇಶ್ ಕುಂದರ್, ನಳಿನ್, ಮೋಹನ್, ವಿದ್ಯರಾಜ್, ಸುಭಾಶ್ ನಾಯಕ್ ಬ್ರಹ್ಮಾವರ, ಡೆರಿಕ್ ರೆಬೆಲ್ಲೋ, ವಿಶ್ವನಾಥ್, ಪ್ರಭಾಕರ ಕುಂದರ್ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಬಜೆಟ್ ವಿರುದ್ಧ ಬೆಳ್ತಂಗಡಿಯಲ್ಲಿ ಪ್ರತಿಭಟನೆ

ಕೇಂದ್ರ ಸರಕಾರದ ಬಜೆಟ್ ವಿರುದ್ಧ ಸಿಪಿಐ(ಎಂ) ಬೆಳ್ತಂಗಡಿ ತಾಲೂಕು ಸಮಿತಿ ನೇತೃತ್ವದಲ್ಲಿ ಫೆಬ್ರವರಿ 9 ರಂದು ಅಲ್ಲಿನ ಮಿನಿವಿಧಾನಸೌಧದ ಎದುರು ಪ್ರತಿಭಟನೆ ನಡೆಸಲಾಯಿತು. ಪ್ರತಿಭಟನೆಯನ್ನುದ್ದೇಶಿಸಿ ತಾಲೂಕು ಸಮಿತಿ ಕಾರ್ಯದರ್ಶಿ ಶಿವಕುಮಾರ್, ತಾಲೂಕು ಸಮಿತಿ ಸದಸ್ಯ ಶೇಖರ ಲಾಯಿಲ ಮಾತನಾಡಿದರು. ತಾಲೂಕು ಸಮಿತಿ ಸದಸ್ಯರಾದ ವಸಂತ ನಡ, ಸುಕನ್ಯಾ ಬೆಳ್ತಂಗಡಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಕುಂದಾಪುರದಲ್ಲಿ ಗಾಂಧಿ ಓದು ಅಭಿಯಾನದ ಸಮಾರೋಪ

ಕುಂದಾಪುರ ಸಮುದಾಯ ಆಯೋಜಿಸಿದ ಗಾಂಧಿ ಓದು ಅಭಿಯಾನದ ಭಾಗವಾಗಿ ಕುಂದಾಪುರ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ, ಜೆಸಿಟಿ ಕುಂದಾಪುರ ಇವರ ಸಹಭಾಗಿತ್ವದಲ್ಲಿ ಕುಂದಾಪುರ ಸಮುದಾಯವು ಅಕ್ಟೋಬರ್ 2 ರಿಂದ ಜನವರಿ 31ರ ವರೆಗೆ 17 ವಾರಗಳ ಕಾಲ ನಿರಂತರವಾಗಿ ವಿದ್ಯಾರ್ಥಿಗಳ ಸಂವಹನ ಕಾರ್ಯಕ್ರಮಗಳು ನಡೆದಿವೆ.

ಕಾರ್ಡಿನಲ್ಲಿ ಗಾಂಧಿ ಕಥೆ, ಗಾಂಧೀಜಿಯ ಪೋಸ್ಟರ್, ಗಾಂಧಿ ಆತ್ಮಕತೆ ನನ್ನ ಸತ್ಯಾನ್ವೇಷಣೆ ಕುರಿತು ತಾಲೂಕು ಮಟ್ಟದಲ್ಲಿ ರಸಪ್ರಶ್ನೆ ಮತ್ತಿತರ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿತ್ತು. ನನ್ನ ಸತ್ಯಾನ್ವೇಷಣೆ ಹಾಗೂ ಗಾಂಧಿ ಕುರಿತಾದ ಸಮುದಾಯದ ಗಾಂಧಿ, ತಾವೂ ಗಾಂಧಿ ಬಾಪೂ ಗಾಂಧಿ ಆದ ಕತೆ ಮತ್ತು ಇತರ ಪುಸ್ತಕಗಳನ್ನು ತಾಲೂಕಿನ ಶಾಲೆಗಳಿಗೆ ಒದಗಿಸಿ ಅವುಗಳನ್ನು ಮಕ್ಕಳು ಓದುವಂತೆ ಮಾಡಲು ಮೆಂಟರ್ ಶಿಕ್ಷಕರನ್ನು ನೇಮಿಸಲಾಯಿತು. ವಿದ್ಯಾರ್ಥಿಗಳ ಓದಿಗೆ ಅನುಕೂಲವಾಗಲು ವಾಟ್ಸ್‌ಅಪ್ ಗುಂಪು ರಚಿಸಲಾಗಿದೆ.

ಫೆಬ್ರವರಿ 4 ರಂದು ಕುಂದಾಪುರದಲ್ಲಿ ನಡೆದ ಸಮಾರೋಪ ಸಮಾರಂಭದಲ್ಲಿ ಸ್ಪರ್ಧಾ ವಿಜೇತರಿಗೆ ಬಹುಮಾನ ಹಾಗೂ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ವಿತರಿಸಲಾಯಿತು. ಬಿಜಿವಿಎಸ್ ಆರ್ಥಿಕ ನೆರವಿನಿಂದ ಮಕ್ಕಳ ಸಾಹಿತಿ ಉದಯ ಗಾಂವ್‌ಕರ್ ಸಿದ್ಧಪಡಿಸಿದ ಗಾಂಧಿ ಕುರಿತಾದ 50 ಪುಟಾಣಿ ಕಥೆಗಳನ್ನು ಒಳಗೊಂಡ ಮಹಾತ್ಮ ಪುಸ್ತಕವನ್ನು ಈ ಸಮಾರೋಪದಲ್ಲಿ ಬಿಡುಗಡೆಗೊಳಿಸಿ ಭಾಗವಹಿಸಿದ ಮಕ್ಕಳಿಗೆ ವಿತರಿಸಿದೆ.

ಕಾರ್ಯಕ್ರಮದಲ್ಲಿ ಬಿಇಒ ಅರುಣ್‌ಕುಮಾರ್ ಶೆಟ್ಟಿ, ನಿವೃತ್ತ ಪ್ರಾಂಶುಪಾಲರಾದ ದೋಮಚಂದ್ರಶೇಖರ, ಡಾ.ದಿನೇಶ್ ಹೆಗ್ಡೆ, ನಿರ್ದೇಶಕರು ಪ್ರಿನ್ಸಿಪಾಲರೂ ಆದಾ ಅಭಿಲಾಷ ಹಂದೆ, ರಂಗನಿರ್ದೇಶಕ ಡಾ.ಶ್ರೀಪಾದ ಭಟ್, ಜೆಸಿಟಿನ ಸದಾನಂದ ನಾವಡ, ನಾಗರತ್ನ ಹೇರ್ಳೆ, ಸಮುದಾಯ ಕುಂದಾಪುರದ ಉದಯ ಗಾಂವ್‌ಕರ್, ಸದಾನಂದ ಬೈಂದೂರು, ಬಾಲಕೃಷ್ಣ ಕೆ.ಎಂ, ಕಾರ್ಮಿಕ ಮುಖಂಡ ಎಚ್.ನರಸಿಂಹ, ರಂಗ ನಿರ್ದೇಶಕ ವಾಸುದೇವ ಗಂಗೇರಾ ಭಾಗವಹಿಸಿದ್ದರು.

ಈ ಸಂದರ್ಭ ಶ್ರೀಪಾದ ಭಟ್ ನಿರ್ದೇಶಿಸಿದ ಸುಧಾ ಅಡುಕಳ ಅವರು ಬರೆದ ಮಾಧವಿ ನಾಟಕವನ್ನು ಪ್ರದರ್ಶಿಸಲಾಯಿತು. ●

ಬಿಡಿಎ ಭ್ರಷ್ಟಾಚಾರ: ನ್ಯಾಯಾಂಗ ತನಿಖೆಗೆ ಸಿಪಿಐ(ಎಂ) ಆಗ್ರಹ

ಬೆಂಗಳೂರಿನ ಜನತೆಗೆ ಕ್ರಮ ಬದ್ಧವಾಗಿ ನಿವೇಶನ ಹಂಚಿಕೆ ಮಾಡಬೇಕಾದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಹಗರಣಗಳು ದಿನಕ್ಕೊಂದರಂತೆ ಬಯಲಿಗೆ ಬರುತ್ತಿದ್ದು ಭ್ರಷ್ಟಾಚಾರದ ಕೂಪವಾಗಿದೆ. ಬಿ.ಡಿ.ಎ.ನ ಅಕ್ರಮಗಳನ್ನು ಸಮಗ್ರ ತನಿಖೆಗೆ ಒಳಪಡಿಸಲು ನ್ಯಾಯಾಂಗ ತನಿಖೆ ಮಾಡಬೇಕೆಂದು ರಾಜ್ಯ ಸರ್ಕಾರವನ್ನು ಸಿಪಿಐ(ಎಂ) ಬೆಂಗಳೂರು ಉತ್ತರ–ದಕ್ಷಿಣ ಜಿಲ್ಲಾ ಸಮಿತಿಗಳು ಆಗ್ರಹಿಸಿವೆ.

ಬೆಂಗಳೂರು ನಗರದ ಮಧ್ಯಮ ವರ್ಗದ ಜನರು ಬರುವ ಆದಾಯದಲ್ಲಿ ಅಲ್ಪ ಸ್ವಲ್ಪ ಉಳಿತಾಯ ಮಾಡಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಿವೇಶನ ಖರೀದಿಸಿದರೆ ಸಮಸ್ಯೆ ಇರುವುದಿಲ್ಲ ಎಂಬ ವಿಶ್ವಾಸದೊಂದಿಗೆ ನಿವೇಶನ ಖರೀದಿಗೆ ಮುಂದಾಗುತ್ತಿದ್ದರು. ಅಂತಹ ವಿಶ್ವಾಸ ಬಿ.ಡಿ.ಎ. ಕಳೆದುಕೊಂಡು ವರ್ಷಾಗಳಾಗಿವೆ. ಬಿ.ಡಿ.ಎ. ನಿರ್ಮಿಸಿದ ಬಡಾವಣೆಯಲ್ಲಿ ಯಾರಿಗೋ ಹಂಚಿಕೆ ಆಗಿರುವ ನಿವೇಶನವನ್ನು ಇನ್ನಾರಿಗೋ ಶುದ್ಧ ಕ್ರಯಪತ್ರ ಮಾಡಿಕೊಡುವ ಭ್ರಷ್ಟ ಅಧಿಕಾರಿಗಳು ಬಿ.ಡಿ.ಎ.ಯಲ್ಲಿದ್ದಾರೆ. ಹರಾಜಿನ ಮೂಲಕ ಹಂಚಿಕೆ ಮಾಡಬೇಕಾದ ಮೂಲೆ ನಿವೇಶನಗಳನ್ನು ವಸತಿ ನಿವೇಶನಕ್ಕೆ ಬದಲಿ ನಿವೇಶನವಾಗಿ ಹಂಚಿಕೆ ಮಾಡಲಾಗುತ್ತಿದೆ. ನಿವೇಶನದಾರರ ಗಮನಕ್ಕೆ ಬಾರದೆ ಅವರ ನಿವೇಶನ ಹಂಚಿಕೆ ರದ್ದುಪಡಿಸಿ ಬೇರೆಯಾರದೋ ಹೆಸರಿಗೆ ಅದನ್ನು ಬದಲಿ ನಿವೇಶನವನ್ನಾಗಿ ನೀಡಿರುವ ಅಕ್ರಮಗಳು ನಡೆದಿವುದು ಬೆಳಕಿಗೆ ಬರುತ್ತಿದೆ. ಅಲ್ಲದೆ ನಕಲಿ ದಾಖಲೆಗಳನ್ನು ಸೃಷ್ಟಿಸುವ, ನೋಂದಣಿ ಪುಸ್ತಕಗಳ ಹಾಳೆಗಳನ್ನೇ ಬದಲಾಯಿಸುವ ಮೂಲಕ ಅಕ್ರಮವಾಗಿ ನಿವೇಶನಗಳ ಹಂಚಿಕೆಯನ್ನು ಭ್ರಷ್ಟ ಅಧಿಕಾರಿಗಳು ಮತ್ತು ಸಿಬ್ಬಂದಿಯವರು ಮಾಡುತ್ತಿದ್ದಾರೆ ಎಂದು ಸಿಪಿಐ(ಎಂ) ಆರೋಪಿಸಿದೆ.

ಇತ್ತೀಚೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಉಪ ಕಾರ್ಯದರ್ಶಿಗಳು ಹಾಗೂ ಅವರ ಕಛೇರಿಯ ಇಬ್ಬರು ಸಿಬ್ಬಂದಿ ಸೇರಿಕೊಂಡು ಎಚ್.ಬಿ.ಆರ್. 1ನೇ ಹಂತ, 5ನೇ ಬ್ಲಾಕ್‌ನ ನಾಲ್ಕು ನಿವೇಶನಗಳಿಗೆ ನಕಲಿ ದಾಖಲೆಗಳ ಆಧಾರದಲ್ಲಿ ಶುದ್ಧ ಕ್ರಯಪತ್ರ ಮಾಡಿಕೊಟ್ಟಿರುವುದು ಆತಂಕಕಾರಿಯಾಗಿದೆ. ಕೂಡಲೇ ಈ ಅಧಿಕಾರಿಗಳ ಮೇಲೆ ಕಾನೂನು ಕ್ರಮಜರುಗಿಸಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ. ರಾಜ್ಯ ಸರ್ಕಾರ ನೇಮಿಸುವ ಬಿಡಿಎ ಅಧ್ಯಕ್ಷರು ಸಹಾ ಇದರ ಕುರಿತು ಆಗಿಂದಾಗ್ಗೆ ಅಗತ್ಯ ಪರಿಶೀಲನೆ ನಡೆಸದೆ ಉದಾಸೀನ ತೋರಿರುವುದು ಸಹಾ ಇಂತಹ ಭ್ರಷ್ಟಾಚಾರಕ್ಕೆ ಕೊಡುಗೆ ನೀಡಿವೆ ಹಾಗೂ ರಾಜ್ಯ ಸರ್ಕಾರವು ಸಹಾ ಇದರ ನೇರ ಹೊಣೆಯಾಗಿದೆ ಎಂದು ಸಿಪಿಐ(ಎಂ) ಖಂಡಿಸಿದೆ.

ಬಿ.ಡಿ.ಎ. ವಿಶೇಷ ಕಾರ್ಯಪಡೆ ಹಾಗೂ ಜಾಗೃತಿ ದಳ ನಡೆಸಿರುವ ಆಂತರಿಕ ತನಿಖೆಯಲ್ಲಿ ಇಂತಹ 15ಕ್ಕೂ ಅಧಿಕ ಭ್ರಷ್ಟಾಚಾರ ಪ್ರಕರಣಗಳನ್ನು ದೃಢಪಡಿಸಿದೆ ಎಂದು ಪತ್ರಿಕೆಗಳು ವರದಿ ಮಾಡಿವೆ. ಬಿ.ಡಿ.ಎ. ಆಯುಕ್ತರು ಇದನ್ನು ACB ಗೆ ನೀಡಲು ಅನುಮತಿ ನೀಡಬೇಕೆಂದು ರಾಜ್ಯ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದಾರೆ. ಮುಖ್ಯಮಂತ್ರಿಗಳು ಇದಕ್ಕೆ ಅನುಮತಿ ನೀಡಲು ಮುಂದಾಗುತ್ತಿಲ್ಲ. ಹಾಗಾಗಿ ಇದರಲ್ಲಿ ರಾಜಕೀಯ ವಾಸನೆ ಇರುವುದು, ಸರ್ಕಾರದ ಮಂತ್ರಿಗಳು, ಹಲವು ಶಾಸಕರು ಶಾಮೀಲಾಗಿರುವುದು ಕೇಳಿಬರುತ್ತಿದೆ. ಹಾಗಾಗಿ ಬಿ.ಡಿ.ಎ. ನ ಅಕ್ರಮಗಳನ್ನು ಸಮಗ್ರತನಿಖೆಗೆ ಒಳಪಡಿಸಲು ನ್ಯಾಯಾಂಗ ತನಿಖೆಗೆ ಒಪ್ಪಿಸಬೇಕೆಂದು ಹಾಗೂ ನಗರದ ಬಡ ಮಧ್ಯಮ ವರ್ಗದ ಜನರಿಗೆ ಕೈಗೆಟುಕುವ ಬೆಲೆಯಲ್ಲಿ ನಿವೇಶನ ದೊರಕುವಂತಹ ವಿಶೇಷ ಯೋಜನೆ ಕೂಡಲೇ ತರಬೇಕೆಂದು ಸಿಪಿಐ(ಎಂ) ಬೆಂಗಳೂರು ಉತ್ತರ – ದಕ್ಷಿಣ ಜಿಲ್ಲಾ ಸಮಿತಿಗಳು ಒತ್ತಾಯಿಸಿವೆ. ●

ಅತಿಥಿ ಅಂಕಣ



ನಾ ದಿವಾಕರ



ಕೆಡವಿದ ಸ್ಮಾರಕದ ಮೇಲೆ ಚರಿತ್ರೆಯ ಸಮಾಧಿ

ಐವತ್ತು ವರ್ಷಗಳ ಕಾಲ, ಮೂರು ಪೀಳಿಗೆಯ ಬಡ ಹೆಣ್ಣುಮಕ್ಕಳಿಗೆ, ಕನ್ನಡ ಮಾಧ್ಯಮದ ಶಿಕ್ಷಣ ಒದಗಿಸಿದ್ದ ಒಂದು ಶಾಲಾ ಕಟ್ಟಡವನ್ನು ವಿವೇಕ ಸ್ಮಾರಕಕ್ಕಾಗಿ ನೆಲಸಮ ಮಾಡುವ ಮೂಲಕ ಜಿಲ್ಲಾಡಳಿತ ತನ್ನ ಅವಿವೇಕವನ್ನು ಪ್ರದರ್ಶಿಸಿದೆ. ಹಾಗೆಯೇ ಶಿಕ್ಷಣವೊಂದೇ ಸಮಾಜದ ಮುನ್ನಡೆಗೆ ಸಾಧನ ಎಂದು ಬೋಧಿಸಿದ, ವಿಶೇಷವಾಗಿ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದ ಸ್ವಾಮಿ ವಿವೇಕಾನಂದರ ಹೆಸರಿನಲ್ಲಿ ನಿರ್ಮಿಸುವ ಸ್ಮಾರಕಕ್ಕೆ, ಹೆಣ್ಣುಮಕ್ಕಳ ಶಿಕ್ಷಣದ ದೇಗುಲವನ್ನು ನಾಶಪಡಿಸುವ ಮೂಲಕ ಮೈಸೂರಿನ ರಾಮಕೃಷ್ಣ ಮಠ ತನ್ನ ಸಾಂಸ್ಕೃತಿಕ ಕ್ರೌರ್ಯ ಮತ್ತು ಬೌದ್ಧಿಕ ದಾರಿದ್ರ್ಯವನ್ನು ಪ್ರದರ್ಶಿಸಿದೆ. ಶಾಲಾ ಕಟ್ಟಡವನ್ನು ಮೂಲ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದೆಯಷ್ಟೇ, ಶಾಲೆಯ ಚಾರಿತ್ರಿಕ ಅಸ್ತಿತ್ವವನ್ನು ಉಳಿಸಿಕೊಳ್ಳಲಾಗುವುದು ಎಂದು ಹೇಳುವುದು ಇದೇ ಬೌದ್ಧಿಕ ದಾರಿದ್ರ್ಯದ ಮತ್ತೊಂದು ಸ್ವರೂಪ.

ಕೆಡವಿ ಕಟ್ಟುವುದು ಮಾನವ ಇತಿಹಾಸದ ಪರಂಪರೆಯಾಗಿಯೇ ಬೆಳೆದುಬಂದಿರುವ ವಿದ್ಯಮಾನ. ಬದಲಾಗುತ್ತಿರುವ ಸಾಮಾಜಿಕ–ಸಾಂಸ್ಕೃತಿಕ ಸ್ಥಿತ್ಯಂತರಗಳಿಗನುಗುಣವಾಗಿ ಹಳೆಯದನ್ನು ಕೆಡವಿ ಹೊಸತನ್ನು ಕಟ್ಟುವ ಪ್ರಕ್ರಿಯೆಯಲ್ಲೇ ಮಾನವ ಸಮಾಜ ತನ್ನ ಅಭ್ಯುದಯದ ಹಾದಿಯನ್ನು ಗುರುತಿಸಿಕೊಂಡಿದೆ. ಇತಿಹಾಸದ ವಿವಿಧ ಕಾಲಘಟ್ಟಗಳಲ್ಲಿ ಈ ಕೆಡವಿ ಕಟ್ಟುವ ಪ್ರಕ್ರಿಯೆ ನಿರಂತರವಾಗಿ ನಡೆಯುತ್ತಲೇ ಬಂದಿದೆ. ಆಧುನಿಕತೆಯ ಹಾದಿಯಲ್ಲಿ ಮುನ್ನಡೆಯುವ ಯಾವುದೇ ಸಮಾಜ ತನ್ನ ಗತ ಇತಿಹಾಸದ ಪಳೆಯುಳಿಕೆಗಳನ್ನು ಕೆಡವುತ್ತಲೇ ಹೊಸ ಜಗತ್ತನ್ನು ನಿರ್ಮಿಸಲು ಮುಂದಾಗುತ್ತದೆ. ಆದರೆ ಈ ಕೆಡವುವ ಪ್ರಕ್ರಿಯೆ ಬೌದ್ಧಿಕ ನೆಲೆಯಲ್ಲಿ ಅನಾವರಣಗೊಳ್ಳುವಾಗ ಮನ್ವಂತರದ ಹಾದಿಗಳಲ್ಲಿ ಇತಿಹಾಸದ ಮೌಲಿಕ ನೆಲೆಗಳೂ ಕೆಡವಲ್ಪಡುತ್ತವೆ. ಸಮಾಜ ತನ್ನ ಸೂಕ್ಷ್ಮ ಸಂವೇದನೆಗಳನ್ನು ಕಳೆದುಕೊಂಡು, ಮಾನವೀಯ ನೆಲೆಗಳನ್ನು ನಾಶಪಡಿಸಿಕೊಳ್ಳುತ್ತಾ, ಹೊಸತು ಸೃಷ್ಟಿಸುವ ಭರದಲ್ಲಿ ಚರಿತ್ರೆಯ ಹೆಜ್ಜೆಗಳನ್ನು ಅಳಿಸಿಹಾಕುವ ನಿಟ್ಟಿನಲ್ಲಿ ಸಾಗುತ್ತದೆ.

ಇಂತಹ ಒಂದು ಪ್ರಕ್ರಿಯೆ ಇಂದು ಭಾರತದಲ್ಲಿ ಜಾರಿಯಲ್ಲಿದೆ. ಮತೀಯ ನೆಲೆಗಳಲ್ಲಿ ಧ್ರುವೀಕರಣಗೊಳ್ಳುತ್ತಿರುವ ಸಾಂಸ್ಕೃತಿಕ ರಾಜಕಾರಣ ಮತ್ತು ಮತಾಂಧತೆ ಚರಿತ್ರೆಯ ಪಳೆಯುಳಿಕೆಗಳನ್ನು ನಾಶಪಡಿಸುವ ಮತ್ತು ಪಾರಂಪರಿಕ ಸ್ಥಾವರ–ಜಂಗಮಗಳನ್ನು ಇಲ್ಲವಾಗಿಸುವ ವಿಕೃತ ಮನಸ್ಥಿತಿಯನ್ನು ಯುವ ಪೀಳಿಗೆಯಲ್ಲೂ ಸೃಷ್ಟಿಸಿಬಿಟ್ಟಿದೆ. ಇಂತಹ ವಿಕೃತಿಗೆ ಬಲಿಯಾಗಿರುವುದು ಮೈಸೂರಿನ ಇತಿಹಾಸ ಪ್ರಸಿದ್ಧ ಮಹಾರಾಣಿ ಎನ್.ಟಿ.ಎಂ ಶಾಲೆ. ಮೈಸೂರಿನ ಮಹಾರಾಣಿ ಕೆಂಪನಂಜಮ್ಮಣ್ಣಿ 1881ರಲ್ಲಿ ಹೆಣ್ಣು ಮಕ್ಕಳಿಗಾಗಿಯೇ ಕಟ್ಟಿದ ಶಾಲೆಯೊಂದು ಈಗ ಇತಿಹಾಸದ ತೊಟ್ಟಿಗೆ ಸೇರಿದೆ. 140 ವರ್ಷಗಳ ಕಾಲದ ಮೈಸೂರಿನ ಬಡ ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ಅವಕಾಶ ಕಲ್ಪಿಸಿದ್ದ ಒಂದು ಶಾಲೆಯನ್ನು, ವಿವೇಕಾನಂದರ ಸ್ಮಾರಕ ಕಟ್ಟುವ ಸಲುವಾಗಿ ಕೆಡವಲಾಗಿದೆ.

ಈ ಶಾಲೆ ಮೂಲತಃ ಅರಮನೆಯ ಆವರಣದಲ್ಲಿ ಆರಂಭವಾಗಿ ನಂತರ, ಮಹಾರಾಣಿ ಹೆಣ್ಣುಮಕ್ಕಳ ಶಾಲೆಯ ಆವರಣದಲ್ಲಿ ಕೆಲವು ದಶಕಗಳ ಕಾಲ ಕಾರ್ಯನಿರ್ವಹಿಸಿ ನಂತರ 50 ವರ್ಷಗಳ ಹಿಂದೆ ತನ್ನದೇ ಆದ ಒಂದು ಸ್ಥಾವರವನ್ನು ಗಳಿಸಿಕೊಂಡಿತ್ತು. ಈ ಹೆಜ್ಜೆಗುರುತುಗಳಲ್ಲೇ ಎನ್.ಟಿ.ಎಂ ಶಾಲೆಯ ಚಾರಿತ್ರಿಕ ಮಹತ್ವವನ್ನು ಗುರುತಿಸಬೇಕಿದೆ. ಇಂದು ಈ ಶಾಲೆಯನ್ನು ಮತ್ತೊಂದು ಶಾಲೆಯಲ್ಲಿ ವಿಲೀನಗೊಳಿಸುವ ಮೂಲಕ ಚರಿತ್ರೆಯ ಅಕ್ಷರಗಳನ್ನು ಅಳಿಸಿಹಾಕಲಾಗುತ್ತಿದೆ. ತಾತ್ಕಾಲಿಕವಾಗಿ ಮಹಾರಾಣಿ ಶಿಕ್ಷಕಿಯರ ತರಬೇತಿ ಸಂಸ್ಥೆಯ ಕಟ್ಟಡಕ್ಕೆ ಶಾಲೆಯನ್ನು ವರ್ಗಾಯಿಸಲಾಗಿದ್ದು, ಈ ಚಾರಿತ್ರಿಕ ಶಾಲೆಯ ಮೂಲ ಸ್ವರೂಪವನ್ನು ಉಳಿಸಿಕೊಂಡು ಅಭಿವೃದ್ಧಿಪಡಿಸುವುದಾಗಿ ಆಡಳಿತ ವ್ಯವಸ್ಥೆ ಭರವಸೆ ನೀಡಿದೆ.

ಐವತ್ತು ವರ್ಷಗಳ ಕಾಲ, ಮೂರು ಪೀಳಿಗೆಯ ಬಡ ಹೆಣ್ಣುಮಕ್ಕಳಿಗೆ, ಕನ್ನಡ ಮಾಧ್ಯಮದ ಶಿಕ್ಷಣ ಒದಗಿಸಿದ್ದ ಒಂದು ಶಾಲಾ ಕಟ್ಟಡವನ್ನು ವಿವೇಕ ಸ್ಮಾರಕಕ್ಕಾಗಿ ನೆಲಸಮ ಮಾಡುವ ಮೂಲಕ ಜಿಲ್ಲಾಡಳಿತ ತನ್ನ ಅವಿವೇಕವನ್ನು ಪ್ರದರ್ಶಿಸಿದೆ. ಹಾಗೆಯೇ ಶಿಕ್ಷಣವೊಂದೇ ಸಮಾಜದ ಮುನ್ನಡೆಗೆ ಸಾಧನ ಎಂದು ಬೋಧಿಸಿದ, ವಿಶೇಷವಾಗಿ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದ ಸ್ವಾಮಿ ವಿವೇಕಾನಂದರ ಹೆಸರಿನಲ್ಲಿ ನಿರ್ಮಿಸುವ ಸ್ಮಾರಕಕ್ಕೆ, ಹೆಣ್ಣುಮಕ್ಕಳ ಶಿಕ್ಷಣದ ದೇಗುಲವನ್ನು ನಾಶಪಡಿಸುವ ಮೂಲಕ ಮೈಸೂರಿನ ರಾಮಕೃಷ್ಣ ಮಠ ತನ್ನ ಸಾಂಸ್ಕೃತಿಕ ಕ್ರೌರ್ಯ ಮತ್ತು ಬೌದ್ಧಿಕ ದಾರಿದ್ರ್ಯವನ್ನು ಪ್ರದರ್ಶಿಸಿದೆ. ಶಾಲಾ ಕಟ್ಟಡವನ್ನು ಮೂಲ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದೆಯಷ್ಟೇ, ಶಾಲೆಯ ಚಾರಿತ್ರಿಕ ಅಸ್ತಿತ್ವವನ್ನು ಉಳಿಸಿಕೊಳ್ಳಲಾಗುವುದು ಎಂದು ಹೇಳುವುದು ಇದೇ ಬೌದ್ಧಿಕ ದಾರಿದ್ರ್ಯದ ಮತ್ತೊಂದು ಸ್ವರೂಪ.

ಒಂದು ಶಾಲೆಯ ಅಸ್ತಿತ್ವಕ್ಕೆ ಎರಡು ಆಯಾಮಗಳಿರುತ್ತವೆ. ಚಾರಿತ್ರಿಕ ಪರಂಪರೆಯನ್ನು ಹೊಂದಿರುವ ಒಂದು ಶಾಲೆಗೆ ಬೌದ್ಧಿಕವಾಗಿ, ಜಂಗಮ ಸ್ವರೂಪದ ಅಸ್ತಿತ್ವ ಚಿರಂತನವಾಗಿರುತ್ತದೆ. ಮತ್ತೊಂದೆಡೆ ಸ್ಥಾವರ ರೂಪದಲ್ಲಿ ಇಂತಹ ಒಂದು ಶಾಲೆ ತನ್ನದೇ ಆದ ಪಾರಂಪರಿಕ ಅಸ್ತಿತ್ವವನ್ನು ಹೊಂದಿರುತ್ತದೆ. ಮಹಾರಾಣಿ ಎನ್.ಟಿ.ಎಂ ಹೆಣ್ಣು ಮಕ್ಕಳ ಶಾಲೆಯ ಪರಂಪರೆ ಇರುವುದು ಅದರ ಆಶಯಗಳಲ್ಲಿ. ಭಾರತದ ಶ್ರೇಣೀಕೃತ–ಪಿತೃಪ್ರಧಾನ ಸಮಾಜದಲ್ಲಿ ಹೆಣ್ಣುಮಕ್ಕಳಿಗೆ ಶಿಕ್ಷಣವೇ ಮರೀಚಿಕೆಯಾಗಿದ್ದಂತಹ ಕಾಲಘಟ್ಟದಲ್ಲಿ ರಾಜಪ್ರಭುತ್ವವೊಂದು ಹೆಣ್ಣುಮಕ್ಕಳಿಗಾಗಿಯೇ ಪ್ರತ್ಯೇಕ ಶಾಲೆಯನ್ನು ತೆರೆಯುವುದು ಮತ್ತು ಕನ್ನಡ ಮಾಧ್ಯಮದಲ್ಲಿ ನಡೆಸುವುದು ಈ ಪರಂಪರೆಯ ದ್ಯೋತಕ. ಈ ಶಾಲೆಯ ಆರಂಭ ಒಂದು ಜೋಪಡಿಯಲ್ಲೇ ಆಗಿದ್ದರೂ, ಅದು ಐವತ್ತು ವರ್ಷಗಳಿಂದ ಮೂರು ಪೀಳಿಗೆಯ ಹೆಣ್ಣುಮಕ್ಕಳ ಶೈಕ್ಷಣಿಕ ನೆಲೆಯಾಗಿ ಒಂದು ಸ್ಥಾವರದಲ್ಲಿ ವಿಜೃಂಭಿಸಿದೆ. ಈ ಸ್ಥಾವರವನ್ನು ಸಂರಕ್ಷಿಸುವುದು ಇತಿಹಾಸ ಪ್ರಜ್ಞೆ ಇರುವ ಒಂದು ಸರ್ಕಾರದ ಮತ್ತು ಸಮಾಜದ ನೈತಿಕ ಕರ್ತವ್ಯ.

19ನೆಯ ಶತಮಾನದ ರಾಜಪ್ರಭುತ್ವದ ಕೊಡುಗೆಯಾದ ಎನ್.ಟಿ.ಎಂ ಶಾಲೆ ಸ್ವತಂತ್ರ ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ತನ್ನದೇ ಆದ ಒಂದು ಸ್ಥಾವರವನ್ನು ನಿರ್ಮಿಸಿಕೊಂಡಿತ್ತು. ಈ ಸ್ಥಾವರವನ್ನು ಧ್ವಂಸ ಮಾಡುವುದು ಮತ್ತು ಈ ವಿಧ್ವಂಸಕ ಕೃತ್ಯವನ್ನು ಸ್ಥಳಾಂತರ ಎಂದು ಸರಳೀಕರಿಸುವುದು ಸೂಕ್ಷ್ಮ ಸಂವೇದನೆ ಇಲ್ಲದ, ಇತಿಹಾಸ ಪ್ರಜ್ಞೆ ಇಲ್ಲದ ಬೌದ್ಧಿಕ ದೀವಾಳಿತನವನ್ನು ಪ್ರದರ್ಶಿಸುತ್ತದೆ. ಈ ಸ್ಥಾವರವನ್ನು ಕೆಡವಿ, ಜಂಗಮ ಸನ್ಯಾಸಿ ಸ್ವಾಮಿ ವಿವೇಕಾನಂದರ ಹೆಸರಿನಲ್ಲಿ ಭವ್ಯ ಸ್ಮಾರಕವನ್ನು ನಿರ್ಮಿಸಲು ಮುಂದಾಗಿರುವ ರಾಮಕೃಷ್ಣ ಮಠ ವಿವೇಕಾನಂದರ ಆಧ್ಯಾತ್ಮಿಕ ಚಿಂತನೆಗೆ ಅಪಚಾರ ಎಸಗಿರುವುದೇ ಅಲ್ಲದೆ, ಸಾವಿರಾರು ಹೆಣ್ಣುಮಕ್ಕಳ ಹೆಜ್ಜೆ ಗುರುತುಗಳನ್ನು ಒಮ್ಮೆಲೆ ಅಳಿಸಿಹಾಕುವ ಮೂಲಕ, ತನ್ನ ಸಾಂಸ್ಕೃತಿಕ ಕ್ರೌರ್ಯವನ್ನು ಪ್ರದರ್ಶಿಸಿದೆ. ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿ ಭೂಮಿಯೂ ಒಂದು ಮಾರುಕಟ್ಟೆ ಸರಕಾಗಿರುವುದರಿಂದ, ಒಂದು ಶಾಲೆಯ ನೆಲೆಯೂ ಸಹ ಹರಾಜು ಹಾಕಬಹುದಾದ ಕಟ್ಟಡದಂತೆಯೇ ಕಾಣುವುದು ಸಹಜ.

ಆದರೆ ರಾಮಕೃಷ್ಣ ಮಠ ಈ ಸ್ಥಾವರವನ್ನು ಕೆಡವುವ ಮೂಲಕ ಚರಿತ್ರೆಯನ್ನೇ ಸಮಾಧಿ ಮಾಡಿದೆ. ಶಾಲೆ ಎನ್ನುವುದು ಸಮಾಜ ನಿರ್ಮಾಣದಲ್ಲಿ ಮುಂಚೂಣಿಯಲ್ಲಿರುವ ಒಂದು ಜಂಗಮ ರೂಪಿ ಸ್ಥಾವರ. ಚಾರಿತ್ರಿಕವಾಗಿ ತನ್ನದೇ ಆದ ಅಸ್ತಿತ್ವ ಮತ್ತು ಅಸ್ಮಿತೆಯನ್ನು ಹೊಂದಿದ್ದ ಜ್ಞಾನ ಪರಂಪರೆಯ ಒಂದು ಕಟ್ಟಡವನ್ನು ಕೆಡವಿ, ವಿವೇಕಾನಂದರ ಆಧ್ಯಾತ್ಮಿಕ ಚಿಂತನೆಗಳ ಸ್ಮಾರಕವನ್ನು ನಿರ್ಮಿಸಿದರೆ ಅದು ಒಂದು ಬೌದ್ಧಿಕ ಸಮಾಧಿಯಾಗಿಯೇ ಕಾಣುತ್ತದೆ. ಸಂಸ್ಕೃತಿಯ ಬಗ್ಗೆ ಪುಂಖಾನುಪುಂಖ ಉಪನ್ಯಾಸಗಳನ್ನು ನೀಡುವ ರಾಮಕೃಷ್ಣ ಮಠದ ವಿವೇಕಾನುಯಾಯಿಗಳಿಗೆ ಒಂದು ಚಾರಿತ್ರಿಕ ಶಿಕ್ಷಣ ಸಂಸ್ಥೆಯ ಹಿಂದೆ, ಸುದೀರ್ಘ ಸಾಂಸ್ಕೃತಿಕ ಪರಂಪರೆಯೂ ಇದೆ ಎಂಬ ವಿವೇಕ, ಪರಿಜ್ಞಾನ ಇರಬೇಕಿತ್ತಲ್ಲವೇ? ಈ ಶಾಲೆಯ ಕಟ್ಟಡವನ್ನು ಉಳಿಸಿಕೊಂಡೇ ವಿವೇಕ ಸ್ಮಾರಕ ನಿರ್ಮಿಸುವ ಅವಕಾಶಗಳು ಇದ್ದಾಗಲೂ, ರಾತ್ರೋರಾತ್ರಿ ಕಟ್ಟಡವನ್ನು ಧ್ವಂಸ ಮಾಡುವ ಮೂಲಕ ಜಿಲ್ಲಾಡಳಿತ, ರಾಮಕೃಷ್ಣ ಮಠದ ಈ ಸಾಂಸ್ಕೃತಿಕ ಕ್ರೌರ್ಯಕ್ಕೆ ಅಧಿಕೃತ ಮಾನ್ಯತೆ ನೀಡಿಬಿಟ್ಟಿದೆ.

ಧ್ವಂಸಗೊಂಡ ಐತಿಹಾಸಿಕ ಹೆಣ್ಣುಮಕ್ಕಳ ಶಾಲೆಯ ಕಟ್ಟಡವನ್ನು ಕೇವಲ ಸಿಮೆಂಟು ಗಾರೆಗಳ ಗುಪ್ಪೆಯಂತೆ ಕಾಣುವ ಇತಿಹಾಸ ತಜ್ಞರು, ಕನ್ನಡದ ಪರಿಚಾರಕರು ಮತ್ತು ಪ್ರಜ್ಞಾವಂತರಿಗೆ, ಈ ಕಟ್ಟಡದ ಗೋಡೆ ಗೋಡೆಗಳಲ್ಲೂ ಅಂತರ್ಗತವಾಗಿರುವ ಚರಿತ್ರೆಯ ಹೆಜ್ಜೆಗಳನ್ನು ಗುರುತಿಸುವ ವ್ಯವಧಾನ ಇರಬೇಕಲ್ಲವೇ? ರಾಮಕೃಷ್ಣ ಮಠ ಒಂದು ವಾಣಿಜ್ಯೋದ್ಯಮವಾಗಿ, ಶಿಕ್ಷಣ ಮತ್ತು ಅಧ್ಯಾತ್ಮವನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡುವ ಸಾಂಸ್ಕೃತಿಕ ಸಂಸ್ಥೆಯಂತೆ ನೆಲೆಗೊಂಡಿದೆ. ವಿವೇಕಾನಂದರ ಅಧ್ಯಾತ್ಮ ಬೋಧನೆಗೂ, ರಾಮಕೃಷ್ಣ ಮಠದ ಅಧ್ಯಾತ್ಮ ಮಾರುಕಟ್ಟೆಗೂ ಇರುವ ಅಂತರವನ್ನು ಗುರುತಿಸುವಷ್ಟು ಪ್ರಜ್ಞೆ ಪ್ರಜ್ಞಾವಂತ ಸಮಾಜದಲ್ಲಿ ಇರಬೇಕಲ್ಲವೇ? ಕೆಡವಲಾಗಿರುವ ಶಾಲಾ ಕಟ್ಟಡದ ಕಣಕಣಗಳಲ್ಲೂ ಮೈಸೂರಿನ ಲಕ್ಷಾಂತರ ಬಡ ಹೆಣ್ಣುಮಕ್ಕಳ ಚಾರಿತ್ರಿಕ ಹೆಜ್ಜೆ ಗುರುತುಗಳನ್ನು ಕಾಣಬೇಕಾದ ಪ್ರಜ್ಞಾವಂತಿಕೆ ನಮ್ಮಲ್ಲಿರಬೇಕಲ್ಲವೇ?

ಸ್ಥಳಾಂತರಗೊಂಡ ಶಾಲೆ ನಾಳೆ ಮತ್ತೊಂದು ಶಾಲೆಯಲ್ಲಿ ವಿಲೀನವಾಗುತ್ತದೆ. ಮತ್ತೊಂದು ದಿನ ನಿಶ್ಶೇಷವಾಗಿ ಇತಿಹಾಸದ ಹಾಳೆಗಳಲ್ಲಿ ಉಲ್ಲೇಖನೀಯವಾಗಿ ಉಳಿದುಬಿಡುತ್ತದೆ. ಎನ್.ಟಿ.ಎಂ ಹೆಣ್ಣುಮಕ್ಕಳ ಶಾಲೆ ಕೇವಲ ರಾಜಪರಂಪರೆಯ ದ್ಯೋತಕವಲ್ಲ, ರಾಜಪ್ರಭುತ್ವದಲ್ಲಿ ಅಪರೂಪಕ್ಕೆ ಕಾಣಬಹುದಾದ ಜನೋಪಯೋಗಿ ಪರಂಪರೆಯ ದ್ಯೋತಕ. ನಿರಂಕುಶಾಧಿಕಾರದಲ್ಲಿ ಸ್ಥಾಪನೆಯಾದ ಒಂದು ಜನೋಪಯೋಗಿ ಸಂಸ್ಥೆಯನ್ನು ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಾಶಪಡಿಸುವುದು ನಾಚಿಕೆಗೇಡಿನ ವಿಚಾರವಲ್ಲವೇ? ಮೈಸೂರಿನ ಸಮಸ್ತ ಜನತೆಯೂ ಇಂದು ನಾಚಿ ತಲೆತಗ್ಗಿಸುವಂತಾಗಿದೆ. ಒಂಬತ್ತು ವರ್ಷಗಳ ಸುದೀರ್ಘ ಹೋರಾಟದ ಮೂಲಕ ಮೈಸೂರಿನ ಕನ್ನಡ ಪರ ಮನಸುಗಳು ಈ ಸ್ಥಾವರವನ್ನು, ಅದರ ಜಂಗಮ ಸ್ವರೂಪವನ್ನು ಉಳಿಸಿಕೊಳ್ಳಲು ಹೋರಾಡಿವೆ. ಈ ಹೋರಾಟಗಳನ್ನು ವಿಫಲಗೊಳಿಸುವ ಷಡ್ಯಂತ್ರಗಳ ನಡುವೆಯೇ ಮೈಸೂರಿನ ಪ್ರಜ್ಞಾವಂತ ಜನತೆ ಎನ್.ಟಿ.ಎಂ ಶಾಲೆಯ ಉಳಿವಿಗೆ ಶ್ರಮಿಸಿದೆ. ಆದರೆ ಕೊನೆಗೂ ಸಾಂಸ್ಕೃತಿಕ ರಾಜಕಾರಣದ ಕ್ರೌರ್ಯ ವಿಜಯಿಯಾಗಿದೆ.

ಎನ್.ಟಿ.ಎಂ. ಶಾಲೆಯ ಕಟ್ಟಡವನ್ನು ಕೆಡವುವ ಮೂಲಕ ಆಡಳಿತ ವ್ಯವಸ್ಥೆ ಮತ್ತು ರಾಮಕೃಷ್ಣ ಮಠ ಚರಿತ್ರೆಯ ಸಮಾಧಿಯನ್ನು ನಿರ್ಮಿಸಲು ಹೊರಟಿವೆ. ಈ ಸಮಾಧಿಯ ಮೇಲೆ ನಿರ್ಮಾಣವಾಗುವ ವಿವೇಕ ಸ್ಮಾರಕದ ಛಾಯೆಯಲ್ಲಿ ಇತಿಹಾಸದ ಭೂತ ಕಾಡುತ್ತಲೇ ಇರುತ್ತದೆ. ಅಳಿಸಿಹಾಕಲಾದ ಚರಿತ್ರೆಯ ಹೆಗ್ಗುರುತುಗಳು, ಕರಾಳ ನೆನಪಿನಂತೆ ವಿವೇಕಾನಂದರ ಪ್ರತಿಮೆಯ ಪ್ರಭಾವಳಿಯಾಗಿ ಕಾಡುತ್ತಲೇ ಇರುತ್ತವೆ. ಹಾಗೆಯೇ ಎನ್ಟಿಎಂ ಶಾಲೆಯ ಇತಿಹಾಸದ ಪುಟಗಳಲ್ಲಿ ವಿಶ್ವಾಸ ದ್ರೋಹದ ಛಾಯೆಯೂ ಶಾಶ್ವತವಾಗಿ ಉಳಿಯಲಿದೆ. ಜಾತಿ ಶ್ರೇಷ್ಠತೆ, ಅಂಧ ಮತಶ್ರದ್ಧೆ, ಮತಾಂಧತೆ ಮತ್ತು ಸಾಂಸ್ಕೃತಿಕ ಕ್ರೌರ್ಯದ ಸಮಕಾಲೀನ ಇತಿಹಾಸ ವಿವೇಕ ಸ್ಮಾರಕದ ಫಲಕಗಳಲ್ಲಿ ಸದಾ ಜ್ವಲಿಸುತ್ತಲೇ ಇರುತ್ತವೆ.







ಕರ್ನಾಟಕದಲ್ಲಿ ಹಿಜಾಬ್ ಧರಿಸುವ ಹುಡುಗಿಯರನ್ನು ಶಿಕ್ಷಣದಿಂದ ವಂಚಿಸುವ ಯತ್ನಿಸುವುದರ ಹಿಂದೆ ಕರ್ನಾಟಕದಲ್ಲಿ ಮುಸ್ಲಿಮರನ್ನು ದ್ವಿತೀಯ ದರ್ಜೆ ಪ್ರಜೆಗಳನ್ನಾಗಿ ಮಾಡುವ ಹುನ್ನಾರ ಅಡಗಿದೆ. ನಾಗರಿಕರ ಒಂದು ವಿಭಾಗದ ಸಾಂವಿಧಾನಿಕ ಹಕ್ಕುಗಳಿಗೆ ಸಂಬಂಧಿಸಿದ ಮೂಲಭೂತ ಮಹತ್ವದ ವಿಚಾರ ಇದಾಗಿದೆ. ಕರ್ನಾಟಕದಲ್ಲಿ ನಡೆಯುತ್ತಿರುವ ಒಟ್ಟಾರೆ ವಿದ್ಯಮಾನಗಳಿಂದ ಹಿಜಾಬ್ ಪ್ರಶ್ನೆಯನ್ನು ಪ್ರತ್ಯೇಕವಾಗಿ ನೋಡಲು ಸಾಧ್ಯವಿಲ್ಲ. 2019ರಲ್ಲಿ ಕಾಂಗ್ರೆಸ್–ಜೆಡಿಎಸ್ ಸರ್ಕಾರ ಉರುಳಿಸಿ ಅಧಿಕಾರಕ್ಕೆ ಮರಳಿದಾಗಿನಿಂದ ರಾಜ್ಯದ ಮೇಲೆ ಹಿಂದುತ್ವ ಅಜೆಂಡಾವನ್ನು ಹೇರಲು ಬಿಜೆಪಿ ಶತಾಯಗತಾಯ ಪ್ರಯತ್ನಿಸುತ್ತಿದೆ.



ಮುಸ್ಲಿಂ ಹುಡುಗಿಯರಿಗೆ ಶಿಕ್ಷಣದ ಹಕ್ಕಿನ ನಿರಾಕರಣೆ

*** ಪ್ರಕಾಶ್ ಕಾರಟ್**

ಮುಸ್ಲಿಂ ವಿದ್ಯಾರ್ಥಿನಿಯರು ಧರಿಸುವ ಹಿಜಾಬ್‌ಅನ್ನು ಕರ್ನಾಟಕದಲ್ಲಿ ವಿಭಜನಕಾರಿ ಹಾಗೂ ಮುಸ್ಲಿಂ–ವಿರೋಧಿ ಧ್ರುವೀಕರಣಕ್ಕಾಗಿ ಬಳಸಲು ಬಿಜೆಪಿ ಮತ್ತು ಹಿಂದುತ್ವ ಶಕ್ತಿಗಳು ಧಾವಿಸಿವೆ.

ಉಡುಪಿಯ ಸರ್ಕಾರಿ ಪದವಿ–ಪೂರ್ವ ಕಾಲೇಜ್‌ನ ಆರು ವಿದ್ಯಾರ್ಥಿನಿಯರು ತಲೆ ವಸ್ತ್ರ (ಹಿಜಾಬ್) ಧರಿಸಲು ಪಟ್ಟು ಹಿಡಿದಿದ್ದನ್ನೇ ಅಖಿಲ ಭಾರತ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಮತ್ತು ಹಿಂದೂ ಜಾಗರಣ ವೇದಿಕೆ ಬಳಸಿಕೊಂಡಿವೆ. ಕೆಲವು ಹಿಂದೂ ವಿದ್ಯಾರ್ಥಿಗಳು ಕೇಸರಿ ಶಾಲು ಹಾಕಿ ಬಂದು ಗೇಟ್‌ನಲ್ಲಿ ಪ್ರತಿಭಟನೆ ನಡೆಸಲು ಅವು ಪ್ರಚೋದನೆ ನೀಡಿವೆ. ಕಳೆದ ವರ್ಷ (2021) ಡಿಸೆಂಬರ್ 29ರಂದು ಈ ಘಟನೆ ನಡೆದಿತ್ತು. ಅದಾದ ನಂತರ ಉಡುಪಿ ಜಿಲ್ಲೆಯ ಕುಂದಾಪುರದ ಎರಡು ಕಾಲೇಜ್‌ಗಳಲ್ಲಿ ಹಿಜಾಬ್ ಧರಿಸಿದ ಮುಸ್ಲಿಂ ವಿದ್ಯಾರ್ಥಿನಿಯರು ಕಾಲೇಜ್‌ಗೆ ಬರುವ ಮೇಲೆ ನಿರ್ಬಂಧ ವಿಧಿಸಲಾಗಿದೆ. ಕೇಸರಿ ಶಾಲು ಧರಿಸಿ ಬರುವುದಾಗಿ ಇತರ ಕೆಲವು ವಿದ್ಯಾರ್ಥಿಗಳು ಪಟ್ಟು ಹಿಡಿದಿದ್ದಾರೆನ್ನುವುದು ವಿದ್ಯಾರ್ಥಿನಿಯರಿಗೆ ಪ್ರವೇಶ ನಿರಾಕರಿಸಲು ನೀಡಿದ ಕಾರಣವಾಗಿದೆ.

ಇದಕ್ಕೂ ಮೊದಲು ಹಿಜಾಬ್ ಧರಿಸಿ ಕಾಲೇಜ್‌ಗೆ ಬರಲು ಅನುಮತಿಯಿದ್ದ ವಿದ್ಯಾರ್ಥಿನಿಯರು ಈಗ ಕಾಲೇಜ್ ಪ್ರವೇಶಿಸಲು ಪ್ರಯತ್ನಿಸಿದಾಗ ಕೇಸರಿ ಶಾಲು ಧರಿಸಿ ಬಂದ ಎಬಿವಿಪಿ ಮತ್ತು ಇತರ ಕೆಲವು ಹಿಂದುತ್ವ ಸಂಘಟನೆಯವರು 'ಜೈ ಶ್ರೀ ರಾಮ್' ಘೋಷಣೆ ಕೂಗಿ ಮುಸ್ಲಿಂ ವಿದ್ಯಾರ್ಥಿನಿಯರನ್ನು ಅಡ್ಡಿಪಡಿಸಿದರು. ಸಮವಸ್ತ್ರ ನಿಯಮ ಜಾರಿಯಲ್ಲಿರುವ ಸರ್ಕಾರಿ ಪಿಯು ಕಾಲೇಜ್‌ಗಳಲ್ಲಿ ಮುಸ್ಲಿಂ ವಿದ್ಯಾರ್ಥಿನಿಯರು ಸಮವಸ್ತ್ರ ಬಣ್ಣದ್ದೇ ಹಿಜಾಬ್ ಧರಿಸುತ್ತಿದ್ದಾರೆ. ಆದರೆ ಕೇಸರಿ ಪ್ರತಿಭಟನೆ ನಡೆದ ನಂತರ ಹಠಾತ್ತನೆ ಅದೆಲ್ಲ ಬದಲಾಗಿದೆ.

ಹಿಜಾಬ್ ಧರಿಸಿದ ಮುಸ್ಲಿಂ ಹುಡುಗಿಯರು ಕಾಲೇಜು ಆವರಣವನ್ನು ಪ್ರವೇಶಿಸುವುದನ್ನು ನಿರ್ಬಂಧಿಸಿರುವ ದೃಶ್ಯಗಳು ಕಲಿಯ ಬೇಕೆಂಬ ಆಸಕ್ತಿಯುಳ್ಳ ಬಾಲಕಿಯರನ್ನು ತಡೆಯುವ ಅನ್ಯಾಯವನ್ನು ಎತ್ತಿತೋರಿಸುತ್ತವೆ. ಹಿಂದುತ್ವ ಶಕ್ತಿಗಳ ಹುನ್ನಾರದ ಮೇರೆಗೆ ಕೇಸರಿ ಶಾಲು ಧರಿಸಿದವರು ಮುಸ್ಲಿಂ ಬಾಲಕಿಯರನ್ನು ತಡೆದ ನಂತರ, ಕರ್ನಾಟಕದ ವಿವಿಧ ಸ್ಥಳಗಳಲ್ಲಿ ಘರ್ಷಣೆಗಳು ಉಂಟಾಗಿವೆ. ಇದರ ಪರಿಣಾಮವವಾಗಿ ಕರ್ನಾಟಕ ಸರ್ಕಾರ ಶಾಲಾ–ಕಾಲೇಜ್‌ಗಳಿಗೆ ಮೂರು ದಿನ ರಜೆ ಘೋಷಿಸಿದೆ.

ಎಲ್ಲ ಸರ್ಕಾರಿ ಶಾಲೆ ಮತ್ತು ಕಾಲೇಜ್‌ಗಳಲ್ಲಿ ಸಮವಸ್ತ್ರಕ್ಕೆ ಸಂಬಂಧಿಸಿ ರಾಜ್ಯ ಸರ್ಕಾರ ಫೆಬ್ರವರಿ 5ರಂದು ಒಂದು ಆದೇಶ ಹೊರಡಿಸಿದೆ. ಖಾಸಗಿ ಸಂಸ್ಥೆಗಳು ತಮ್ಮದೇ ಆದ ಸಮವಸ್ತ್ರ ನಿಯಮ ಸೂಚಿಸಬಹುದು ಎಂದು ಅದು ತಿಳಿಸಿದೆ. "ಸಮಾನತೆ, ಸಮಗ್ರತೆ ಮತ್ತು ಸಾರ್ವಜನಿಕ ಸುವ್ಯವಸ್ಥೆಗೆ' ಭಂಗ ಬರುವಂಥ ಯಾವುದೇ ಬಟ್ಟೆಗಳನ್ನು ತೊಡಬಾರದೆಂದು ಸರ್ಕಾರಿ ಆದೇಶ ತಿಳಿಸಿದೆ. ಈ ಮೂಲಕ, ಹಿಜಾಬ್ ಧರಿಸಿ ಬರುವ ಮುಸ್ಲಿಂ ವಿದ್ಯಾರ್ಥಿನಿಯರು ಸರ್ಕಾರಿ ಶಾಲೆ–ಕಾಲೇಜ್‌ಗಳಿಗೆ ಬರುವುದನ್ನು ನಿಷೇಧಿಸಬೇಕೆಂಬ ಹಿಂದುತ್ವ ಸಂಘಟನೆಗಳ ಬೇಡಿಕೆಗೆ ಕರ್ನಾಟಕದ ಬಿಜೆಪಿ ಸರ್ಕಾರ ತಲೆಬಾಗಿದೆ.

ಇದು ಅಲ್ಪಸಂಖ್ಯಾತರ ವಿರುದ್ಧ ರಾಜ್ಯ ಸರ್ಕಾರದ ಇತ್ತೀಚಿನ ನಡೆ. ವಿದ್ಯಾರ್ಥಿಗಳ ಉಡುಗೆಯಲ್ಲಿ ಯಾವುದೇ ಧಾರ್ಮಿಕ ಚಿಹ್ನೆಗೆ ಅವಕಾಶ ನೀಡುವುದಿಲ್ಲ ಎಂಬ ಹೆಸರಿನಲ್ಲಿ ಮುಸ್ಲಿಂ ಹುಡುಗಿಯರ ಶಿಕ್ಷಣದ ಹಕ್ಕನ್ನು ಕಸಿದುಕೊಳ್ಳಲಾಗುತ್ತಿದೆ.

ಸಚಿವರು, ಮಂತ್ರಿಗಳು, ಸಂಸತ್ ಸದಸ್ಯರ ಸರಣಿ ಹೇಳಿಕೆಗಳು ಮುಸ್ಲಿಮರನ್ನು ಅವರ ಧಾರ್ಮಿಕ ಅಸ್ಮಿತೆಗಾಗಿ ಗುರಿ ಮಾಡುತ್ತಿರುವುದನ್ನು ಸ್ಪಷ್ಟಪಡಿಸುತ್ತವೆ. ಅವರನ್ನು ಎರಡನೇ ದರ್ಜೆಯ ನಾಗರಿಕರನ್ನಾಗಿ ಪರಿಗಣಿಸಲಾಗುತ್ತಿದೆ ಹಾಗೂ ಸಂವಿಧಾನ ದತ್ತವಾದ ಸಮಾನ ಹಕ್ಕುಗಳನ್ನು ನಿರಾಕರಿಸಲಾಗುತ್ತಿದೆ ಎನ್ನುವುದನ್ನು ಸಂಸದ ಪ್ರತಾಪ್ ಸಿಂಹ ಹೇಳಿಕೆ ಸ್ಪಷ್ಟಪಡಿಸುತ್ತದೆ. 'ನೀವು ಹಿಜಾಬ್, ಬುರ್ಖಾ ಧರಿಸಬಹುದು... ಮತ್ತು ಮದರಸಾಕ್ಕೆ ಹೋಗಿ' ಎಂದವರು ಹೇಳಿದ್ದಾರೆ.

ಕರ್ನಾಟಕದಲ್ಲಿ ನಡೆಯುತ್ತಿರುವ ಒಟ್ಟಾರೆ ವಿದ್ಯಮಾನಗಳಿಂದ ಹಿಜಾಬ್ ಪ್ರಶ್ನೆಯನ್ನು ಪ್ರತ್ಯೇಕವಾಗಿ ನೋಡಲು ಸಾಧ್ಯವಿಲ್ಲ. 2019ರಲ್ಲಿ ಕಾಂಗ್ರೆಸ್–ಜೆಡಿಎಸ್ ಸರ್ಕಾರ ಉರುಳಿಸಿ ಅಧಿಕಾರಕ್ಕೆ ಮರಳಿದಾಗಿನಿಂದ ರಾಜ್ಯದ ಮೇಲೆ ಹಿಂದುತ್ವ ಅಜೆಂಡಾವನ್ನು ಹೇರಲು ಬಿಜೆಪಿ ಶತಾಯಗತಾಯ ಪ್ರಯತ್ನಿಸುತ್ತಿದೆ. ಎಲ್ಲ ಬಗೆಯ ಜಾನುವಾರುಗಳ ವಧೆಯ ವಿರುದ್ಧದ ಕಠಿಣ ಕಾನೂನನ್ನು 2020ರಲ್ಲಿ ಅಂಗೀಕರಿಸಿದೆ. ಹಸುಗಳ ವ್ಯಾಪಾರ ಮತ್ತು ಗೋಮಾಂಸ ಮಾರಾಟದಲ್ಲಿ ತೊಡಗಿರುವವರು ಇರುವಂಥ ಮುಸ್ಲಿಂ ಸಮುದಾಯ ಇದರ ಪ್ರಮುಖ ಗುರಿ. ಅದಾದ ನಂತರ, ಬಲವಂತದ ಮತಾಂತರ ತಡೆಯುವ ಹೆಸರಿನಲ್ಲಿ ಕ್ರೈಸ್ತ ಸಮುದಾಯವನ್ನು ಗುರಿಯಾಗಿಸಿ ತಥಾಕಥಿತ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ರಕ್ಷಣೆ ಮಸೂದೆ 2021ನ್ನು ಅಂಗೀಕರಿಸಲಾಯಿತು. ಅಂತರ್‌ಧರ್ಮೀಯ ಮದುವೆಗಳ ಮೇಲೆ ಕೂಡ ಅದು ಗುರಿಯಿಟ್ಟಿದೆ: ಬೇರೆ ಬೇರೆ ಧರ್ಮಗಳ ಪುರುಷರು ಮತ್ತು ಮಹಿಳೆಯರ ಸಾಮಾಜಿಕ ಸಮ್ಮಿಳನವನ್ನು ಗುರಿಯಾಗಿಸಿ ದಾಳಿ ಮಾಡುವ ಲಜ್ಜೆಗೇಡಿ ಘಟನೆಗಳು ಹೆಚ್ಚು ಹೆಚ್ಚಾಗಿ ರಾಜ್ಯದ ಕರಾವಳಿ ಜಿಲ್ಲೆಗಳಲ್ಲಿ ನಡೆಯುತ್ತಿವೆ.

ಪಿಯು ಕಾಲೇಜ್‌ಗಳಲ್ಲಿ ಹಿಜಾಬ್ ಧರಿಸಬಾರದೆಂದು ಆದೇಶ ಹೊರಡಿಸಿದ ಇಲಾಖೆಯೇ ದೇಶದ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ರಾಜ್ಯದಾದ್ಯಂತ ಕಾಲೇಜ್‌ಗಳಲ್ಲಿ ಒಂದು ವಾರ ಕಾಲ ಸೂರ್ಯ ನಮಸ್ಕಾರ ಕಾರ್ಯಕ್ರಮ ನಡೆಸಲು ಆದೇಶಿಸಿದ್ದು ದೊಡ್ಡ ವ್ಯಂಗ್ಯವಾಗಿದೆ.

ಕರ್ನಾಟಕ ಸರ್ಕಾರ ಮುಸ್ಲಿಂ ಹುಡುಗಿಯರು ಶಿಕ್ಷಣ ಪಡೆಯುವ ಮೂಲಭೂತ ಹಕ್ಕಿನ ವಿರುದ್ಧ ವರ್ತಿಸಿದೆ. ಶೈಕ್ಷಣಿಕ ಸಂಸ್ಥೆಯಲ್ಲಿ ಧಾರ್ಮಿಕ ಅಸ್ಮಿತೆಯನ್ನು ಪ್ರದರ್ಶಿಸಬಾರದು ಎಂದಾದರೆ ಸಿಖ್ ಹುಡುಗರು ಮುಂಡಾಸು ಧರಿಸಿ ಶಾಲೆಗಳಿಗೆ ಹೋಗಬಾರದೆಂದು ಅರ್ಥವೇ?. ಮುಸ್ಲಿಂ ಹುಡುಗಿಯರು ಹಿಜಾಬ್ ಹಾಕಿಕೊಳ್ಳುವುದು ಅಥವಾ ಸಿಖ್ ಹುಡುಗರು ಮುಂಡಾಸು ಧರಿಸುವುದು ಅಗತ್ಯ ಧಾರ್ಮಿಕ ಆಚರಣೆಯಾಗಿದೆ.

ಕರ್ನಾಟಕದಲ್ಲಿ ಹಿಜಾಬ್ ಧರಿಸುವ ಹುಡುಗಿಯರನ್ನು ಶಿಕ್ಷಣದಿಂದ ವಂಚಿಸುವ ಯತ್ನಿಸುವುದರ ಹಿಂದೆ ಕರ್ನಾಟಕದಲ್ಲಿ ಮುಸ್ಲಿಮರನ್ನು ದ್ವಿತೀಯ ದರ್ಜೆ ಪ್ರಜೆಗಳನ್ನಾಗಿ ಮಾಡುವ ಹುನ್ನಾರ ಅಡಗಿದೆ. ನಾಗರಿಕರ ಒಂದು ವಿಭಾಗದ ಸಾಂವಿಧಾನಿಕ ಹಕ್ಕುಗಳಿಗೆ ಸಂಬಂಧಿಸಿದ ಮೂಲಭೂತ ಮಹತ್ವದ ವಿಚಾರ ಇದಾಗಿದೆ. ಕೆಲವು ಸಂತ್ರಸ್ತ ವಿದ್ಯಾರ್ಥಿನಿಯರು ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸಿದ ಕರ್ನಾಟಕ ಹೈ ಕೋರ್ಟ್ ಅದನ್ನು ವಿಸ್ತ್ರತ ಪೀಠಕ್ಕೆ ಒಪ್ಪಿಸಿದೆ. ಸಂವಿಧಾನದಲ್ಲಿ ಅಲ್ಪಸಂಖ್ಯಾತರಿಗೆ ಒದಗಿಸಿರುವ ಖಾತರಿಗಳಿಗೆ ಅನುಗುಣವಾಗಿ, ಕರ್ನಾಟಕ ಸಕಾರದ ಪಕ್ಷಪಾತಿ ಆದೇಶವನ್ನು ಕೋರ್ಟ್ ರದ್ದುಪಡಿಸೀತೆಂದು ನಿರೀಕ್ಷಿಸಬಹುದಾಗಿದೆ.

ಅನು: ವಿಶ್ವ

ಬೇಟಿ ಬಚಾವೋ
ಬೇಟಿ ಪಢಾವೋ
..........ಮತ್ತು....



......ಬೇಟಿ ಲಡಾವೋ!
ವ್ಯಂಗ್ಯಚಿತ್ರ: ಆರ್.ಪ್ರಸಾದ್, ಇಕನಾಮಿಕ್ ಟೈಮ್ಸ್



ವ್ಯಂಗ್ಯಚಿತ್ರ:
ಪಿ. ಮಹಮ್ಮದ್,
ಆಂದೋಲನ

ಕರ್ನಾಟಕ ಚುನಾವಣೆ 2023
ನನಗೆ ಈ ಟ್ರಾಫಿ ಬೇಕು.
ಅವರು ಹಿಂದು-ಮುಸ್ಲಿಂ ಆಟ
ಆಡುವಂತೆ ಮಾಡಿ, ಮಾಸ್ಟ್ರೇ.
ವ್ಯಂಗ್ಯಚಿತ್ರ:
ಸತೀಶ ಆಚಾರ್ಯ



ಬಲಿಷ್ಠ ಕಮ್ಯುನಿಸ್ಟ್ ಪಕ್ಷವನ್ನು ಕಟ್ಟುವುದನ್ನು ಬಲಪಡಿಸುವ ನಮ್ಮ ಸಂಕಲ್ಪವನ್ನು ದ್ವಿಗುಣಗೊಳಿಸೋಣ!

(23ನೇ ಮಹಾಧಿವೇಶನದ ಕರಡು ರಾಜಕೀಯ ವರದಿಯ ಆಯ್ದ ಅಂಶಗಳು)

ಎಪ್ರಿಲ್ 6 ರಿಂದ ಕೇರಳದ ಕಣ್ಣೂರಿನಲ್ಲಿ ನಡೆಯಲಿರುವ ಸಿಪಿಐ(ಎಂ)ನ 23ನೇ ಮಹಾಧಿವೇಶನದಲ್ಲಿ ಮಂಡಿಸಲಾಗುವ ರಾಜಕೀಯ ನಿರ್ಣಯದ ಕರಡನ್ನು ಫೆಬ್ರುವರಿ 4ರಂದು ಪಕ್ಷದ ಕೇಂದ್ರ ಸಮಿತಿಯ ಕಚೇರಿಯಲ್ಲಿ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಮತ್ತು ಇತರ ಪೊಲಿಟ್‌ಬ್ಯುರೊ ಸದಸ್ಯರು ಬಿಡುಗಡೆ ಮಾಡಿದರು. ಇವನ್ನು ಎಲ್ಲ ರಾಜ್ಯ ಭಾಷೆಗಳಲ್ಲಿ ಅನುವಾದಿಸಿ ಮುಂದಿನ ಎರಡು ತಿಂಗಳುಗಳ ಕಾಲ ದೇಶಾದ್ಯಂತ ಪಕ್ಷದ ಸದಸ್ಯರು ಚರ್ಚಿಸಿ ತಿದ್ದುಪಡಿಗಳನ್ನು ಕಳಿಸುತ್ತಾರೆ. ಈ ತಿದ್ದುಪಡಿಗಳನ್ನು ಕುರಿತಂತೆ ಒಂದು ವರದಿಯನ್ನು ಈ ಕರಡಿನ ಜತೆಗೆ ಮಹಾಧಿವೇಶನದಲ್ಲಿ ಮಂಡಿಸಲಾಗುವುದು, ಇದು ಪಕ್ಷದಲ್ಲಿರುವ ಚೈತನ್ಯಶೀಲ ಆಂತರಿಕ ಪ್ರಜಾಪ್ರಭುತ್ವದ ದ್ಯೋತಕ ಎಂದು ಯೆಚುರಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡುತ್ತ ಹೇಳಿದರು.

ಈ ಕರಡಿನ ಆಯ್ದ ಅಂಶಗಳನ್ನು ಪತ್ರಿಕೆಗಳಿಗೆ ಬಿಡುಗಡೆ ಮಾಡಲಾಯಿತು. ಅದನ್ನು ಈ ಮುಂದೆ ಕೊಡಲಾಗಿದೆ:

22 ನೇ ಮಹಾಧಿವೇಶನದ ನಂತರದ ಅವಧಿಯು ಬಿಜೆಪಿಯ ಮತ್ತಷ್ಟು ಕ್ರೋಡೀಕರಣವನ್ನು ಕಂಡಿದೆ, ಅದು ಸರ್ಕಾರದಲ್ಲಿದ್ದು ಫ್ಯಾಸಿಸ್ಟ್ ತೆರನ ಆರ್‌ಎಸ್‌ಎಸ್‌ನ ಹಿಂದುತ್ವ ಅಜೆಂಡಾವನ್ನು ಆಕ್ರಮಣಕಾರಿಯಾಗಿ ಅನುಸರಿಸುತ್ತಿದೆ. ಕೋಮುವಾದಿ–ಕಾರ್ಪೊರೇಟ್ ಸಂಬಂಧವನ್ನು ಬಲಪಡಿಸುವ, ರಾಷ್ಟ್ರೀಯ ಸ್ವತ್ತುಗಳ ಲೂಟಿಯ, ಬಂಟ ಬಂಡವಾಳಶಾಹಿಯನ್ನು ಉತ್ತೇಜಿಸುವ, ರಾಜಕೀಯ ಭ್ರಷ್ಟಾಚಾರವನ್ನು ಕಾನೂನುಬದ್ಧಗೊಳಿಸುವುದು ಮತ್ತು ಪೂರ್ಣ ಪ್ರಮಾಣದ ನಿರಂಕುಶಾಧಿಕಾರವನ್ನು ಹೇರುವ ಉನ್ಮತ್ತ ನವ–ಉದಾರವಾದಿ ಸುಧಾರಣೆಗಳನ್ನು ಅನುಸರಿಸುವ ಮೂಲಕ ಇದು ಬಹುಮುಖೀ ದಾಳಿಯನ್ನು ನಡೆಸಿದೆ.

ಒಂದು ಕೋಮುವಾದಿ ರಾಷ್ಟ್ರೀಯವಾದಿ ಅಬ್ಬರದ ಕಥನವನ್ನು ಕಟ್ಟುವ ಮೂಲಕ ಹೆಚ್ಚು ಸ್ಥಾನಗಳು ಮತ್ತು ಹೆಚ್ಚಿನ ಶೇಕಡಾವಾರು ಮತಗಳೊಂದಿಗೆ 2019 ರ ಚುನಾವಣೆಗಳ ನಂತರ ಬಿಜೆಪಿ ಮರಳಿ ಸರ್ಕಾರವನ್ನು ರಚಿಸಿತು. ಅಂದಿನಿಂದ, ಉನ್ಮತ್ತ ಕೋಮು ಧ್ರುವೀಕರಣವನ್ನು ತೀಕ್ಷ್ಣಗೊಳಿಸುತ್ತ ಮತ್ತು ನಮ್ಮ ಜಾತ್ಯತೀತ ಪ್ರಜಾಸತ್ತಾತ್ಮಕ ಸಂವಿಧಾನದ ಅಡಿಪಾಯವನ್ನು ದುರ್ಬಲಗೊಳಿಸುತ್ತ ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ವಿಸರ್ಜಿಸುವುದನ್ನುಮತ್ತು ಸಂವಿಧಾನದ 370 ಮತ್ತು 35ಎ ವಿಧಿಗಳನ್ನು ರದ್ದುಗೊಳಿಸುವುದನ್ನು ಪ್ರಾರಂಭಿಸಿತು; ಸಂವಿಧಾನ ವಿರೋಧಿ ಪೌರತ್ವ ತಿದ್ದುಪಡಿ ಕಾಯಿದೆ (ಸಿಎಎ) ಯನ್ನು ತಂದಿತು; ಅಯೋಧ್ಯೆಯಲ್ಲಿ ದೇವಾಲಯದ ನಿರ್ಮಾಣವನ್ನು ಪ್ರಾರಂಭಿಸಿತು ಮತ್ತು ಕರಾಳ ನಿವಾರಣಾ ಸ್ಥಾನಬದ್ಧತೆಯ ಕಾನೂನುಗಳ ಸಂಪೂರ್ಣ ದುರುಪಯೋಗದ ಮೂಲಕ ಜನರ ಪ್ರಜಾಸತ್ತಾತ್ಮಕ ಹಕ್ಕುಗಳು ಮತ್ತು ನಾಗರಿಕ ಸ್ವಾತಂತ್ರ್ಯಗಳ ಮೇಲೆ ನಿರ್ದಯವಾಗಿ ದಾಳಿ ನಡೆಸಿದೆ. ಭಾರತೀಯ ಸಾಂವಿಧಾನಿಕ ಗಣರಾಜ್ಯದ ಚಾರಿತ್ರ್ಯವನ್ನು ಬದಲಾಯಿಸಲು ನಿರಂತರ ಪ್ರಯತ್ನಗಳು ನಡೆಯುತ್ತಿವೆ.

ಈ ಅವಧಿಯಲ್ಲಿ ದುಡಿಯುವ ಜನರ ವಿವಿಧ ವಿಭಾಗಗಳಿಂದ ಮೋದಿ ಸರ್ಕಾರದ ನೀತಿಗಳಿಗೆ ಪ್ರತಿರೋಧ ಹೆಚ್ಚುತ್ತಿರುವುದು ಕಂಡಿತು. ಕಾರ್ಮಿಕ ವರ್ಗವು ಸಾರ್ವತ್ರಿಕ ಮತ್ತು ವಲಯವಾರು ಮುಷ್ಕರಗಳ ಮೂಲಕ ಹೊಸ ಕಾರ್ಮಿಕ ಸಂಹಿತೆಗಳು ಮತ್ತು ಖಾಸಗೀಕರಣದ ಧಾವಂತದ ವಿರುದ್ಧ ಪ್ರತಿಭಟಿಸಿತು. ಸಿಎಎ–ವಿರೋಧಿ ಚಳುವಳಿಯು ಸಂವಿಧಾನ ಮತ್ತು ಪೌರತ್ವವನ್ನು ಬುಡಮೇಲು ಮಾಡುವುದರ ವಿರುದ್ಧ ಒಂದು ಸಾಮೂಹಿಕ ಪ್ರತಿಭಟನೆಯಾಗಿ ಬೆಳೆದುಬಂತು. ರೈತರ ಅತಿದೊಡ್ಡ ಮತ್ತು ಸುದೀರ್ಘ ಹೋರಾಟವು ಮೂರು ಕೃಷಿ ಕಾನೂನುಗಳನ್ನು ರದ್ದುಗೊಳಿಸುವುದರೊಂದಿಗೆ ಐತಿಹಾಸಿಕ ವಿಜಯದಲ್ಲಿ ಕೊನೆಗೊಂಡಿತು.

ಈ ನಾಲ್ಕು ವರ್ಷಗಳಲ್ಲಿ, ಬಿಜೆಪಿ ಸರ್ಕಾರವು ಅಮೆರಿಕ ಸಂಯುಕ್ತ ಸಂಸ್ಥಾನಗಳ ಸಾಮರಿಕ, ರಾಜಕೀಯ ಮತ್ತು ಭದ್ರತಾ ತಂತ್ರಗಳಿಗೆ ಸಂಪೂರ್ಣವಾಗಿ ಶರಣಾಯಿತು, ಅಮೆರಿಕನ್ ಸಾಮ್ರಾಜ್ಯಶಾಹಿಯ ದೃಢ ಅಡಿಯಾಳು ಮಿತ್ರನಾಗಿ ಹೊರಹೊಮ್ಮಿದೆ. ಇದು ನಮ್ಮ ನೆರೆಹೊರೆಯವರೊಂದಿಗಿನ ಸಂಬಂಧ ಮತ್ತು ಭಾರತದ ಅಂತರಾಷ್ಟ್ರೀಯ ಪ್ರತಿಷ್ಠೆಯ ಮೇಲೆ ಗಂಭೀರ ಪರಿಣಾಮಗಳನ್ನು ಬೀರುತ್ತಿದೆ. ಇಂದು ಭಾರತದ ಪರಿಸ್ಥಿತಿಯ ಮೇಲೆ ನೇರವಾದ ಪ್ರಭಾವ ಬೀರುವ ಮಹತ್ವದ ಜಾಗತಿಕ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಇದು ಸಂಭವಿಸುತ್ತಿದೆ.

ಸಿಪಿಐ(ಎಂ) ಕೇಂದ್ರ ಸಮಿತಿ ಪಕ್ಷದ ಸಂವಿಧಾನಕ್ಕೆ ಈ ಎರಡು ತಿದ್ದುಪಡಿಗಳನ್ನು ಮಹಾಧಿವೇಶನ ಪರಿಶೀಲಿಸಿ ಅಂಗೀಕರಿಸಬೇಕು ಎಂದು ಸೂಚಿಸಿದೆ:

ನಿಬಂಧನೆ 16: ಕೇಂದ್ರ ಸಮಿತಿ

(ಇದನ್ನು ಅನುಚ್ಛೇದ 16 ಆಗಿ ಸೇರಿಸುವುದು:)

“ಕೇಂದ್ರ ಸಮಿತಿಗೆ ಚುನಾಯಿಸುವ ಸದಸ್ಯರಿಗೆ ವಯೋಮಿತಿಯ ಅರ್ಹತೆ ಮತ್ತು ಮಹಿಳೆಯರಿಗೆ ಒಂದು ಕೋಟಾವನ್ನು ನಿಗದಿ ಮಾಡಬಹುದು. ರಾಜ್ಯ ಸಮಿತಿಗಳಿಗೆ ಚುನಾಯಿತರಾಗುವವರಿಗೆ ವಯೋಮಿತಿ ಮತ್ತು ಮಹಿಳೆಯರಿಗೆ ಕೋಟಾ ನಿಗದಿಗೆ ಮಾರ್ಗಸೂತ್ರಗಳನ್ನು ಕೇಂದ್ರ ಸಮಿತಿ ವಿಧಿಸಬಹುದು.

ನಿಬಂಧನೆ 19: ಪಕ್ಷದ ಶಿಸ್ತು

(ಅನುಚ್ಛೇದ 3ರ ಕೊನೆಯಲ್ಲಿ ಇದನ್ನು ಸೇರಿಸುವುದು)

ಇದರಲ್ಲಿ ಕೌಟುಂಬಿಕ ಹಿಂಸೆ ಅಥವ ಲೈಂಗಿಕ ಕಿರುಕುಳವಾಗುವ ಯಾವುದೇ ಕೃತ್ಯಗಳು ಸೇರಿರುತ್ತವೆ.

ರಾಜಕೀಯ ನಿಲುವು

1) ಬಿಜೆಪಿ ಸರ್ಕಾರದ ಸುಮಾರು ಎಂಟು ವರ್ಷಗಳ ಕೋಮುವಾದಿ ಕಾರ್ಪೊರೇಟ್ ನಂಟುಗಳ ಕ್ರೋಡೀಕರಣ ಸರ್ವಾಧಿಕಾರಶಾಹಿ ದಾಳಿಗಳನ್ನು ನಡೆಸುತ್ತಿದೆ. 2019 ರಲ್ಲಿ ಸರ್ಕಾರಕ್ಕೆ ಮರಳಿದ ನಂತರ ಇದು ಫ್ಯಾಸಿಸ್ಟ್ ತೆರನ ಆರೆಸ್ಸೆಸ್ ನ ಹಿಂದೂರಾಷ್ಟ್ರದ ಕಾರ್ಯಸೂಚಿಯನ್ನು ಆಕ್ರಮಣಕಾರಿಯಾಗಿ ಮುಂದೊತ್ತುತ್ತಿದೆ. ಇದರೊಂದಿಗೇ ಅಷ್ಟೇ ಆಕ್ರಮಣಕಾರಿಯಾದ ನವ–ಉದಾರವಾದಿ ನೀತಿಗಳು ಮತ್ತು ಹೆಚ್ಚೆಚ್ಚು ಸರ್ವಾಧಿಕಾರಶಾಹೀ ಆಳ್ವಿಕೆ ನಡೆಸುತ್ತಿದೆ. ಆರ್‌ಎಸ್‌ಎಸ್ ಮುಂದೊತ್ತುತ್ತಿರುವ ಹಿಂದುತ್ವ ರಾಷ್ಟ್ರದ ಅಜೆಂಡಾವು ಸಾಂವಿಧಾನಿಕ ಚೌಕಟ್ಟನ್ನು ಮಾರಕ ರೀತಿಯಲ್ಲಿ ಕೊರೆದು ಹಾಕುತ್ತಿದೆನಾಶಪಡಿಸುತ್ತಿದೆ ಮತ್ತು ಭಾರತೀಯ ಗಣತಂತ್ರದ ಜಾತ್ಯತೀತ ಪ್ರಜಾಸತ್ತಾತ್ಮಕ ಚಾರಿತ್ರ್ಯವನ್ನು ಧ್ವಂಸಮಾಡುತ್ತಿದೆ.
2) ಹೀಗಾಗಿ, ಬಿಜೆಪಿಯನ್ನು ಪ್ರತ್ಯೇಕಿಸುವುದು ಮತ್ತು ಸೋಲಿಸುವುದೇ ಮುಖ್ಯ ಕಾರ್ಯಭಾರ. ಇದಕ್ಕೆ ಜನರನ್ನು ಒಂದು ಬಲಿಷ್ಟ ಸಮರಧೀರ ವಿಧಾನದಲ್ಲಿ ವರ್ಗ ಮತ್ತು ಸಾಮೂಹಿಕ ಹೋರಾಟಗಳಲ್ಲಿ ಸಜ್ಜುಗೊಳಿಸಲು ಸಿಪಿಐ(ಎಂ) ಮತ್ತು ಎಡ ಶಕ್ತಿಗಳ ಸ್ವತಂತ್ರ ಶಕ್ತಿಯ ಬೆಳವಣಿಗೆಯು ಅಗತ್ಯವಿದೆ.
3) ಹಿಂದುತ್ವದ ಅಜೆಂಡಾ ಮತ್ತು ಕೋಮುವಾದಿ ಶಕ್ತಿಗಳ ಚಟುವಟಿಕೆಗಳ ವಿರುದ್ಧ ಹೋರಾಟಕ್ಕೆ ನೇತೃತ್ವ ಕೊಡಲು ಕೂಡ ಪಕ್ಷ ಮತ್ತು ಎಡ ಶಕ್ತಿಗಳನ್ನು ಬಲಪಡಿಸುವ ಅಗತ್ಯವಿದೆ. ಹಿಂದುತ್ವ ಕೋಮುವಾದದ ವಿರುದ್ಧವಿರುವ ಜಾತ್ಯತೀತ ಶಕ್ತಿಗಳನ್ನು ವಿಶಾಲ ನೆಲೆಯಲ್ಲಿ ಸಜ್ಜುಗೊಳಿಸಲು ಪಕ್ಷವು ಕೆಲಸ ಮಾಡಬೇಕು.
4) ನವ–ಉದಾರವಾದಿ ನೀತಿಗಳ ಆಕ್ರಮಣಕಾರಿ ಅನುಸರಣೆಯ ವಿರುದ್ಧ, ನಮ್ಮ ರಾಷ್ಟ್ರೀಯ ಆಸ್ತಿಗಳ ಸಂಪೂರ್ಣ ಲೂಟಿಯ ವಿರುದ್ಧ, ಸಾರ್ವಜನಿಕ ವಲಯ, ಸಾರ್ವಜನಿಕ ಸೇವೆಗಳು ಮತ್ತು ಖನಿಜ ಸಂಪನ್ಮೂಲಗಳ ದೊಡ್ಡ ಪ್ರಮಾಣದ ಖಾಸಗೀಕರಣದ ವಿರುದ್ಧ ವ್ಯಾಪಕ ನೆಲೆಯಲ್ಲಿ ಜನರನ್ನು ಸಜ್ಜುಗೊಳಿಸಲು ಪಕ್ಷವು ಮುಂಚೂಣಿಯಲ್ಲಿರಬೇಕು.ಇತ್ತೀಚಿನ ರೈತ ಹೋರಾಟದಂತಹ ವರ್ಗ ಮತ್ತು ಸಾಮೂಹಿಕ ಹೋರಾಟಗಳನ್ನು ತೀವ್ರಗೊಳಿಸುವ ಮೂಲಕವಷ್ಟೇ ಕಾರ್ಪೊರೇಟ್–ಕೋಮುವಾದಿ ಆಳ್ವಿಕೆಯ ವಿರುದ್ಧ ಜನರನ್ನು ಮತ್ತು ಮತ್ತು ಜಾತ್ಯತೀತವಾಗಿರುವ ವಿರೋಧ ಶಕ್ತಿಗಳನ್ನು ಸಾಧ್ಯವಾದಷ್ಟು ವಿಶಾಲ ನೆಲೆಯಲ್ಲಿ ಅಣಿನೆರೆಸಲು ಸಾಧ್ಯ.
5) ಹಿಂದುತ್ವ–ಕಾರ್ಪೊರೇಟ್ ಆಳ್ವಿಕೆಯ ವಿರುದ್ಧದ ಹೋರಾಟದ ಯಶಸ್ಸಿಗೆ ಹಿಂದುತ್ವ ಕೋಮುವಾದಿ ಶಕ್ತಿಗಳ ವಿರುದ್ಧ ಮತ್ತು ನವ–ಉದಾರವಾದಿ ನೀತಿಗಳ ವಿರುದ್ಧ ಏಕಕಾಲದಲ್ಲಿ ಹೋರಾಟ ನಡೆಸಬೇಕಾದ ಅಗತ್ಯವಿದೆ.
6) ಪಕ್ಷವು ಸಂಸತ್ತಿನಲ್ಲಿ ಜಾತ್ಯತೀತ ಪ್ರತಿಪಕ್ಷಗಳೊಂದಿಗೆ ಪರಸ್ಪರ ಸಹಮತಿಯ ವಿಷಯಗಳಲ್ಲಿ ಸಹಕರಿಸುತ್ತದೆ. ಸಂಸತ್ತಿನ ಹೊರಗೆ ಪಕ್ಷವು ಕೋಮುವಾದಿ ಕಾರ್ಯಸೂಚಿಯ ವಿರುದ್ಧ ಎಲ್ಲಾ ಜಾತ್ಯತೀತ ಶಕ್ತಿಗಳ ವಿಶಾಲ ಅಣಿನೆರಿಕೆಗೆ ಕೆಲಸ ಮಾಡುತ್ತದೆ. ಪಕ್ಷ ಮತ್ತು ಎಡಪಂಥೀಯರು ಸ್ವತಂತ್ರವಾಗಿ ಮತ್ತು ಇತರ ಪ್ರಜಾಸತ್ತಾತ್ಮಕ ಶಕ್ತಿಗಳೊಂದಿಗೆ ಒಟ್ಟಾಗಿ, ಜನಗಳ ಪ್ರಶ್ನೆಗಳ ಆಧಾರದ ಮೇಲೆ, ನವ–ಉದಾರವಾದದ ಪ್ರಹಾರಗಳು, ಪ್ರಜಾಪ್ರಭುತ್ವದ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ಸರ್ವಾಧಿಕಾಶಾಹೀ ದಾಳಿಗಳು ಮತ್ತು ಕರಾಳ ಕಾನೂನುಗಳನ್ನು ಬಳಸಿ ಭಿನ್ನಾಭಿಪ್ರಾಯಗಳ ನಿಗ್ರಹದ ವಿರುದ್ಧ ಹೋರಾಡುತ್ತಾರೆ.



7) ಪಕ್ಷವು ವರ್ಗ ಮತ್ತು ಸಾಮೂಹಿಕ ಸಂಘಟನೆಗಳ ಐಕ್ಯ ಕಾರ್ಯಾಚರಣೆಗಳಿಗಾಗಿ ಜಂಟಿ ವೇದಿಕೆಗಳನ್ನು ಬೆಂಬಲಿಸುತ್ತದೆ. ಕಾರ್ಮಿಕ–ರೈತ–ಕೃಷಿ ಕಾರ್ಮಿಕರ ಐಕ್ಯ ಕಾರ್ಯಾಚರಣೆಗಳನ್ನು ಬಲಪಡಿಸುವ ಎಲ್ಲಾ ಕ್ರಮಗಳನ್ನು ಪಕ್ಷ ಬೆಂಬಲಿಸುತ್ತದೆ.
8) ಪಕ್ಷದ ಸ್ವತಂತ್ರ ಶಕ್ತಿಯನ್ನು ಅಭಿವೃದ್ಧಿಪಡಿಸುವುದಕ್ಕೆ, ಜತೆಗೆ ಎಡಪಕ್ಷಗಳ ಏಕತೆಯನ್ನು ಬಲಪಡಿಸುವ ಪ್ರಯತ್ನಗಳಿಗೆ ಆದ್ಯತೆ ನೀಡಬೇಕು. ಐಕ್ಯ ಎಡ ಪ್ರಚಾರ–ಪ್ರಕ್ಷೋಭೆಗಳು ಮತ್ತು ಹೋರಾಟಗಳು ಬೂರ್ಜ್ವಾ ಭೂಮಾಲೀಕ ಆಳುವ ವರ್ಗಗಳ ನೀತಿಗಳಿಗೆ ಪರ್ಯಾಯವಾದ ನೀತಿಗಳನ್ನು ಎತ್ತಿ ತೋರಿಸಬೇಕು.
9) ಸಾಮೂಹಿಕ ಸಂಘಟನೆಗಳು ಮತ್ತು ಸಾಮಾಜಿಕ ಚಳುವಳಿಗಳು ಸೇರಿದಂತೆ ಎಲ್ಲಾ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಒಟ್ಟುಗೂಡಿಸಲು ಪಕ್ಷವು ನಿರಂತರ ರೀತಿಯಲ್ಲಿ ಕೆಲಸ ಮಾಡಬೇಕು. ಎಡ ಮತ್ತು ಪ್ರಜಾಸತ್ತಾತ್ಮಕ ವೇದಿಕೆಯು ಎಡ ಮತ್ತು ಪ್ರಜಾಸತ್ತಾತ್ಮಕ ಕಾರ್ಯಕ್ರಮಗಳನ್ನು ಪರ್ಯಾಯ ನೀತೀಗಳಾಗಿ ಎತ್ತಿ ತೋರಿಸುವ ಜಂಟಿ ಹೋರಾಟಗಳು ಮತ್ತು ಚಳುವಳಿಗಳನ್ನು ನಡೆಸಬೇಕು.
10) ಚುನಾವಣೆಗಳು ನಡೆಯುವ ಸಮಯದಲ್ಲಿ, ಮೇಲೆ ಹೇಳಿದ ರಾಜಕೀಯ ಮಾರ್ಗವನ್ನು ಆಧರಿಸಿ ಬಿಜೆಪಿ–ವಿರೋಧಿ ಮತಗಳನ್ನು ಗರಿಷ್ಟ ಪ್ರಮಾಣದಲ್ಲಿ ಕ್ರೋಡೀಕರಿಸಲು ಸೂಕ್ತ ಚುನಾವಣಾ ಕಾರ್ಯತಂತ್ರಗಳನ್ನು ಅಂಗೀಕರಿಸಲಾಗುವುದು.

ಪ್ರಸ್ತುತ ಸನ್ನಿವೇಶದಲ್ಲಿ ಕಾರ್ಯಭಾರಗಳು

1) ಪಕ್ಷವು ತನ್ನ ಸ್ವತಂತ್ರ ಪಾತ್ರವನ್ನು ಬಲಪಡಿಸಲು ಆದ್ಯತೆ ನೀಡಬೇಕು, ನಿರಂತರ ವರ್ಗ ಮತ್ತು ಸಾಮೂಹಿಕ ಹೋರಾಟಗಳ ಮೂಲಕ ತನ್ನ ಪ್ರಭಾವ ಮತ್ತು ರಾಜಕೀಯ ಮಧ್ಯಪ್ರವೇಶದ ಸಾಮರ್ಥ್ಯಗಳನ್ನು ವಿಸ್ತರಿಸಬೇಕು. ಜನರ ಸಮಸ್ಯೆಗಳ ಮೇಲೆ ಸ್ಥಳೀಯ ಹೋರಾಟಗಳನ್ನು ಬಲಪಡಿಸಲು, ಅವುಗಳ ಸರಿಯಾದ ಅನುಸರಣೆಗೆ ವಿಶೇಷ ಗಮನ ನೀಡಬೇಕು,
2) ನವ–ಉದಾರವಾದಿ ನೀತಿಗಳಿಂದ ತೀವ್ರತರವಾದ ಆರ್ಥಿಕ ಶೋಷಣೆಗೆ ಒಳಗಾದ ಎಲ್ಲಾ ವಿಭಾಗಗಳ ಜನರನ್ನು ಜೀವನೋಪಾಯದ ಸಮಸ್ಯೆಗಳ ಹೋರಾಟಗಳಲ್ಲಿ ಒಟ್ಟಾಗಿ ಅಣಿನೆರೆಸಸಬೇಕು. ಬೆಳೆದು ಬರುವ ಎಲ್ಲಾ ಸ್ವಯಂಪ್ರೇರಿತ ಹೋರಾಟಗಳಲ್ಲಿ ಪಕ್ಷವು ಅವುಗಳನ್ನು ಬಲಪಡಿಸುವ ಸಲುವಾಗಿ ಸಕ್ರಿಯವಾಗಿ ಮಧ್ಯಪ್ರವೇಶಿಸಬೇಕು ಮತ್ತು

⇨⇨⇨

⇨⇨⇨
ಸೇರಿಕೊಳ್ಳಬೇಕು.

3) ಹಿಂದುತ್ವ ಕೋಮುವಾದದ ವಿರುದ್ಧದ ಹೋರಾಟದಲ್ಲಿ ಪಕ್ಷವು ಮುಂಚೂಣಿಯಲ್ಲಿರಬೇಕು. ಈ ಹೋರಾಟ ಬಹು ಸ್ತರಗಳಲ್ಲಿ ನಿರಂತರ ನಡೆಯಬೇಕಿದೆ. ಹಿಂದುತ್ವ ಶಕ್ತಿಗಳ ಚಟುವಟಿಕೆಗಳನ್ನು ಎದುರಿಸಲು ಸಂಬಂಧಪಟ್ಟ ನಾಗರಿಕರು, ಸಂಘಟನೆಗಳು ಮತ್ತು ಸಾಮಾಜಿಕ ಚಳುವಳಿಗಳು ಸೇರಿದಂತೆ ಜಾತ್ಯತೀತ ಪ್ರಜಾಸತ್ತಾತ್ಮಕ ಶಕ್ತಿಗಳ ವಿಶಾಲವಾದ ಏಕತೆಯನ್ನು ಬೆಸೆಯಬೇಕು.
4) ಪಕ್ಷವು ಸರ್ವಾಧಿಕಾರಶಾಹೀ ಕ್ರಮಗಳನ್ನು ವಿರೋಧಿಸಲು ಮುಂದಾಳತ್ವ ವಹಿಸಬೇಕು ಮತ್ತು ಹಿಂದುತ್ವ ಕೋಮುವಾದದ ಚಟುವಟಿಕೆಗಳ ವಿರುದ್ಧ ಮತ್ತು ಸಾಂವಿಧಾನಿಕ ವ್ಯವಸ್ಥೆಯ ಪ್ರಜಾಸತ್ತಾತ್ಮಕ ಮತ್ತು ಜಾತ್ಯತೀತ ಸತ್ವವನ್ನು ನಾಶಪಡಿಸುವುದರ ವಿರುದ್ಧ, ಮಾನವ ಹಕ್ಕುಗಳು, ಪ್ರಜಾಸತ್ತಾತ್ಮಕ ಹಕ್ಕುಗಳು, ನಾಗರಿಕ ಸ್ವಾತಂತ್ರ್ಯಗಳು, ಕಲಾತ್ಮಕ ಸ್ವಾತಂತ್ರ್ಯ ಮತ್ತು ಶೈಕ್ಷಣಿಕ ಸ್ವಾಯತ್ತತೆಯ ರಕ್ಷಣೆಯಲ್ಲಿ ಜಂಟಿ ಹೋರಾಟಗಳನ್ನು ಬೆಸೆಯಲು ಎಲ್ಲಾ ಪ್ರಜಾಸತ್ತಾತ್ಮಕ ಶಕ್ತಿಗಳ ಸಹಕಾರವನ್ನು ಪಡೆಯಬೇಕು..
5) ಪಕ್ಷವು ಸಾಮಾಜಿಕ ನ್ಯಾಯಕ್ಕಾಗಿ ಹೋರಾಟಗಳನ್ನು ಮುನ್ನಡೆಸುವ ಪ್ರಯತ್ನಗಳನ್ನು ಬಲಪಡಿಸಬೇಕು ಮತ್ತು ಮಹಿಳೆಯರು, ದಲಿತರು ಹಾಗೂ ಆದಿವಾಸಿಗಳ ಮೇಲಿನ ಸಾಮಾಜಿಕ ದಮನದ ವಿರುದ್ಧದ ಪ್ರಶ್ನೆಗಳನ್ನು ಎತ್ತಿಕೊಳ್ಳಬೇಕು.
6) ಹಿಂದುತ್ವ ಕೋಮುವಾದದ ಆಕ್ರಮಣಕಾರಿ ದಾಳಿಗಳ ವಿರುದ್ಧ ಅಲ್ಪಸಂಖ್ಯಾತರ ಹಕ್ಕುಗಳು ಮತ್ತು ಭದ್ರತೆಯನ್ನು ರಕ್ಷಿಸಬೇಕು.
7) ಪಕ್ಷವು ಕಂದಾಚಾರಗಳು, ಮೂಢನಂಬಿಕೆ, ಅತಾರ್ಕಿಕತೆ ಮತ್ತು ಕುರುಡು ವಿಶ್ವಾಸಗಳ ಬೆಳವಣಿಗೆಯ ವಿರುದ್ಧ ಸೈದ್ಧಾಂತಿಕ/ಸಾಮಾಜಿಕ ಹೋರಾಟಗಳನ್ನು ಬಲಪಡಿಸಬೇಕು. ವೈಜ್ಞಾನಿಕ ಮನೋಭಾವವನ್ನು ಬೆಳೆಸಲು ಮತ್ತು ವಿವೇಚನಾಹೀನತೆ ಮತ್ತು ಅವಿವೇಕದ ವಿರುದ್ಧ ವಿವೇಚನೆ ಮತ್ತು ವಿವೇಕದ ಸಾರ್ವಜನಿಕ ಮಂಥನವನ್ನು ಬಲಪಡಿಸುವ ಅಭಿಯಾನಗಳಲ್ಲಿ ಪಕ್ಷವು ಮುಂಚೂಣಿಯಲ್ಲಿರಬೇಕು. ವೈಜ್ಞಾನಿಕ ಮನೋಭಾವದ ರಕ್ಷಣೆಯಲ್ಲಿ ಮತ್ತು ಪುನರುಜ್ಜೀವನವಾದದ ವಿರುದ್ಧ ವಿಶಾಲ ಅಣಿನೆರಿಕೆಯನ್ನು ಬೆಸೆಯಬೇಕು.
8) ಪಕ್ಷವು ನಮ್ಮ ರಾಷ್ಟ್ರೀಯ ಮತ್ತು ಆರ್ಥಿಕ ಸಾರ್ವಭೌಮತ್ವದ ರಕ್ಷಣೆಯಲ್ಲಿ ಭಾರತೀಯ ಜನತೆಯ ನಡುವೆ ಸಾಮ್ರಾಜ್ಯಶಾಹಿ ವಿರೋಧಿ ಪ್ರಜ್ಞೆಯನ್ನು ಜಾಗೃತಗೊಳಿಸಬೇಕು. ಸಮಾಜವಾದವೇ ಬಂಡವಾಳಶಾಹಿಗೆ ನಿಜವಾದ ಏಕೈಕ ಪರ್ಯಾಯ ಎಂಬುದನ್ನು ಎತ್ತಿ ತೋರಿಸುವ ಅಭಿಯಾನಗಳನ್ನು ಬಲಪಡಿಸಬೇಕು.



9) ಅಮೆರಿಕಾದ ಸಾಮ್ರಾಜ್ಯಶಾಹಿಗೆ ಮೋದಿ ಸರ್ಕಾರದ ಶರಣಾಗತಿಯ ವಿರುದ್ಧ ಪಕ್ಷವು ಜನಾಭಿಪ್ರಾಯವನ್ನು ಅಣಿನೆರೆಸಬೇಕು. ಭಾರತದ ಸ್ವತಂತ್ರ ವಿದೇಶಾಂಗ ನೀತಿಯ ಮರುಸ್ಥಾಪನೆಗಾಗಿ ಹೋರಾಟಗಳನ್ನು ಕೈಗೊಳ್ಳಬೇಕು.
10) ಪಕ್ಷವು ಕೇರಳದಲ್ಲಿ ಎಲ್‌ಡಿಎಫ್ ಸರ್ಕಾರದ ರಕ್ಷಣೆಯನ್ನು ಮತ್ತು ಪಕ್ಷದ ವಿರುದ್ಧ ವಿಶೇಷವಾಗಿ ಪಶ್ಚಿಮ ಬಂಗಾಳ ಮತ್ತು ತ್ರಿಪುರಾದಲ್ಲಿ ನಡೆಸಿರುವ ಫ್ಯಾಸಿಸ್ಟ್ ತೆರನ ದಾಳಿಗಳ ವಿರುದ್ಧ ಹೋರಾಟವನ್ನು ಕೈಗೆತ್ತಿಕೊಳ್ಳಬೇಕು.

ತೀರ್ಮಾನಗಳು

ಈ ಕಾರ್ಯಭಾರಗಳನ್ನು ಈಡೇರಿಸಲು ದೇಶಾದ್ಯಂತ ಒಂದು ಪ್ರಬಲ ಕಮ್ಯುನಿಸ್ಟ್ ಪಕ್ಷವನ್ನು ಕಟ್ಟುವುದು ಅತ್ಯಗತ್ಯ. ಮಾರ್ಕ್ಸ್‌ವಾದ ಮತ್ತು ಲೆನಿನ್ ವಾದದ ಆಧಾರದ ಮೇಲೆ ಒಂದು ಬಲವಾದ ಪಕ್ಷವನ್ನು ಸಾಮೂಹಿಕ ನೆಲೆಯಲ್ಲಿ ಕಟ್ಟುವುದು ಕೋಲ್ಕತ್ತಾ ಸಂಘಟನಾ ಪ್ಲೀನಮ್ ತೆಗೆದುಕೊಂಡ ನಿರ್ಧಾರಗಳನ್ನು ಪ್ರಾಮಾಣಿಕವಾಗಿ ಅನುಷ್ಠಾನಗೊಳಿಸುವ ಮೂಲಕ ಮಾತ್ರವೇ ಸಾಧ್ಯ. ಇದು ವಿಶೇಷವಾಗಿ ಈ ಕೆಳಗಿನವುಗಳ ಮೇಲೆ ಗಮನ ಕೇಂದ್ರೀಕರಿಸಬೇಕು:

1) ಜನತೆಯೊಂದಿಗೆ ಬಲವಾದ ಬಂಧಗಳನ್ನು ಸ್ಥಾಪಿಸಲು ಒಂದು ಸಮೂಹ ನಿಲುವಿನ ಕ್ರಾಂತಿಕಾರಿ ಪಕ್ಷವನ್ನು ಬಲಪಡಿಸುವುದು.
2) ಜನತೆಯ ನಡುವೆ ಪಕ್ಷದ ವ್ಯಾಪ್ತಿಯನ್ನು ಮತ್ತು ಪ್ರಭಾವವನ್ನು ವಿಸ್ತಾರಗೊಳಿಸುವುದು ಮತ್ತು ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಅಣಿನೆರೆಸುವುದು.
3) ಕೋಲ್ಕತ್ತಾ ಪ್ಲೀನಮ್ ನಿರ್ದೇಶನದಂತೆ ಗುಣಮಟ್ಟದ ಸದಸ್ಯತ್ವದೊಂದಿಗೆ ಪಕ್ಷದ ಸಂಘಟನೆಯನ್ನು ಬಲಪಡಿಸುವುದು.
4) ಯುವಕರು ಹಾಗೂ ಮಹಿಳೆಯರನ್ನು ಪಕ್ಷದತ್ತ ಸೆಳೆಯುವ ಪ್ರಯತ್ನಗಳ ಮೇಲೆ ಗಮನ ಕೇಂದ್ರೀಕರಿಸುವುದು.
5) ಎಲ್ಲಾ ಪರಕೀಯ ಸಿದ್ಧಾಂತಗಳ ವಿರುದ್ಧ ಸೈದ್ಧಾಂತಿಕ ಹೋರಾಟಗಳನ್ನು ಬಲಪಡಿಸುವುದು.

ಒಂದು ಬಲಿಷ್ಠ ಕಮ್ಯುನಿಸ್ಟ್ ಪಕ್ಷವನ್ನು ಕಟ್ಟುವುದನ್ನು ಬಲಪಡಿಸುವ ನಮ್ಮ ಸಂಕಲ್ಪವನ್ನು ದ್ವಿಗುಣಗೊಳಿಸೋಣ!

ಸಮೂಹ ನಿಲುವಿನ ಕ್ರಾಂತಿಕಾರಿ ಪಕ್ಷದ ಕಡೆಗೆ ಮುನ್ನಡೆಯೋಣ!
ಅಖಿಲ ಭಾರತ ಸಾಮೂಹಿಕ ನೆಲೆಯೊಂದಿಗೆ
ಬಲಿಷ್ಠ ಸಿಪಿಐ(ಎಂ) ಕಡೆಗೆ ಮುನ್ನಡೆಯೋಣ!

ಗಂಗಾವತಿಯಲ್ಲಿ ಜನವರಿ 2 ರಿಂದ 4 ರ ವರೆಗೆ ನಡೆದ ಸಿಪಿಐ(ಎಂ) 23ನೇ ರಾಜ್ಯ ಸಮ್ಮೇಳನ ಅಂಗೀಕರಿಸಿದ ನಿರ್ಣಯಗಳ ಪೂರ್ಣ ಪಾಠಗಳು ಹಿಂದಿನ 4 ಸಂಚಿಕೆಗಳಲ್ಲಿ ಪ್ರಕಟವಾಗಿವೆ. ಈ ಸಂಚಿಕೆಯಲ್ಲಿ ಉಳಿದ ನಿರ್ಣಯಗಳು ಮುಂದಿನ ಪುಟಗಳಲ್ಲಿ ....



ಪ್ರಭುತ್ವ ಗೂಢಚಾರಿಕೆ: ರಾಜ್ಯ ಸರ್ಕಾರದ 'ಮುಕ್ತ ದತ್ತಾಂಶ ನೀತಿ'ಯನ್ನು ಹಿಂಪಡೆಯಬೇಕು

ಬಿಜೆಪಿ ಅಧಿಕಾರಕ್ಕೆ ಬರುವುದರೊಂದಿಗೆ, ನಾಗರಿಕರ ಮೇಲೆ ಗೂಢಚಾರಿಕೆಯ ಪ್ರಭುತ್ವ ಒಂದು ಸಾಧನವಾಗಿ ಬಿಟ್ಟಿದೆ ಮತ್ತು ಅದರ ಪ್ರಮುಖ ಚಟುವಟಿಕೆಗಳಲ್ಲಿ ಒಂದಾಗಿದೆ. ಆರ್ಥಿಕ ಸುಧಾರಣೆಗಳ ತನ್ನ ಕಾರ್ಯಸೂಚಿಯನ್ನು ಮತ್ತು ಹಿಂದುತ್ವ ಪ್ರಭುತ್ವದ ಫ್ಯಾಸಿಸ್ಟ್ ರಾಜಕೀಯ ಅಜೆಂಡಾವನ್ನು ಮುಂದೊತ್ತಲು ವಿಭಿನ್ನ ಕಣ್ಗಾವಲು ಸಾಧನಗಳನ್ನು ಪ್ರಯೋಗಿಸಲು ಅದು ಎಲ್ಲಾ ಅವಕಾಶಗಳನ್ನು ಬಳಸಿಕೊಂಡಿದೆ. ರಾಜ್ಯದಲ್ಲಿ ಬಿಜೆಪಿ ಅಧಿಕಾರದಲ್ಲಿರುವುದರಿಂದ ಗೂಢಚಾರಿಕೆ ಪ್ರಯೋಗದ ರಾಜ್ಯಗಳ ಪಟ್ಟಿಗೆ ಕರ್ನಾಟಕವೂ ಸೇರಿಕೊಂಡಿದೆ. ಅಂತರಾಷ್ಟ್ರೀಯ ಮತ್ತು ರಾಷ್ಟ್ರೀಯ ಬಂಡವಾಳಶಾಹಿ ಯಜಮಾನರುಗಳು ಮತ್ತು ಆರ್ ಎಸ್ ಎಸ್ ಗುರುಗಳು ತನ್ನ ನಾಗರಿಕರ ಮೇಲೆ ಪ್ರಭುತ್ವದ ಗೂಢಚಾರಿಕೆಯನ್ನು ತೀವ್ರಗೊಳಿಸಲು ಅಗತ್ಯ ವಿರುವ ಸಾಕಷ್ಟು ಮೂಲಸೌಕರ್ಯಗಳನ್ನು ನಿರ್ಮಿಸಲು ಒತ್ತಡ ಹಾಕುತ್ತಿದ್ದಾರೆ. ಇದನ್ನು ನಿರ್ಮಿಸುವಲ್ಲಿ ಕರ್ನಾಟಕವು ತೆಲಂಗಾಣಕ್ಕಿಂತ ತುಸುವೇ ಹಿಂದೆ ಇದೆ.

ಈ ಅವಧಿಯಲ್ಲಿ ಪ್ರಭುತ್ವದ ಗೂಢಚಾರಿಕೆ ಮೂಲ ಸೌಕರ್ಯವನ್ನು ಬಲಪಡಿಸಲು ಮಾತ್ರವಲ್ಲದೆ ಹೇಗೆ ಅದನ್ನು ದೇಶ ಮತ್ತು ರಾಜ್ಯದಲ್ಲೂ ಪ್ರಜಾಸತ್ತಾತ್ಮಕ ವಾತಾವರಣವನ್ನು ತನಗೆ ಅನುಕೂಲವಾಗುವಂತೆ ಬದಲಿಸಲು ಬಳಸುವುದನ್ನು ಪ್ರಾರಂಭಿಸಿದೆ ಎಂಬುದನ್ನು ಗಮನಸುವುದು ಮುಖ್ಯವಾಗಿದೆ. ಕೇಂದ್ರ ಸರ್ಕಾರ ಅತ್ಯಂತ ಪ್ರಜಾಪ್ರಭುತ್ವ ವಿರೋಧಿ ವಿಧಾನಗಳಲ್ಲಿ ಸಂಸತ್ತಿನಲ್ಲಿ ಮಸೂದೆಗಳನ್ನು ಸರಣಿ–ಸರಣಿಯಾಗಿ ಅಂಗೀಕರಿಸುತ್ತಿದೆ. ಆಧಾರ್‌ಮಸೂದೆ, ಮಾಹಿತಿ ತಂತ್ರಜ್ಞಾನ ಕಾಯ್ದೆ 2021, ಡಿಎನ್‌ಎ ಮಸೂದೆ, ಚುನಾವಣಾ ಕಾನೂನುಗಳು (ತಿದ್ದುಪಡಿ) ಮಸೂದೆ, 2021 ಇತ್ಯಾದಿಗಳನ್ನು ಪರಿಚಯಿಸಲಾಗಿದೆ. ಒಂದು ದತ್ತಾಂಶ ರಕ್ಷಣೆಯ ಮಸೂದೆಯನ್ನು, ಸಾರ್ವಜನಿಕ ಅಭಿಪ್ರಾಯದ ಅಂಶಗಳನ್ನು ಪರಿಗಣಿಸದೆ ಮತ್ತು ಸಂಸತ್ತಿನಲ್ಲಿ ವಿಧಿ–ಸಮ್ಮತ ಪ್ರಕ್ರಿಯೆಯನ್ನು ಅನುಸರಿಸದೆ ನಾಗರಿಕರ ಸನ್ನದನ್ನು ಉಲ್ಲಂಘಿಸಿ ಅಂಗೀಕರಿಸುವ ಪ್ರಯತ್ನ ನಡೆದಿದೆ.

ಅದರಮೇಲೆ, ಜನರ ಪ್ರತಿರೋಧದ ಧ್ವನಿಗಳನ್ನು ಹತ್ತಿಕ್ಕುವಲ್ಲಿ ಅದು ಅತ್ಯಂತ ಪ್ರಜಾಪ್ರಭುತ್ವ ವಿರೋಧಿ ವಿಧಾನಗಳನ್ನು ಅನುಸರಿಸುತ್ತಿದೆ. ರೈತರ ಆಂದೋಲನದ ಹಿನ್ನೆಲೆಯಲ್ಲಿ ದಿಶಾ ರವಿ ಬಂಧನವು ನಾಗರಿಕರ ಧ್ವನಿಯನ್ನು ತಡೆಯಲು ಕೇಂದ್ರದ ತೋಳು ತಿರುಚುವ ಪ್ರಯತ್ನಗಳಿಗೆ ಸ್ಪಷ್ಟ ಸಾಕ್ಷಿಯಾಗಿದೆ.

ನಾವು ಭಾರತ ದಲ್ಲಿ ಗರಿಷ್ಟ ಸಂಖ್ಯೆಯ ಇಂಟರ್ನೆಟ್ ಸ್ಥಗಿತಗೊಳಿಸುವ ಪ್ರಕರಣಗಳನ್ನು ಅನುಭವಿಸಿದ್ದೇವೆ, ಇದು ಮೂಲಭೂತ ಹಕ್ಕಿನ ಉಲ್ಲಂಘನೆ ಮಾತ್ರವಲ್ಲ, ಸರಕಾರ ತನ್ನ ನಿರ್ಧಾರವನ್ನು ಕಾರ್ಯಗತಗೊಳಿಸಲು ಸರ್ಕಾರವು ಯಾವುದೇ ಕ್ರಮವನ್ನು ಹೇರಲು ಯಾವ ಮಟ್ಟಕ್ಕೆ ಹೋಗಬಹುದು ಎಂಬ ಆತಂಕಕಾರಿ ಪರಿಸ್ಥಿತಿ ಇದೆ.

ಪುಟ 10 ನೋಡಿ

ಮೈಕ್ರೊಫೈನಾನ್ಸ್ ಸಂಸ್ಥೆಗಳ ಕಿರುಕುಳಗಳಿಂದ ಮಹಿಳೆಯರನ್ನು ರಕ್ಷಿಸಬೇಕು

ಕೋವಿಡ್ ಸಾಂಕ್ರಾಮಿಕತೆಯ ಎರಡು ಅಲೆಗಳು ಮತ್ತು ಅಯೋಜಿತವಾದ ಲಾಕ್‌ಡೌನ್‌ನಿಂದ ಸಾಮಾನ್ಯ ಜನತೆ ಅದರಲ್ಲು ಮಹಿಳೆಯರು ಇನ್ನೂ ಚೇತರಿಸಿಕೊಂಡಿಲ್ಲ. ಜೀವನಾಧಾರಗಳನ್ನು ಕಳೆದುಕೊಂಡ ಜನತೆ ಕನಿಷ್ಟ ಅಗತ್ಯಗಳನ್ನು ಪೂರೈಸಿಕೊಳ್ಳಲು ಸಾಲಗಳ ಸುಳಿಗೆ ಸಿಲುಕಿದ್ದು ಹೊರಬರಲು ಹಲವು ನಮೂನೆಯ ದುಡಿಮೆಗೆ ಹೆಗಲು ನೀಡುತ್ತಾ ಜರ್ಜರಿತರಾಗಿದ್ದಾರೆ.

ಬ್ಯಾಂಕುಗಳ ಅಲಭ್ಯತೆ, ಸುಲಭದಲ್ಲಿ ಬ್ಯಾಂಕುಗಳಿಂದ ಸಾಲಸೌಲಭ್ಯಗಳು ಸಿಗದಿರುವುದು, ಸರ್ಕಾರಿ ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳ ಕಾರ್ಯಾಚರಣೆ ಇಲ್ಲದಿರುವುದು, ಬ್ಯಾಂಕ್‌ಗಳಲ್ಲಿ ಗಿರವಿ ಇಡಲು ಆಸ್ತಿ ಮತ್ತು ಒಡವೆಗಳಿಲ್ಲದಿರುವುದು, ಖಾಸಗಿಯಾಗಿ ಸಿಗುವ ಸಾಲದ ಮೇಲಿನ ಅಧಿಕಬಡ್ಡಿ, ಚಕ್ರಬಡ್ಡಿ. ದಲ್ಲಾಳಿಗಳ ಕಿರುಕುಳಗಳು ಇವುಗಳಿಂದ ಹೊರಬರಲು ಪರ್ಯಾಯ ಮಾರ್ಗೋಪಾಯಗಳಿಲ್ಲದೇ ಮನೆಬಾಗಿಲಿಗೆ ಬರುವ ಮೈಕ್ರೊಫೈನಾನ್ಸ್ ಸಂಸ್ಥೆಗಳ ಸಾಲಗಳಿಗೆ ಲಕ್ಷಾಂತರ ಮಹಿಳೆಯರು ಸಿಲುಕಿದ್ದಾರೆ. ಬ್ಯಾಂಕುಗಳಿಂದ ಕಡಿಮೆ ಬಡ್ಡಿಗೆ ಸಾಲಗಳನ್ನು ಪಡೆದು ಮಹಿಳೆಯರಿಗೆ ಅಧಿಕ ಬಡ್ಡಿ ವಿಧಿಸುವ ಈ ಸಂಸ್ಥೆಗಳು ರಾಜ್ಯದಲ್ಲಿ ಅನಿಯಂತ್ರಿತವಾಗಿ ಮತ್ತು ಪ್ರಶ್ನಾತೀತವಾಗಿ ವಿಸ್ತಾರಗೊಂಡಿವೆ. ಇವರಿಂದ ಸಾಲ ಪಡೆದ ಮಹಿಳೆಯರಲ್ಲಿ ಬಹುಸಂಖ್ಯಾತರು ಕುಟುಂಬದ ಕನಿಷ್ಟ ನಿರ್ವಹಣೆಗೆ, ಕೋವಿಡ್ ಮತ್ತು ಕೋವಿಡೇತರ ಆರೋಗ್ಯ ಸಮಸ್ಯೆಗಳ ಸಂದರ್ಭದಲ್ಲಿ, ಕೋವಿಡ್ ಸಾವುಗಳ ಸಂದರ್ಭದಲ್ಲಿ ಹೆರಿಗೆ, ಬಾಣಂತನದ ಸಂದರ್ಭ ನಿಭಾಯಿಸಲು, ಮಕ್ಕಳ ಶಾಲಾ ಕಾಲೇಜು ಶುಲ್ಕಗಳನ್ನು ಪಾವತಿಸಲು, ಸಾಲಗಳ ಮರುಪಾವತಿಗಾಗಿ ಸಾಲ ಪಡೆದವರಾಗಿದ್ದಾರೆ. ಬಹುಸಂಖ್ಯಾತ ಮಹಿಳೆಯರಿಗೆ ತಾವು ತೆಗೆದುಕೊಂಡಿರುವ ಸಾಲ ಕಟ್ಟಬೇಕಾದ ವಾರದ/ತಿಂಗಳ ಕಂತುಗಳ ಹಣದ ಮಾಹಿತಿ ಇದೆ ಆದರೆ ಅದರೊಂದಿಗೆ ಮಿಳಿತಗೊಂಡಿರುವ ಬಡ್ಡಿ ಮತ್ತು ಚಕ್ರ ಬಡ್ಡಿಯ ವಿವರಗಳು ತಿಳಿದಿಲ್ಲ. ಅದರಲ್ಲು ಗ್ರಾಮಾಂತರ ಮತ್ತು ಹಿಂದುಳಿದ ಜಿಲ್ಲೆಗಳಲ್ಲಿ ಅವರಿಗೇ ಅರಿವಿಲ್ಲದಂತೆ ಶೋಷಣೆಗೆ ಒಳಗಾಗಿರುವುದನ್ನು ನೋಡಬಹುದು. ಗುಂಪಿನಲ್ಲಿ ಯಾರಾದರು ಒಬ್ಬರು ಸಾಲ ಪಡೆದು ತೀರಿಸಲಾಗದಿದ್ದರೆ ಇಡೀ ಗುಂಪನ್ನು ಹೊಣೆ ಮಾಡುವ ಎಂ.ಎಫ್.ಐಗಳ ಹುನ್ನಾರಗಳಿಂದ ಬಾಧಿತ

ಪುಟ 10 ನೋಡಿ

ಮಕ್ಕಳ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯ ನಿಯಂತ್ರಣಕ್ಕೆ ಕರ್ನಾಟಕ ಸರಕಾರ ಮುಂದಾಗಬೇಕು

ದೌರ್ಜನ್ಯ ಅತ್ಯಾಚಾರ ಅಪಹರಣಗಳಂಥಹ ಸಂಗತಿಗಳು ಪ್ರತಿ ಕ್ಷಣ ನಡೆಯುತ್ತಿರುವ ಸುತ್ತಲಿನ ವಿದ್ಯಮಾನಗಳಾಗಿವೆ. ಇದು ಯಾವುದೇ ನಾಗರಿಕ ಸಮಾಜ ನಾಚಿ ತಲೆ ತಗ್ಗಿಸಬೇಕಾದ ಮತ್ತು ಯಾವುದೇ ಕಾರಣಕ್ಕೂ ಒಪ್ಪಬಾರದ ಸಂಗತಿ. ಯಾವುದೇ ದೌರ್ಜನ್ಯಗಳು ಕೇವಲ ದೇಹ ಮಾತ್ರವಲ್ಲ, ಎಂದೆಂದಿಗೂ ಮರೆಯಲಾಗದ ಆಳವಾದ ಮಾನಸಿಕ ಆಘಾತವನ್ನೂ ಉಂಟುಮಾಡುತ್ತವೆ. ಅದರಲ್ಲಿಯೂ ಲೈಂಗಿಕ ದೌರ್ಜನ್ಯಗಳು ಅದೂ ಮಕ್ಕಳ ಮೇಲೆ ನಡೆದಾಗ ಅವು ಎಂದಿಗೂ ಮಾಯದ ಗಾಯಗಳು ಎಂಬುದನ್ನು ಸಮಾಜ ಅರ್ಥ ಮಾಡಿಕೊಳ್ಳಬೇಕು.

ತನ್ನ ದೇಹ, ಗಾತ್ರ, ಸೌಷ್ಟವಗಳ ಹಂಗಿಲ್ಲದೇ ಆಡಿಕೊಂಡು ಬೆಳೆಯಬೇಕಾದ ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯಗಳನ್ನು ನಡೆಸುವ ವಿಕೃತ ಮನೋವೃತ್ತಿಗಳು ಸಮಾಜಕ್ಕೆ ಹತ್ತಿದ ಕಳಂಕಗಳೆಂದೇ ಭಾವಿಸಬೇಕು. ಪುರುಷ ಪ್ರಧಾನ ಪಾಳೆಯಗಾರೀ ಮೌಲ್ಯಗಳ ವಿಜೃಂಬಿತ ಅತಿರೇಕಗಳಲ್ಲಿ, ಪುರುಷನ ವಿಕೃತ ಕಾಮವೂ ಒಂದು ಭಾಗವೇ ಆಗಿರುತ್ತದೆ. ಹೆಣ್ಣೆಂಬ ದೇಹವೇ ತನ್ನ ಭೋಗಕ್ಕಿರುವ ವಸ್ತು ಎಂಬ ಮನೋಭಾವದ ದ್ಯೋತಕವನ್ನು ಇಲ್ಲಿ ಕಾಣುತ್ತೇವೆ.

ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯಗಳು ವಿಶ್ವದಾದ್ಯಂತ ನಡೆಯುತ್ತದೆ ಎನ್ನುತ್ತವೆ ಅಧ್ಯಯನಗಳು. ಸರಿ ಸುಮಾರು 15 ಮಿಲಿಯನ್ ಹೆಣ್ಣು ಮಕ್ಕಳು ತಮ್ಮ ಹದಿಹರೆಯದಲ್ಲಿ ಲೈಂಗಿಂಕ ದೌರ್ಜನ್ಯಕ್ಕೆ ಒಳಗಾಗುತ್ತಾರೆ. ಪ್ರತಿ 3 ರಲ್ಲಿ 1 ಮಗು ಬೆದರಿಕೆಗೆ ಒಳಗಾಗುತ್ತದೆ ಮತ್ತು ಈ ಕ್ಷುದ್ರ ಕೆಲಸವನ್ನು ಮಾಡುವವರು ಬಹುತೇಕ ಮಗುವಿನ ಪರಿಚಯಸ್ಥರು, ಕುಟುಂಬದವರು, ನೆರೆಹೊರೆಯವರು ಎಂಬುದು ಇನ್ನೂ ಅಸಹನೀಯ ಸಂಗತಿಯಾಗಿದೆ. ಬಹುತೇಕ ಪ್ರಕರಣಗಳು ಈಗಲೂ ಸಮಾಜದ ನಡವಳಿಕೆಯ ಮತ್ತು ಹುಸಿ ಪ್ರತಿಷ್ಠೆಯನ್ನು ಕಾಯ್ದುಕೊಳ್ಳುವ ಪ್ರವೃತ್ತಿಯಿಂದ ದೂರಾಗಿ ದಾಖಲಾಗುವುದೇ ಇಲ್ಲ.

ಲೈಂಗಿಕ ದೌರ್ಜನ್ಯವೆಂದರೆ ಕೇವಲ ಬಲವಂತದ ದೈಹಿಕ ಸಂಪರ್ಕ, ಅತ್ಯಾಚಾರಗಳು ಮಾತ್ರವಲ್ಲದೇ ಇತ್ತೀಚಿನ ವರ್ಷಗಳಲ್ಲಿ ಸೈಬರ್ ಅಪರಾಧಗಳೂ ಜರುಗುತ್ತಿವೆ ಮತ್ತು ಲಾಕ್ ಡೌನ್ ಅವಧಿಯಲ್ಲಿ ಅದು ಹೆಚ್ಚಳವಾಗಿದೆ ಎನ್ನುತ್ತದೆ ಅಧ್ಯಯನಗಳು.

ಕರ್ನಾಟಕದ ಪರಿಸ್ಥಿತಿಯನ್ನು ನೋಡಿದರೆ ಕಳೆದ ನಾಲ್ಕು ವರ್ಷಗಳಲ್ಲಿ ವರದಿಯಾಗಿ ದಾಖಲೆಯಾದ ಪ್ರಕರಣಗಳಲ್ಲಿ ಅತೀವ ಹೆಚ್ಚಳವಾಗಿದೆ.

2018 ರಿಂದ 2021 ರ ವರೆಗಿನ ದಾಖಲಾದ ದೌರ್ಜನ್ಯಗಳ ಪಟ್ಟಿ ಹೀಗಿದೆ.

	2018	2019	2020	2021
ಅತ್ಯಾಚಾರ	1410	1613	1574	1761
ವರದಕ್ಷಿಣೆ	651	583	567	709
ಕೌಟುಂಬಿಕ	74	108	180	223

2020ರಲ್ಲಿ ಸೈಬರ್ ಪ್ರಕರಣದಲ್ಲಿ 1340 ಮಕ್ಕಳನ್ನೇ ಗುರಿಯಾಗಿಸಿ ನಡೆದ ಪ್ರಕರಣಗಳಿವೆ. 223 ಬಾಲ್ಯ ವಿವಾಹಗಳು ನಡೆದಿವೆ ಎಂದೂ ವರದಿಗಳಾಗಿವೆ. ಅಲ್ಲದೇ ಲಾಕ್‌ಡೌನ್ ಸಂದರ್ಭದಲ್ಲಿ ಅತಿ ಹೆಚ್ಚು ಬಾಲ್ಯವಿವಾಹಗಳಾಗಿವೆ.

ಮಕ್ಕಳ ಮೇಲೆ ನಡೆಯುವ ಈ ತೆರನ ದೌರ್ಜನ್ಯಗಳನ್ನು ತಡೆಗಟ್ಟಲೆಂದೇ ಇರುವ ಪೋಕ್ಸೋ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆಯ ಕಾನೂನು) ಕಾನೂನು 2012 ಜಾರಿಯಲ್ಲಿದೆ. ಈ ಕಾನೂನಿನ ಅಡಿಯಲ್ಲಿಯೇ ದಾಖಲಾಗುತ್ತಿರುವ ಅಪರಾಧಗಳಲ್ಲಿ ಪ್ರತಿ ವರ್ಷ ಏರಿಕೆಯಾಗುತ್ತಿದೆಯಾದರೂ ಶಿಕ್ಷೆಯ ಪ್ರಮಾಣ ವರ್ಷದಿಂದ ವರ್ಷಕ್ಕೆ ಕುಸಿಯುತ್ತಿದೆ. 2017 ರಲ್ಲಿ 3.3% ಇದ್ದುದು 2018ರಲ್ಲಿ 0.69%ಗೆ ಇಳಿದಿದೆ ಎನ್ನುತ್ತದೆ ಒಂದು ವರದಿ. ಇದಕ್ಕೆ ಕಾರಣ ತನಿಖಾ ಹಂತದಲ್ಲಿಯೇ ಇರುವ ಲೋಪದೋಷಗಳು ಮತ್ತು ಈ ಸಮಾಜ ಮಹಿಳೆಯರ ಮತ್ತು ಮಕ್ಕಳ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯ ಉಂಟು ಮಾಡುವ ಘಾಸಿಯನ್ನು ಅರ್ಥ ಮಾಡಿಕೊಳ್ಳದಿರುವಷ್ಟು ಸಂವೇದನಾ ಶೂನ್ಯವಾಗಿರುವುದು. ಮತ್ತು ಅದು ಇಡೀ ಸಮಾಜದ ಮೇಲೆ ನಡೆಯುವ ದೌರ್ಜನ್ಯವೆಂದು ಅರ್ಥಮಾಡಿಕೊಳ್ಳದಿರುವುದು.

ರಾಜ್ಯದಲ್ಲಿ ಮಕ್ಕಳ ಹಕ್ಕುಗಳ ರಕ್ಷಣಾ ವೇದಿಕೆಗಳಿವೆ, ಕರ್ನಾಟಕ ರಾಜ್ಯ ಉಚ್ಛ ನ್ಯಾಯಾಲಯದ ಮಧ್ಯ ಪ್ರವೇಶದ ನಂತರ ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ಪಾಲಿಸಿಯನ್ನೂ ತರಲಾಗಿದೆಯಾದರೂ ಇವೆಲ್ಲವೂ ಪ್ರಕರಣಗಳ ತೀವ್ರತೆಯನ್ನು ಕಡಿಮೆ ಮಾಡುವಲ್ಲಿ ವಿಫಲವಾಗಿವೆ.

ಬಾಹ್ಯೋಪಚಾರದ ಬೇಟಿ ಬಚಾವ್ ಬೇಟೀ ಪಢಾವ್ ನಂಥಹ ಘೋಷಣೆಗಳು ನಿಜವಾದ ಬದಲಾವಣೆಯನ್ನು ತರಲಾರವು.

ಕೊವಿಡ್, ವೈರಾಣುವಿನ ಉಪಟಳ ತಡೆಗಟ್ಟಲು ಬಳಸಿದ ಲಾಕ್ ಡೌನ್ ನಂಥಹ ಕ್ರಮಗಳಿಂದಾಗಿ ತಂದ ಆನ್ ಲೈನ್ ಪಠ್ಯಕ್ರಮಗಳು ಕೂಡ ಮಕ್ಕಳ ಮೇಲೆ ಸೈಬರ್ ಅಪರಾಧದ ಹೆಚ್ಚಳಕ್ಕೆ ಕಾರಣವಾಗಿದೆ. ಈ ನಿಟ್ಟಿನಲ್ಲಿ ಸೈಬರ್ ಅಪರಾಧಗಳನ್ನು ನಿಯಂತ್ರಿಸಲು ಅಗತ್ಯವಾದ ಕ್ರಮಗಳನ್ನು ಕೈಗೊಳ್ಳಬೇಕು.

ಮಕ್ಕಳ ಮೇಲೆ ನಡೆಯುವ ಕ್ರೂರ ದೌರ್ಜನ್ಯಗಳನ್ನು ಯಂತ್ರಿಸಲು ಕರ್ನಾಟಕ ಸರಕಾರ ಮುಂದಾಗಬೇಕು. ಬಾಲ್ಯವಿವಾಹ, ಮಾನವ ಸಾಗಾಣಿಕೆ ಗಳನ್ನು ತಡೆಗಟ್ಟುವ ಕಾನೂನುಗಳನ್ನು ಸಮರ್ಪಕವಾಗಿ ಜಾರಿ ಮಾಡಬೇಕು ಎಂದು ಜನವರಿ 2 ರಿಂದ 4 2022 ರಲ್ಲಿ ಗಂಗಾವತಿಯಲ್ಲಿ ನಡೆದ ಸಿ.ಪಿ.ಐ(ಎಂ)ಪಕ್ಷದ 23ನೇ ರಾಜ್ಯ ಸಮ್ಮೇಳನವು ಒತ್ತಾಯಿಸುತ್ತದೆ.

ಮಸಣ ಕಾರ್ಮಿಕರನ್ನು ಸ್ಥಳೀಯ ಸಂಸ್ಥೆಗಳ ನೌಕರರನ್ನಾಗಿ ನೇಮಿಸಿಕೊಳ್ಳಬೇಕು ಮತ್ತು ಸೇವಾ ನಿಯಮಗಳನ್ನು ರೂಪಿಸಬೇಕು

ರಾಜ್ಯದಲ್ಲಿನ ಲಕ್ಷಾಂತರ ಸಾರ್ವಜನಿಕ ಹಾಗೂ ಸಮುದಾಯಗಳ ಮಸಣಗಳಲ್ಲಿ ಸಾರ್ವಜನಿಕ ಹೆಣಗಳನ್ನು ಹೂಳಲು ಕುಣಿ ಅಗೆಯುವ ಮತ್ತು ಮುಚ್ಚುವ ಹಾಗೂ ಮಸಣಗಳ ಸ್ವಚ್ಛತೆಯಲ್ಲಿ ತೊಡಗಿರುವ ಲಕ್ಷಾಂತರ ಮಸಣ ಕಾರ್ಮಿಕರು ಯಾವುದೇ ಸೌಲಭ್ಯಗಳಿಲ್ಲದೇ ವಂಚನೆಗೊಳಗಾಗಿದ್ದಾರೆ. ಸಾಮಾಜಿಕ ದೌರ್ಜನ್ಯಕ್ಕೊಳಗಾದ ದಲಿತ ಸಮುದಾಯದವರೇ ಹೆಚ್ಚಾಗಿ, ಶತ ಶತಮಾನಗಳಿಂದ ಸಾರ್ವಜನಿಕ ಮಸಣಗಳಲ್ಲಿ ತಮ್ಮನ್ನು ಬಿಟ್ಟಿ ಚಾಕರಿಯಲ್ಲಿ ತೊಡಗಿಸಿ ಕೊಂಡಿದ್ದಾರೆ.

ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷಗಳನ್ನು ಪೂರೈಸುವ ಈ ದಿನಗಳಲ್ಲೂ ಅವರ ಕೆಲಸವನ್ನು ಸೇವೆಯೆಂದು ಪರಿಗಣಿಸದಿರುವುದು ತೀವ್ರ ಖಂಡನೀಯವಾಗಿದೆ.

ಬಿಟ್ಟಿ ಚಾಕರಿಯನ್ನು ತೊಡೆದು ಅವರ ಸಾರ್ವಜನಿಕ ಕೆಲಸವನ್ನು ಸೇವೆಯೆಂದು ಪರಿಗಣಿಸಿ, ಅವರನ್ನು ಸಾರ್ವಜನಿಕ ಮಸಣಗಳ ನಿರ್ವಾಹಕರನ್ನಾಗಿ ಸ್ಥಳೀಯ ಸಂಸ್ಥೆಗಳು ನೇಮಿಸಿಕೊಳ್ಳುವಂತೆ, ರಾಜ್ಯ ಸರಕಾರ ಅಗತ್ಯ ಕ್ರಮ ವಹಿಸಬೇಕೆಂದು ಮತ್ತು ಅಗತ್ಯ ಸೇವಾ ನಿಯಮಾವಳಿಗಳನ್ನು ರೂಪಿಸಬೇಕೆಂದು ಸಿಪಿಐ(ಎಂ) ನ ಕರ್ನಾಟಕ ರಾಜ್ಯ 23 ನೇ ಸಮ್ಮೇಳನ ರಾಜ್ಯ ಸರಕಾರವನ್ನು ಬಲವಾಗಿ ಒತ್ತಾಯಿಸುತ್ತದೆ. ⇨⇨⇨

ರಾಜ್ಯ ಸರ್ಕಾರದ 'ಮುಕ್ತ ದತ್ತಾಂಶ ನೀತಿ'ಯನ್ನು ಹಿಂಪಡೆಯಬೇಕು

ಪುಟ 9 ರಿಂದ

ಭಾರತದ ಪ್ರಭುತ್ವವು ಕಳೆದ ಮೂರು ವರ್ಷಗಳಲ್ಲಿ 276 ಕ್ಕೂ ಹೆಚ್ಚು ಬಾರಿ ಇಂಟರ್ನೆಟ್ ಸ್ಥಗಿತಗೊಳಿಸಿದೆ. ಜಮ್ಮು ಮತ್ತು ಕಾಶ್ಮೀರವು ಹೆಚ್ಚು ಹಾನಿಗೊಳಗಾದ ರಾಜ್ಯವಾಗಿದೆ. ಇಂಟರ್ನೆಟ್ ಸ್ಥಗಿತಗೊಳಿಸುವಿಕೆಯು ಅಭಿವ್ಯಕ್ತಿ ಸ್ವಾತಂತ್ರ್ಯ ವನ್ನು ನಿರ್ಬಂಧಿಸುವ ಒಂದು ಮಾರ್ಗ ಮಾತ್ರವೇ ಅಲ್ಲ, ಇದು ಇಂಟರ್ನೆಟ್ ಆಧಾರಿತ ಸೇವೆಗಳ ಮೇಲೆ ಹೆಚ್ಚು ಅವಲಂಬಿತವಾಗಿರುವ ವ್ಯಕ್ತಿಗಳು ಮತ್ತು ಸಂಸ್ಥೆಗಳ ಮೇಲೆ ಇತರ ಪರಿಣಾಮಗಳನ್ನು ಉಂಟುಮಾಡುವ ಸಂಭವವಿದೆ. ಮಾಹಿತಿ ತಂತ್ರಜ್ಞಾನ ಕಾಯ್ದೆ(IT ACT 2021)ರ ನಿಬಂಧನೆಗಳನ್ನು ಬಳಸಿಕೊಂಡು, ರಾಜ್ಯ ಮತ್ತು ಕೇಂದ್ರ ಸರ್ಕಾರಗಳೆರಡೂ ಪತ್ರಿಕಾ ಮತ್ತು ವಾಕ್‌ಸ್ವಾತಂತ್ರ್ಯದ ಮೇಲೆ ಸರಣಿ ದಾಳಿಗಳನ್ನು ಪ್ರಾರಂಭಿಸಿವೆ.

ಕೇಂದ್ರದಲ್ಲಿ ಬಿಜೆಪಿಯು ಹೇಗೆ ಇಸ್ರೇಲೂ ಗುಢಚಾರಿಕೆ ತಂತ್ರಾಂಶ ಪೆಗಸಸ್‌ನ್ನು ವಿಪಕ್ಷಗಳ ನಾಯಕರು ಮತ್ತು ಅವರದೇ ಪಕ್ಷದವರು ಸೇರಿದಂತೆ ಕೇಂದ್ರೀಯ ಸಂಸ್ಥೆಗಳ ಉನ್ನತ ಅಧಿಕಾರಿಗಳ ಮೇಲೆ ಗೂಢಚಾರಿಕೆಗೆ ಬಳಸಿಕೊಂಡಿರುವುದು ಅದರ ನಿಜವಾದ ಫ್ಯಾಸಿಸ್ಟು ಮುಖವನ್ನು ತೋರಿಸುತ್ತದೆ ಎಂಬುದು ಸ್ಪಷ್ಟವಾಗಿದೆ.

ಕೇಂದ್ರ ಸರ್ಕಾರ ಕೊವಿಡ್ ಸಮಯದಲ್ಲಿ ಜನರಿಗೆ ಪರಿಹಾರವನ್ನು ಹೆಚ್ಚಿಸಲು ತಂತ್ರಜ್ಞಾನವನ್ನು ಬಳಸುವ ಬದಲು. ಆರೋಗ್ಯಸೇತು ಅಪ್ಲಿಕೇಶನ್ನಂತಹ ಅಪ್ಲಿಕೇಶನ್ಗಳನ್ನು ಆರೋಗ್ಯ ಕಾರ್ಡ್‌ಗಳು, ಇ–ಶ್ರಮ್ ಕಾರ್ಡುಗಳು ಇತ್ಯಾದಿಗಳನ್ನು ನೀಡುವುದನ್ನು ಬಳಸಿಕೊಂಡು ಕಣ್ಗಾವಲನ್ನು ಆಕ್ರಮಣಕಾರಿಯಾಗಿ ಮುಂದುವರಿಸಲು ತಂತ್ರಜ್ಞಾನವನ್ನು ಬಳಸಿದೆ.

ಕರ್ನಾಟಕವು, ಭದ್ರತೆಯ ಹೆಸರಿನಲ್ಲಿ, ಅಥವಾ ಕಲ್ಯಾಣ ಕಾರ್ಯಕ್ರಮಗಳ ಮೇಲ್ವಿಚಾರಣೆಯ ಹೆಸರಿನಲ್ಲಿ ಪೋಲೀಸ್ ಕೆಲಸದಲ್ಲಿ ಮುಖಗುರುತಿಸುವಿಕೆ ದತ್ತಾಂಶ ಆಪ್ ಗಳು ಮುಂತಾದ ತಂತ್ರಜ್ಞಾನ ಗಳನ್ನು ಬಳಸಿಕೊಂಡು ಕಣ್ಗಾವಲು ಕಾರ್ಯವಿಧಾನಗಳನ್ನು ಬಲಪಡಿಸುವ ಮುಂಚೂಣಿಯಲ್ಲಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಕೊವಿಡ್–19 ರೋಗಿಗಳ ಬಗ್ಗೆ ಮಾಹಿತಿಯನ್ನು ಅಪ್ಲೋಡ್ ಮಾಡಿತು, ಅದು ಸ್ವಲ್ಪ ಸಮಯದ ವರೆಗೆ ಕೇವಲ ಫೋನ್ ಸಂಖ್ಯೆಯ ಸಹಾಯದಿಂದ ಎಲ್ಲರಿಗೂ ಲಭ್ಯವಾಗುವ ರೀತಿಯಲ್ಲಿತ್ತು.. ಹೆಸರು, ವಯಸ್ಸು, ಲಿಂಗ, ರೋಗಿಯ ಗುರುತುಮಾಹಿತಿ, ಐಸಿಎಂಆರ್ ಪರೀಕ್ಷೆಯ ಗುರುತು ಸಂಖ್ಯೆ, ಲ್ಯಾಬ್ ಹೆಸರು, ಪರೀಕ್ಷಾ ಫಲಿತಾಂಶ (ಪಾಸಿಟಿವ್/ನೆಗೆಟಿವ್), ಮಾದರಿ ಸಂಗ್ರಹಿಸಿ ಸ್ವೀಕರಿಸಿದ ದಿನಾಂಕ, ಮಾದರಿ ವಿಧ, ರೋಗಿಯು ಆಸ್ಪತ್ರೆಗೆ ದಾಖಲಾಗಿದ್ದರೆ ಆಸ್ಪತ್ರೆಯ ಹೆಸರು ಸೇರಿದಂತೆ ಹಲವು ವಿವರಗಳನ್ನು ದತ್ತಾಂಶ ತೋರಿಸಿದೆ ಎನ್ನಲಾಗಿದೆ. ರೋಗ ಲಕ್ಷಣಗಳ ಸ್ಥಿತಿ, ಅವರ ಸಾರ್ವಜನಿಕ ಆರೋಗ್ಯಚಟುವಟಿಕೆಗಳು, ಕಣ್ಗಾವಲು ಮತ್ತು ಹಿಂಬಾಲಿಕೆ ವೆಬ್ ಸೈಟಿನ ಭಾಗವಾಗಿ ದತ್ತಾಂಶವನ್ನು ಸಮಕಾಲಿಕಗೊಳಿಸಲಾಗುತ್ತಿತ್ತು. ನಮ್ಮ ಜನಾಂದೋಲನದ ಮಧ್ಯಪ್ರವೇಶದಿಂದ ಅದನ್ನು ಹಿಂತೆಗೆದುಕೊಳ್ಳಲಾಯಿತು. ಈಗ ಪ್ರಭುತ್ವವು ಅಂತಹ ಚಟುವಟಿಕೆ ಗಳನ್ನು ಸುಗಮಗೊಳಿಸಲು ಮತ್ತು ಪ್ರಭುತ್ವದ ಕಣ್ಗಾವಲು ದತ್ತಾಂಶವನ್ನು ನಗದೀಕರಿಸಲು ಕಾರ್ಪೊರೇಟ್‌ಗಳಿಗೆ ಅವಕಾಶ ಕೊಡುವ ಮುಕ್ತ ದತ್ತಾಂಶ ನೀತಿಯನ್ನು ಪ್ರಕಟಿಸಿದೆ.

ಈ ಕುರಿತಂತೆ ನಮ್ಮ ಆಗ್ರಹಗಳು ಹೀಗಿವೆ:

1. ರಾಜ್ಯ ಸರ್ಕಾರವು ಮುಕ್ತ ದತ್ತಾಂಶ ನೀತಿಯನ್ನು ಹಿಂಪಡೆಯ ಬೇಕು
2. ಕೇಂದ್ರ ಮತ್ತು ರಾಜ್ಯಗಳಲ್ಲಿನ ಸರ್ಕಾರಗಳು ಪ್ರತಿಯೊಬ್ಬರಿಗೂ ದತ್ತಾಂಶ ಖಾಸಗಿತ್ವ ಮತ್ತು ರಕ್ಷಣೆ ಯನ್ನು ಖಾತ್ರಿ ಪಡಿಸುವ ನೀತಿಯನ್ನು ರಚಿಸಬೇಕು.
3. ವಿವಿಧ ನಾಗರಿಕರ ದತ್ತಾಂಶಗಳನ್ನು ಸಂಗ್ರಹಿಸಲು ಬಳಸುವ ಎಲ್ಲಾ ಪ್ರಭುತ್ವ ಸಾಧನಗಳನ್ನು ಮುಕ್ತ ತಂತ್ರಾಂಶ ಬಳಸಿ ಅಭಿವೃದ್ಧಿ ಪಡಿಸಬೇಕು ಮತ್ತು ಅವುಗಳ ಮೂಲ(ಸೋರ್ಸ್)ಕೋಡ್‌ಗಳನ್ನು ಸಾರ್ವಜನಿಕ ಗೊಳಿಸಬೇಕು.
4. ಎಲ್ಲಾ ಇ–ಆಡಳಿತ ಕಾರ್ಯಕ್ರಮಗಳನ್ನು ಅವು ದತ್ತಾಂಶ ಖಾಸಗಿತ್ವ ಮತ್ತು ರಕ್ಷಣೆ ಕಾಯ್ದೆಗೆ ಅನುಗುಣವಾಗಿರುವಂತೆ ದೂರು ಎಂದು ಖಚಿತಪಡಿಸಿಕೊಳ್ಳಲು ಅವುಗಳ ಮರು–ಮೌಲ್ಯಮಾಪನಮಾಡಬೇಕು.
5. ಅಂತಹ ಯಾವುದೇ ಕಾರ್ಯಕ್ರಮವನ್ನು ಸಾರ್ವಜನಿಕ ಮೌಲ್ಯಮಾಪನಕ್ಕೆ ಲಭ್ಯವಾಗುವಂತೆ ಮಾಡಬೇಕು.

ಸಿಪಿಐ(ಎಂ) ಕರ್ನಾಟಕ ರಾಜ್ಯ 23ನೇ ಸಮ್ಮೇಳನವು ಪ್ರಭುತ್ವ ಗೂಢಚಾರಿಕೆ ಕುರಿತ ಮೇಲಿನ ಸಲಹೆ ಸೂಚನೆಗಳ ಜಾರಿಯನ್ನು ಒತ್ತಾಯಿಸುತ್ತದೆ.


ಮೈಕ್ರೊಫೈನಾನ್ಸ್ ಸಂಸ್ಥೆಗಳ ಕಿರುಕುಳಗಳಿಂದ......

ಪುಟ 9 ರಿಂದ

ಮಹಿಳೆಯರು ಸಾರ್ವಜನಿಕ ಅಪಮಾನಕ್ಕೆ ಒಳಗಾಗುವುದು ಹಲ್ಲೆ ದೌರ್ಜನ್ಯಗಳಿಗೆ ಒಳಗಾಗುತ್ತಿರುವುದನ್ನು ನಾಡಿನಾದ್ಯಂತ ಕಾಣಬಹುದು. ಅದರಲ್ಲು ಧರ್ಮಸ್ಥಳ ಗುಂಪುಗಳು ಎಲ್ಲ ಜಿಲ್ಲೆಗಳಿಗೆ ವಿಸ್ತರಿಸಿದ್ದು ಸಾಲ ಸೌಲಭ್ಯಗಳ ನೆರವು ನೀಡುತ್ತಾ ಗುಂಪಿನ ಮಹಿಳೆಯರನ್ನು ರಾಜಕೀಯ/ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ವ್ಯವಸ್ಥಿತ ಜಾಲವನ್ನೇ ಹೊಂದಿದ್ದಾರೆ. ಆರ್.ಬಿ.ಐ ಈ ವಲಯವನ್ನು ಆದ್ಯತಾ ವಲಯವೆಂದು ಅವಲಂಬಿಸಿರುವುದು ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ಮತ್ತಷ್ಟು ಪುಷ್ಟೀಕರಿಸಿದೆ. ಈ ಹಿನ್ನಲೆಯಲ್ಲಿ

ನಮ್ಮ ಹಕ್ಕೊತ್ತಾಯಗಳು

1) ಋಣಮುಕ್ತ ಕಾನೂನನ್ನು ಜಾರಿಗೊಳಿಸಿ ಮಹಿಳೆಯರ ಮೇಲಿರುವ ಸಾಲಗಳನ್ನು ಮನ್ನಾ ಮಾಡಿ.
2) ಕೋವಿಡ್ ಸಾಂಕ್ರಾಮಿಕತೆಯಿಂದ ಚೇತರಿಸಿಕೊಳ್ಳಲು ಶೂನ್ಯ ಬಡ್ಡಿದರದಲ್ಲಿ ಮಹಿಳೆಯರಿಗೆ ಸಾಲಸೌಲಭ್ಯಗಳನ್ನು ನೀಡಿ.
3) ಬ್ಯಾಂಕುಗಳ ಶಾಖೆಗಳನ್ನು ಗ್ರಾಮ ಮಟ್ಟಕ್ಕೆ ವಿಸ್ತರಿಸಿ. ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳ ರಚನೆಗೆ ಮತ್ತು ವಿಸ್ತರಣೆಗೆ ಆದ್ಯ ಗಮನ 'ನೀಡಿ, ಮಹಿಳೆಯರಿಗೆ ಆದಾಯದಾಯಕ ಚಟುವಟಿಕೆಗಳ ತರಬೇತಿಗಳನ್ನು ನೀಡಿ ಅವರು ತಯಾರಿಸುವ ಉತ್ಪನ್ನಗಳಿಗೆ ಮಾರುಕಟ್ಟೆಯ ಖಾತ್ರಿಯನ್ನು ಒದಗಿಸಬೇಕು.
4) ಮಹಿಳೆಯರಿಗೆ ಮಾನಸಿಕ ದೈಹಿಕ ಕಿರುಕುಳಗಳನ್ನು ನೀಡುವ ಅಧಿಕ ಬಡ್ಡಿ ವಿಧಿಸಿ ವಂಚಿಸುವ ಎಂ.ಎಫ್.ಐ. ಗಳ ವಿರುದ್ಧ ಕ್ರಮ ಕೈಗೊಳ್ಳಬೇಕು.
5) ಮಹಿಳೆಯರನ್ನು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಸಬಲರನ್ನಾಗಿಸುವ ಮೂಲಕ ಬಡತನವನ್ನು ನಿವಾರಿಸುವ ಕೇರಳದ ಕುಟುಂಬಶ್ರೀ ಯೋಜನೆಯ ಮಾದರಿಯಲ್ಲಿ ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳನ್ನು ಬಲಪಡಿಸಬೇಕೆಂದು ಸಿ.ಪಿ.ಐ(ಎಂ)ನ 23 ನೇ ರಾಜ್ಯ ಸಮ್ಮೇಳನವು ಒತ್ತಾಯಿಸುತ್ತದೆ.



➾➾➾

ಸದರಿ ಮಸಣ ಕಾರ್ಮಿಕರಿಗೆ ಮಾಸಿಕ 3,000 ರೂಗಳ ಪೆನ್ಷನ್ ಜಾರಿಗೊಳಿಸಬೇಕು. ಕುಣಿ ಅಗೆಯುವ ಮತ್ತು ಮುಚ್ಚುವ ಕೆಲಸವನ್ನು ಉದ್ಯೋಗ ಖಾತ್ರಿ ಕೆಲಸವೆಂದು ಪರಿಗಣಿಸಿ, ಪ್ರತಿ ಕುಣಿಗೆ 2500 ರೂ.ಗಳ ವೇತನ ಒದಗಿಸಬೇಕು. ಸುರಕ್ಷತಾ ಪರಿಕರಗಳನ್ನು ಒದಗಿಸಬೇಕು ಮತ್ತು ಮಸಣಗಳನ್ನು ವನಗಳಂತೆ ಅಭಿವೃದ್ಧಿ ಪಡಿಸಿ ಸಾರ್ವಜನಿಕ ಸೇವೆಯನ್ನು ಬಲಗೊಳಿಸಬೇಕು ಎಂದು ಸಿಪಿಐ(ಎಂ) ಆಗ್ರಹಿಸುತ್ತದೆ.

ದೌರ್ಜನ್ಯದ ದೇವದಾಸಿ ಪದ್ಧತಿ ನಿರ್ಮೂಲನೆಯಾಗಬೇಕು, ಕುಟುಂಬಗಳ ಪುನರ್ವಸತಿ ಕ್ರಮಗಳನ್ನು ಕೈಗೊಳ್ಳಬೇಕು

ಕರ್ನಾಟಕದಲ್ಲಿ ಈಗಲೂ ದೌರ್ಜನ್ಯ ದ ದೇವದಾಸಿ ಪದ್ಧತಿಗೆ ಒಂದು ಲಕ್ಷದಷ್ಟು ಕುಟುಂಬಗಳು ಸಿಲುಕಿ ನಲುಗುತ್ತಿವೆ. ಇದೊಂದು ಸಾಮಾಜಿಕ ದೌರ್ಜನ್ಯ ವಾಗಿದೆ. ದೌರ್ಜನ್ಯ ದ ದೇವದಾಸಿ ಪದ್ಧತಿ ಕಾಯ್ದೆ– 2020ಕ್ಕೆ ಅಗತ್ಯ ತಿದ್ದುಪಡಿ ತಂದು ಇವರ ಜೊತೆ ಸಹಬಾಳ್ವೆ ನಡೆಸುವವರಿಗೆ ಸೂಕ್ತ ಹೊಣೆಗಾರಿಕೆಯನ್ನು ನಿಗದಿಸದೇ ಇರುವುದರಿಂದ ಮತ್ತು ದಲಿತರ ಸಂಕಷ್ಟವನ್ನು ದುರ್ಬಳಕೆ ಮಾಡಿ ಬಾಲಕಿಯರನ್ನು ಬಲವಂತವಾಗಿ ದೇವದಾಸಿ ಪದ್ಧತಿಗೆ ದೂಡುವವರ ಮೇಲೆ ಯಾವುದೇ ಕ್ರಮಗಳನ್ನು ಕೈಗೊಳ್ಳದೇ ಇರುವುದರಿಂದಲೂ ಹಾಗೂ ವೈಜ್ಞಾನಿಕವಾದ ಹಾಗೂ ಸಮರ್ಪಕವಾದ ಪುನರ್ವಸತಿ ಕ್ರಮಗಳನ್ನು ರಾಜ್ಯ ಸರಕಾರ ಕೈಗೊಳ್ಳದೆ ಇರುವುದರಿಂದಲೂ ಈ ಪದ್ಧತಿ ಈಗಲೂ ಅಲ್ಲೂ ಇಲ್ಲೂ ಕದ್ದು ಮುಚ್ಚಿ ಮುಂದುವರೆಯುತ್ತಿದೆ. ಇದನ್ನು ನಿರ್ಮೂಲನೆ ಮಾಡಲು ಅಗತ್ಯ ಕಾನೂನು ತಿದ್ದುಪಡಿ ಮತ್ತು ಸಮರ್ಪಕ ಪುನರ್ವಸತಿ ಕ್ರಮಗಳನ್ನು ಕೈಗೊಳ್ಳುವಂತೆ ಸಿಪಿಐ(ಎಂ) ಕರ್ನಾಟಕ 23 ನೇ ರಾಜ್ಯ ಸಮ್ಮೇಳನ ಕರ್ನಾಟಕ ಸರಕಾರವನ್ನು ಬಲವಾಗಿ ಒತ್ತಾಯಿಸುತ್ತದೆ.

ಕೇವಲ ದೌರ್ಜನ್ಯಕ್ಕೀಡಾದ ಮಹಿಳೆಯರನ್ನೇ ಅಪರಾಧಿಗಳನ್ನಾಗಿಸುವ ದೇವದಾಸಿ ಪದ್ಧತಿಯನ್ನು ನಿಷೇಧಿಸುವ ಕಾನೂನಿನಿಂದ ದಲಿತ ಮಹಿಳೆಯರನ್ನು ರಕ್ಷಿಸಲು ಮತ್ತು ಈ ದೌರ್ಜನ್ಯ ದ ಪದ್ಧತಿಯನ್ನು ತೊಡೆಯಲು ಸಾಧ್ಯವಿಲ್ಲ. ಒಂದೆಡೆ, ದಲಿತ ಹಾಗೂ ದೇವದಾಸಿ ಮಹಿಳೆಯರ ಕುಟುಂಬದ ಎಲ್ಲ ಸದಸ್ಯರನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿಸುವ, ಸಬಲೀಕರಣಗೊಳಿಸುವ ಗಂಭೀರ ಪುನರ್ವಸತಿ ಕಾರ್ಯಕ್ರಮಗಳನ್ನು ವ್ಯಾಪಕವಾಗಿ, ತುರ್ತಾಗಿ ನಡೆಸಬೇಕು ಮತ್ತು ಇದಕ್ಕಾಗಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಸಮುದಾಯಗಳ ಒದಗಿಸುವ ಅನುದಾನದಲ್ಲಿ ಹೆಚ್ಚಿನ ಮೊತ್ತವನ್ನು ಕಾಯ್ದಿರಿಸಬೇಕು. ಇನ್ನೊಂದೆಡೆ, ಈ ಕಾನೂನು, ಅಪರಾದಿ ಸಾಮಾಜಿಕ ದೌರ್ಜನ್ಯವನ್ನು ಮರೆಮಾಚುವಂತಿದೆ. ಮತ್ತು ಕಟ್ಟಿಸುವವನು, ಸಹ ಬಾಳ್ವೆ ನಡೆಸುವವನು, ಮಾತ್ರವಲ್ಲಾ, ಸಾಮಾಜಿಕ ಅಗತ್ಯಗಳ ಹೆಸರಿನಲ್ಲಿ ಬಲವಂತವಾಗಿ ದೂಡುವವರನ್ನು ಅಪರಾಧಿಗಳೆಂದು ಪರಿಗಣಿಸುವುದಿಲ್ಲ. ಸಹ ಬಾಳ್ವೆ ನಡೆಸುವ ಅಪರಾಧಿಗಳಿಗೆ ಯಾವುದೇ ಹೊಣೆಗಾರಿಕೆ ನೀಡದೇ ರಕ್ಷಿಸುವ ಕೆಲಸ ಮಾಡುತ್ತಿದ್ದು ಈ ದಿಶೆಯಲ್ಲಿ ಅದನ್ನು ತಕ್ಷಣ ತಿದ್ದುಪಡಿ ಮಾಡಿ ಜಾರಿಗೊಳಿಸಬೇಕಿದೆ.

ಆದ್ದರಿಂದ, ಮಾಸಿಕ 3,000 ರೂಗಳ ಸಹಾಯಧನವನ್ನು ಹೆಚ್ಚಿಸಿ, ವಯೋ ಭೇದವಿಲ್ಲದೇ ಎಲ್ಲ ದೇವದಾಸಿ ಮಹಿಳೆಯರಿಗೂ, ಪರಿತ್ಯಕ್ತ ದೇವದಾಸಿ ಮಹಿಳೆಯರ ಹೆಣ್ಣು ಮಕ್ಕಳಿಗೂ ದೊರೆಯುವಂತೆ ವಿಸ್ತರಿಸಬೇಕು.

ದೇವದಾಸಿ ಮಹಿಳೆಯರ ಹಾಗೂ ದಲಿತ ಕುಟುಂಬಗಳ ಸಮೀಕ್ಷೆ ನಡೆಸಿ ಆ ಕುಟುಂಬಗಳನ್ನು ಸ್ವಾವಲಂಬಿಯಾಗಿಸಲು ಅಗತ್ಯ ಪುನರ್ವಸತಿ ಯೋಜನೆಯನ್ನು ಸಂಕಷ್ಟದ ತೀವ್ರತೆಯ ಆಧಾರದಲ್ಲಿ ಮತ್ತು ವಯೋಮಾನದ ಆಧಾರದಲ್ಲಿ ಒಂದು ಕಡೆಯಿಂದ ಜಾರಿಗೊಳಿಸಬೇಕು ಫಲಾನುಭವಿಗಳ ಆಯ್ಕೆ ಹೆಸರಿನಲ್ಲಿ ವಂಚಿಸುವುದನ್ನು ತಕ್ಷಣವೇ ನಿಲ್ಲಿಸಬೇಕು.

ದೇವದಾಸಿ ಮಹಿಳೆಯರ ಮಕ್ಕಳ ನಡುವಿನ ಮದುವೆಗೆ ಪ್ರೋತ್ಸಾಹ ಧನವನ್ನು ವಿಸ್ತರಿಸಬೇಕೆಂದು ಸಿಪಿಐ(ಎಂ) ಒತ್ತಾಯಿಸುತ್ತದೆ.

5 ವರ್ಷಗಳಲ್ಲಿ ಪರಿಶಿಷ್ಟ ವಿದ್ಯಾರ್ಥಿಗಳ ಫೆಲೋಶಿಪ್‌ಗಳಲ್ಲಿ 58% ಕಡಿತ ಮತ್ತು ಅಲ್ಪಸಂಖ್ಯಾತ ವಿದ್ಯಾರ್ಥಿಗಳ ಫೆಲೋಶಿಪ್‌ಗಳಲ್ಲಿ 43% ಕಡಿತ

ಪರಿಶಿಷ್ಟ ಜಾತಿಗೆ ಸೇರಿದ ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ಫೆಲೋಶಿಪ್‌ನಲ್ಲಿ ಭಾರಿ ಇಳಿಕೆಯಾಗಿದೆ. 2016–17ರಲ್ಲಿ 9503 ವಿದ್ಯಾರ್ಥಿಗಳು ಅದೇ ವಿದ್ಯಾರ್ಥಿ ವೇತನವನ್ನು ಪಡೆಯುತ್ತಿದ್ದು, 2020–21ರಲ್ಲಿ ಇದು 3986ಕ್ಕೆ ಇಳಿದಿದೆ. ನಾಲ್ಕು ವರ್ಷಗಳಲ್ಲಿ ಈ ಕುಸಿತವು ಸುಮಾರು 58% ನಷ್ಟಿದೆ.

ಅದೇ ರೀತಿಯಲ್ಲಿ, ಅಲ್ಪಸಂಖ್ಯಾತರ ವ್ಯವಹಾರಗಳ ಸಚಿವಾಲಯವು ರೂಪಿಸಿದ ಮತ್ತು ಅನುದಾನಿತ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗಾಗಿ ಮೌಲಾನಾ ಆಜಾದ್ ರಾಷ್ಟ್ರೀಯ ಫೆಲೋಶಿಪ್‌ನಲ್ಲಿ ಭಾರಿ ಇಳಿಕೆ ಕಂಡುಬಂದಿದೆ. 2016–17ನೇ ಸಾಲಿನಲ್ಲಿ 4141 ವಿದ್ಯಾರ್ಥಿಗಳು ಈ ವಿದ್ಯಾರ್ಥಿ ವೇತನ ಪಡೆದಿದ್ದು, 2020–21ರಲ್ಲಿ ಫಲಾನುಭವಿಗಳ ಸಂಖ್ಯೆ 2348ಕ್ಕೆ ಇಳಿದಿದೆ. ಈ ಕುಸಿತವು ನಾಲ್ಕು ವರ್ಷಗಳಲ್ಲಿ ಸುಮಾರು 43% ದಷ್ಟಿದೆ.

ಯುಜಿಸಿ ಫೆಲೋಶಿಪ್‌ಗಳ ಸಂಖ್ಯೆಯನ್ನು ಕಡಿತಗೊಳಿಸುವ ಇಂತಹ ಹಲವು ಆತಂಕಕಾರಿ ಅಂಕಿ–ಅಂಶಗಳು ರಾಜ್ಯಸಭೆಯಲ್ಲಿ ಸಿಪಿಐ(ಎಂ) ಸದಸ್ಯ ಡಾ.ವಿ. ಶಿವದಾಸನ್ ಪ್ರಶ್ನೆಯಿಂದ ಬೆಳಕಿಗೆ ಬಂದಿವೆ. ಶಿವದಾಸನ್ ಎಸ್‌ಎಫ್‌ಐನ ಮಾಜೀ ಅಧ್ಯಕ್ಷರು.

ರಾಜ್ಯಸಭೆಯಲ್ಲಿ ನೀಡಿದ ಇನ್ನೂ ಕೆಲವು ಅಂಕಿ–ಅಂಶಗಳು ಹೀಗಿವೆ:

2016–17 ಮತ್ತು 2020–21 ರ ನಡುವೆ ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳಿಗೆ ಪೋಸ್ಟ್ ಡಾಕ್ಟರೇಟ್ ಫೆಲೋಶಿಪ್‌ಗಳ ಸಂಖ್ಯೆಯನ್ನು 554 ರಿಂದ 332 ಕ್ಕೆ ಇಳಿಸಲಾಗಿದೆ.

ಅದೇ ಅವಧಿಯಲ್ಲಿ, ಮಹಿಳೆಯರಲ್ಲಿ ಪೋಸ್ಟ್ ಡಾಕ್ಟರೇಟ್ ಫೆಲೋಶಿಪ್ ಪಡೆಯುವವರ ಸಂಖ್ಯೆಯನ್ನು 642 ರಿಂದ 434 ಕ್ಕೆ ಇಳಿಸಲಾಗಿದೆ.

ಡಾ. ಎಸ್ ರಾಧಾಕೃಷ್ಣನ್ ಮಾನವಿಕ ವಿಷಯಗಳಲ್ಲಿ ಡಾಕ್ಟರೇಟ್ ಫೆಲೋಶಿಪ್ ಅನ್ನು 2016 ರಿಂದ 2020 ರ ನಡುವೆ 559 ರಿಂದ 14 ಕ್ಕೆ ಇಳಿಸಲಾಗಿದೆ. ಶಿಕ್ಷಕ–ಕೇಂದ್ರಿತ ಯೋಜನೆಗಳ ಫಲಾನುಭವಿಗಳ ಪ್ರಮಾಣ 76% ರಷ್ಟು ಕಡಿಮೆಯಾಗಿದೆ; 2020–21 ರಲ್ಲಿ ಕೇವಲ 14 ವಿದ್ಯಾರ್ಥಿಗಳಿಗೆ ಮಾತ್ರ ಯುಜಿಸಿ ಎಮೆರಿಟಸ್ ಫೆಲೋಶಿಪ್ ನೀಡಲಾಯಿತು – ನಾಲ್ಕು ವರ್ಷಗಳ ಹಿಂದೆ ಈ ಸಂಖ್ಯೆ 559 ಆಗಿತ್ತು.

ಮೂಲಭೂತ ವಿಜ್ಞಾನ ಸಂಶೋಧನಾ ಫೆಲೋಶಿಪ್‌ ಫಲಾನುಭವಿಗಳಲ್ಲಿ 83% ರಷ್ಟು ಕುಸಿತವಾಗಿದೆ.

ಇತ್ತೀಚಿನ ವರ್ಷಗಳಲ್ಲಿ ವಿವಿಧ ಯುಜಿಸಿ ಫೆಲೋಶಿಪ್ ಪಡೆಯುವ ಸಂಶೋಧನಾ ವಿದ್ವಾಂಸರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ ಎಂದು ಕೇಂದ್ರ ಸರ್ಕಾರ ಸಂಸತ್ತಿಗೆ ತಿಳಿಸಿದೆ. ಶಿಕ್ಷಣ ಸಚಿವಾಲಯದ ಉನ್ನತ ಶಿಕ್ಷಣ ಇಲಾಖೆಯು ಫೆಬ್ರವರಿ 2 ರಂದು ರಾಜ್ಯಸಭೆಯಲ್ಲಿ ಡಾ ವಿ ಶಿವದಾಸನ್ ಅವರ ನಕ್ಷತ್ರರಹಿತ ಪ್ರಶ್ನೆ ಸಂಖ್ಯೆ 24 ಕ್ಕೆ ಉತ್ತರಿಸುವಾಗ ಈ ಮಾಹಿತಿಗಳನ್ನು ಕೊಟ್ಟಿದೆ. ಫಲಾನುಭವಿಗಳ ಸಂಖ್ಯೆಯಲ್ಲಿನ ಈ ಕಡಿತವು ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಈಗಾಗಲೇ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದ ದಾಳಿಗೆ ಒಳಗಾಗಿರುವ ಸಾಮಾಜಿಕ ನ್ಯಾಯ ಮತ್ತು ಎಲ್ಲರನ್ನೂ ಒಳಗೊಳ್ಳುವ ವಿಷಯದಲ್ಲಿ ಗಂಭೀರ ಪ್ರಶ್ನೆಯನ್ನು ಎತ್ತುತ್ತದೆ ಎಂದು ಎಸ್‌ಎಫ್‌ಐ ಆತಂಕ ವ್ಯಕ್ತಪಡಿಸಿದೆ.

ಈ ಅನೇಕ ಫೆಲೋಶಿಪ್‌ಗಳನ್ನು ಉನ್ನತ ಶಿಕ್ಷಣ ಮತ್ತು ಸಂಶೋಧನೆಯನ್ನು ಮುಂದುವರಿಸಲು ಅಂಚಿನಲ್ಲಿರುವ ವಿಭಾಗಗಳ ವಿದ್ಯಾರ್ಥಿಗಳನ್ನು ಬೆಂಬಲಿಸಲು ಮತ್ತು ಪ್ರೋತ್ಸಾಹಿಸಲು ಪ್ರಾರಂಭಿಸಲಾಗಿತ್ತು ಎಂಬುದನ್ನು ನೆನಪಿಸಿರುವ ಎಸ್‌ಎಫ್‌ಐ ಸಾಂಸ್ಥಿಕ ಬೆಂಬಲದ ಕೊರತೆಯಿಂದಾಗಿ ಸಾವಿರಾರು ವಿದ್ಯಾರ್ಥಿಗಳು ಈಗಾಗಲೇ ಸಂಶೋಧನೆ ಮತ್ತು ಉನ್ನತ ವ್ಯಾಸಂಗದಿಂದ ಹೊರಗುಳಿಯುವ ಪರಿಸ್ಥಿತಿ ಉಂಟಾಗಿರುವಾಗ ಈ ಅನ್ಯಾಯವನ್ನು ಕೇಂದ್ರ ಸರ್ಕಾರ ನಡೆಸುತ್ತಿದೆ ಎಂದು ಖಂಡಿಸಿದೆ. ಫೆಲೋಶಿಪ್‌ಗಳ ನಿಧಾನ ಹತ್ಯೆಯು ಭಾರತದಲ್ಲಿ ಉನ್ನತ ಶಿಕ್ಷಣದ ರಂಗದಲ್ಲಿ ಹೊರಗಿಡುವ ಪ್ರಯತ್ನ ಇನ್ನಷ್ಟು ತೀವ್ರಗೊಳ್ಳುತ್ತದೆ. ಈ ಕಾರ್ಯವನ್ನು ನಿರ್ವಹಿಸಲು ಖಾಸಗಿಯವರನ್ನು ಆಹ್ವಾನಿಸುವ ಮೂಲಕ ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ವಿದ್ಯಾರ್ಥಿವೇತನವನ್ನು ಒದಗಿಸುವ ತನ್ನ ಕರ್ತವ್ಯದಿಂದ ಹಿಂದೆ ಸರಿಯಲು ಸರ್ಕಾರ ಪ್ರಯತ್ನಿಸುತ್ತಿದೆ.

ಕಳೆದೆರಡು ವರ್ಷಗಳಿಂದ ವಿವಿಧ ಕೇಂದ್ರೀಯ ವಿಶ್ವವಿದ್ಯಾನಿಲಯಗಳಲ್ಲಿ ತೀವ್ರವಾದ ಶುಲ್ಕ ಹೆಚ್ಚಳವಾಗಿದೆ. ಇದನ್ನು ಪ್ರತಿಭಟಿಸಿದ ವಿದ್ಯಾರ್ಥಿಗಳನ್ನು ಪಾಂಡಿಚೇರಿ ವಿವಿಯಲ್ಲಿ ಮಾಡಿದಂತೆ ಪಿಯು ನಂತಹ ಕ್ಯಾಂಪಸ್‌ಗಳಲ್ಲಿ ಅಮಾನತುಗೊಳಿಸಲಾಗಿದೆ. ಇದಲ್ಲದೆ ಕಳೆದ ಎರಡು ವರ್ಷಗಳಲ್ಲಿ ಮೂರು ಅವಧಿಗಳಿಗೆ ಎನ್‌ಇಟಿ–ಜೆಆರ್‌ಎಫ್ ಪರೀಕ್ಷೆಗಳನ್ನು ನಡೆಸಿಲ್ಲವಾದ್ದರಿಂದಲೂ ಮತ್ತು ಫೆಲೋಶಿಪ್‌ಗಳ ಸಂಖ್ಯೆಯಲ್ಲಿ ಇಳಿಕೆಯಾಗಿದೆ.

ಫೆಲೋಶಿಪ್‌ಗಳ ಹಂಚಿಕೆಯನ್ನು ತಕ್ಷಣವೇ ಹೆಚ್ಚಿಸಬೇಕು ಮತ್ತು ಸಂಖ್ಯೆಯನ್ನು ಕಡಿಮೆ ಮಾಡುವ ಬದಲು ಪ್ರತಿ ವರ್ಷ ಸಾಂಸ್ಥಿಕ ಬೆಂಬಲದೊಂದಿಗೆ ಹೆಚ್ಚಿನ ವಿದ್ಯಾರ್ಥಿಗಳಿಗೆ ಇವು ಸಿಗುವಂತೆ ಮಾಡಬೇಕು ಹಾಗೂ ಅಂಚಿನಲ್ಲಿರುವ ವಿಭಾಗಗಳ ವಿದ್ಯಾರ್ಥಿಗಳಿಗೆ ಹೆಚ್ಚಿನ ಫೆಲೋಶಿಪ್‌ಗಳನ್ನು ಆರಂಭಿಸಬೇಕು ಎಂದಿರುವ ಎಸ್‌ಎಫ್‌ಐ, ಈ ದಿಕ್ಕಿನಲ್ಲಿ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ. ಉನ್ನತ ಶಿಕ್ಷಣದಲ್ಲಿ ಸಾಮಾಜಿಕ ನ್ಯಾಯ ಮತ್ತು ಒಳಗೊಳ್ಳುವಿಕೆಯನ್ನು ಖಚಿತಪಡಿಸಲು ಕಟ್ಟುನಿಟ್ಟಾದ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಕೇಂದ್ರ ಸರಕಾರವನ್ನು ಅದು ಆಗ್ರಹಿಸಿದೆ.


ಜೆಎನ್‌ಯುನ ಹಳೆಯ ವಿ.ಸಿ.ಯ ದಾರಿಯಲ್ಲೇ ಸಾಗಲಿರುವ ಹೊಸ ವಿ.ಸಿ.?

ದೇಶದ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ ಒಂದಾಗಿರುವ ನವದೆಹಲಿಯ ಜವಹರಲಾಲ್ ನೆಹರು ವಿಶ್ವವಿದ್ಯಾಲಯ(ಜೆಎನ್‌ಯು)ದಲ್ಲಿನ ಅತ್ಯುತ್ತಮ ಶೈಕ್ಷಣಿಕ ವಾತಾವರಣವನ್ನು ಹಾಳುಗೆಡಹುವ ಕೆಲಸಕ್ಕೇ ನೇಮಕವಾದಂತಿದ್ದ ಉಪಕುಲಪತಿ ಪ್ರೊ. ಜಗದೇಶ್ ಕುಮಾರ್‌ರನ್ನು ವಿಶ್ವವಿದ್ಯಾಲಯ ಧನಸಹಾಯ ಆಯೋಗದ ಅಧ್ಯಕ್ಷರಾಗಿ ನೇಮಕ ಮಾಡಿದ ನಂತರ, ಜೆಎನ್‌ಯು ಉಪಕುಲಪತಿ ಸ್ಥಾನಕ್ಕೆ ಅಂತಹವರನ್ನೇ ಇನ್ನೊಬ್ಬರನ್ನು ನೇಮಕ ಮಾಡಿದ್ದಾರೆ ಎಂದು ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಆತಂಕ ವ್ಯಕ್ತಪಡಿಸುತ್ತಿದ್ದಾರೆ.

ಪ್ರೊ. ಶಾಂತಿಶ್ರೀ ಧೂಳಿಪುಡಿ ಪಂಡಿತ್ ಎಂಬವರನ್ನು ಉಪಕುಲಪತಿಯಾಗಿ ನೇಮಕ ಮಾಡಿರುವುದು ಮೋದಿ ಸರಕಾರದ ಅಡಿಯಲ್ಲಿ ಶಿಕ್ಷಣ ಸಚಿವಾಲಯವು ನಡೆಸುತ್ತಿರುವ ಇಂತಹ ನೇಮಕಾತಿಗಳಲ್ಲಿ ಗುಣಮಟ್ಟ ಮತ್ತು ಶ್ರೇಷ್ಠತೆಯ ಬಗ್ಗೆ ಸಂಪೂರ್ಣ ನಿರ್ಲಕ್ಷ್ಯವನ್ನು ತೋರಿಸುತ್ತದೆ ಎಂಬುದನ್ನು ಮತ್ತೆ ತೋರಿಸಿದೆ ಎಂದು ಅವರು ಖೇದ ವ್ಯಕ್ತಪಡಿಸುತ್ತಿದ್ದಾರೆ.

ಆಕೆಯ ಹಿಂದುತ್ವವಾದಿ ಬಲಪಂಥೀಯ ರಾಜಕೀಯ ದೃಷ್ಟಿಕೋನಗಳು ಆರೆಸ್ಸೆಸ್–ಬಿಜೆಪಿ ನೇತೃತ್ವದ ಆಡಳಿತಕ್ಕೆ ಎಲ್ಲಕ್ಕಿಂತ ಹೆಚ್ಚಾಗಿ ಆಕೆಯ ಅರ್ಹತೆಯಾಗಿ ಹೊರಹೊಮ್ಮಿದೆ ಎಂದು ಮಾಧ್ಯಮಗಳಲ್ಲಿ ಪ್ರಕಟವಾಗಿರುವ ವರದಿಗಳಿಂದ ಸ್ಪಷ್ಟವಾಗುತ್ತದೆ. ಅವರು ಗಾಂಧೀಜಿಯನ್ನು ಹತ್ಯೆ ಮಾಡಿದ ನಾಥೂರಾಮ್ ಗೋಡ್ಸೆಯ ಕ್ರಮವನ್ನು 'ಅಖಂಡ ಭಾರತ'ಕ್ಕೆ ಅವರ ಹತ್ಯೆ ಮಾತ್ರ 'ಪರಿಹಾರ' ಎಂಬ ಚಿಂತನೆಯಿಂದ ಹೊರಹೊಮ್ಮಿತ್ತು ಎಂದು ಅವರು ಟ್ವಿಟ್ ಮಾಡಿರುವದಾಗಿ ಮಾಧ್ಯಮಗಳಲ್ಲಿ ವರದಿಯಾಗಿದೆ. ಭಾರತೀಯ ಮುಸ್ಲಿಮರ ವಿರುದ್ಧ ನರಮೇಧಕ್ಕೆ ಕರೆ ನೀಡಿರುವುದನ್ನು ಬೆಂಬಲಿಸುವ ಮತ್ತು ರೈತರ ಚಳವಳಿಯನ್ನು ಗೇಲಿ ಮಾಡುವ , ಆಂದೋಲನದ ರೈತರು "ಪರಾವಲಂಬಿಗಳು, ಮಧ್ಯವರ್ತಿಗಳು, ದಲ್ಲಾಳಿಗಳು" ಮತ್ತು ಜೆಎನ್‌ಯು ವಿದ್ಯಾರ್ಥಿಗಳು ಮತ್ತು ಅಧ್ಯಾಪಕರನ್ನು 'ಸೋತವರು' ಮತ್ತು 'ಜಿಹಾದಿಗಳು' ಎಂದು ಕರೆದಿರುವ ಟ್ವೀಟ್‌ಗಳನ್ನೂ ಮಾಡಿದ್ದರು ಎಂದು ಹೇಳಲಾಗಿದೆ. ಉಪಕುಲಪತಿಗಳಾಗಿ ನೇಮಕವಾದ ಮೂರು ದಿನಗಳ ನಂತರ ಅದು ತಾನು ಮಾಡಿದ ಟ್ವೀಟ್‌ಗಳಲ್ಲ ಎಂದು ಅವರು ಸಮಜಾಯಿಷಿ ಕೊಟ್ಟಿರುವುದನ್ನು ಯಾರೂ ನಂಬುತ್ತಿಲ್ಲ. ಈ ಬಗ್ಗೆ ಸ್ವತಂತ್ರ ತನಿಖೆಯಾಗಬೇಕು ಎಂಬ ಒತ್ತಾಯ ಬರುತ್ತಿದೆ.

ಆಕೆ ನಿರ್ದೇಶಕರಾಗಿದ್ದ ಅವಧಿಯಲ್ಲಿ ಪುಣೆ ವಿಶ್ವವಿದ್ಯಾನಿಲಯದಲ್ಲಿನ ಇಂಟರ್‌ನ್ಯಾಶನಲ್ ಸ್ಟೂಡೆಂಟ್ಸ್ ಸೆಂಟರ್‌ನಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲು ಪಿಐಒ (ಅಂದರೆ ಭಾರತೀಯ ಮೂಲದ ವ್ಯಕ್ತಿಗಳು– ಅಂದರೆ ವಿದೇಶಗಳಲ್ಲಿ ನೆಲೆಸಿರುವ ಭಾರತೀಯ ಮೂಲದವರು) ಕೋಟಾವನ್ನು ದುರುಪಯೋಗಪಡಿಸಿಕೊಂಡಿದ್ದಕ್ಕಾಗಿ ನ್ಯಾಯಾಂಗ ಆಯೋಗವು ಆಕೆ ತಪ್ಪಿತಸ್ಥರೆಂದು ಗುರುತಿಸಿತ್ತು. ಉನ್ನತ ಮಟ್ಟದ ನೈತಿಕತೆ, ಸಮಗ್ರತೆ ಮತ್ತು ಮೌಲ್ಯಗಳನ್ನು ಹೊಂದಿರುವ ವ್ಯಕ್ತಿಗಳನ್ನು ಮಾತ್ರ ಉಪಕುಲಪತಿಗಳಾಗಿ ನೇಮಿಸಬೇಕು ಎಂದು ನಿರ್ದಿಷ್ಟಪಡಿಸುವ ಯುಜಿಸಿ ನಿಯಮಗಳನ್ನು ಕೇಂದ್ರ ಶಿಕ್ಷಣ ಸಚಿವಾಲಯವು ಉಲ್ಲಂಘಿಸಿರುವುದು ಏಕೆ, ಹೇಗೆ ಎಂಬ ಬಗ್ಗೆ ಸ್ಪಷ್ಟೀಕರಣವನ್ನು ಕೇಳಲಾಗುತ್ತಿದೆ.



"ನೀವು ಈ ಹುದ್ದೆ ಪಡೆದಿರುವುದು ಈ ಟ್ವೀಟ್‌ಗಳಿಂದಲೇ. ಅವನ್ನು ಅಳಿಸುವಷ್ಟು ಧೈರ್ಯವೇ ನಿಮಗೆ?" –ಬಹುಶ: ಒಬ್ಬ 'ಭಕ್ತ'ನ ಬೆದರಿಕೆ ಕರೆ!

ವ್ಯಂಗ್ಯಚಿತ್ರ: ಮಂಜುಲ್, ನ್ಯೂಸ್‌ಲೈವ್.ಕಾಂ



ಕೇರಳದ ಸಿಲ್ವರ್‌ಲೈನ್ ರೈಲು ಯೋಜನೆ

ಕೇರಳದ ದಕ್ಷಿಣದ ತುದಿಯಲ್ಲಿರುವ ತಿರುವನಂತಪುರದಿಂದ ಉತ್ತರದ ತುದಿಯಲ್ಲಿರುವ ಕಾಸರಗೋಡು ವರೆಗಿನ 530 ಕಿ.ಮೀ. ಉದ್ದದ ಸಿಲ್ವರ್‌ಲೈನ್ ವೇಗದ ರೈಲು ಮಾರ್ಗ ಎಲ್‌ಡಿಎಫ್ 'ಕಳೆದ ವಿಧಾನಸಭಾ ಚುನಾವಣೆಗಳಲ್ಲಿ ಆಶ್ವಾಸನೆ ನೀಡಿದ ಒಂದು ಪ್ರಮುಖ ಮೂಲರಚನಾ ಯೋಜನೆ. ಈಗ ಇದನ್ನು ಜಾರಿ ಮಾಡುವಾಗ ಬಹಳಷ್ಟು ವಿರೋಧಗಳು ಬರುತ್ತಿವೆ. ಈ ಕುರಿತ ರಚನಾತ್ಮಕ ಟೀಕೆಗಳನ್ನು ಕೇಳಲು ಸರ್ಕಾರ ಸದಾ ಸಿದ್ಧವಿದೆ. ಆದರೆ ಅಭಿವೃದ್ಧಿ ಯೋಜನೆಗಳನ್ನು ಅಡ್ಡಿಪಡಿಸುವ ಉದ್ದೇಶದಿಂದಲೇ ಮಾಡುವ ಯಾವುದೇ ವಿರೋಧವು ಜನರಿಗೆ ನಾವು ನೀಡಿದ ಭರವಸೆಯನ್ನು ಈಡೇರಿಸದಂತೆ ತಡೆಯಲಾರದು. ಕೇರಳದ ಅಭಿವೃದ್ಧಿಗಾಗಿ ನಾವು ಒಗ್ಗಟ್ಟಾಗಿ ನಿಲ್ಲಬೇಕಾಗಿದೆ. ಅಂತಹ ಅಭಿವೃದ್ಧಿ ಯೋಜನೆಗಳನ್ನು ಹಳಿತಪ್ಪಿಸಲು ಪ್ರಯತ್ನಿಸಿದರೆ, ಅದು ನಮ್ಮ ಮುಂದಿನ ಪೀಳಿಗೆಯ ಮೇಲೆ ಪರಿಣಾಮ ಬೀರುತ್ತದೆ, ಅದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಹೇಳಿದ್ದಾರೆ.

ಎನ್.ಎಸ್.ಸಜಿತ್ (ಅನು: ರಾಮು ಎಸ್.ಕೆ. ಕೃಪೆ: ಪೀಪಲ್ಸ್ ಡೆಮಾಕ್ರಸಿ')

ಕೇರಳ ಸರ್ಕಾರವು ವಿಪಕ್ಷಗಳ ಹೆಚ್ಚುತ್ತಿರುವ ಪ್ರತಿಭಟನೆಗಳು ಮತ್ತು ಮಾಧ್ಯಮದ ಒಂದು ವಿಭಾಗದ ಕೈಚಳಕಗಳ ಹೊರತಾಗಿಯೂ, ಸಿಲ್ವರ್‌ಲೈನ್ ಎಂಬ ಸೆಮಿ– ಹೈಸ್ಪೀಡ್(ಅರೆ–ಉನ್ನತ ವೇಗದ) ರೈಲು ಮಾರ್ಗ ಯೋಜನೆಯನ್ನು ಸಾಕಾರಗೊಳಿಸಲು ಪ್ರಯತ್ನಿಸುತ್ತಿದೆ. ಈ ಯೋಜನೆಯು 2021 ರ ವಿಧಾನಸಭಾ ಚುನಾವಣೆಯಲ್ಲಿ ಎಲ್‌ಡಿಎಫ್‌ನ ಚುನಾವಣಾ ಪ್ರಣಾಳಿಕೆಯ ಪ್ರಮುಖ ಆಶ್ವಾಸನೆಗಳಲ್ಲಿ ಒಂದಾಗಿದೆ. ಎಲ್‌ಡಿಎಫ್ ಸರ್ಕಾರವು ಇದನ್ನು ಪ್ರಮುಖ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಾಗಿ ಪರಿಕಲ್ಪಿಸಿದೆ. ಈ ಯೋಜನೆಯನ್ನು ರಾಜ್ಯದ ಒಂದು ಪ್ರಮುಖ ಕಾಳಜಿಯಾದ ಸಂಚಾರ ದಟ್ಟಣೆ, ರಸ್ತೆ ಅಪಘಾತಗಳು ಮತ್ತು ವಾಹನಗಳಿಂದ ಉಂಟಾಗುವ ವಾಯು ಮಾಲಿನ್ಯವನ್ನು ತಪ್ಪಿಸಲು ವಿನ್ಯಾಸಗೊಳಿಸಲಾಗಿದೆ. ರೈಲ್ವೇ ಅಭಿವೃದ್ಧಿ ತೀರಾ ಮಂದಗತಿಯಲ್ಲಿರುವ ಕೇರಳದಂತಹ ರಾಜ್ಯದಲ್ಲಿ ಸಿಲ್ವರ್ ಲೈನ್ ನಂತಹ ಯೋಜನೆ ಅನಿವಾರ್ಯವಾಗಿದೆ.

ಪ್ರಸ್ತುತ ದಕ್ಷಿಣದ ತುದಿಯಲ್ಲಿರುವ ತಿರುವನಂತಪುರದಿಂದ ಉತ್ತರದ ತುದಿಯಲ್ಲಿರುವ ಕಾಸರಗೋಡಿಗೆ ಪ್ರಯಾಣಿಸಲು 16 ಗಂಟೆಗಳಿಗಿಂತ ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ. ಸಿಲ್ವರ್‌ಲೈನ್ ಯೋಜನೆಯು ಈ ಸಮಸ್ಯೆಗೆ ಪರಿಹಾರವಾಗಿದೆ ಏಕೆಂದರೆ ಯೋಜನೆಯು ಸಾಕಾರವಾದರೆ ಅದು ಕೇವಲ ನಾಲ್ಕು ಗಂಟೆಗಳನ್ನು ತೆಗೆದುಕೊಳ್ಳುತ್ತದೆ. ಈ ಯೋಜನೆಯು ರಾಜ್ಯದಲ್ಲಿನ ಹೆಚ್ಚಿನ ಜನಸಾಂದ್ರತೆಯನ್ನು ಪರಿಗಣಿಸಿ ಪ್ರತಿ 50 ಕಿಲೋಮೀಟರ್‌ಗಳಿಗೆ ಒಂದರಂತೆ 11 ನಿಲ್ದಾಣಗಳನ್ನು ಕಲ್ಪಿಸುತ್ತದೆ.

ಪ್ರತಿ ಕಿಲೋಮೀಟರ್‌ಗೆ ರೂ. 120 ಕೋಟಿ ವೆಚ್ಚದಲ್ಲಿ ಬರುವ ಈ ಸೆಮಿ– ಹೈಸ್ಪೀಡ್ ರೈಲುಮಾರ್ಗವನ್ನು ಪ್ರಸ್ತುತ ಸರ್ಕಾರ ನಿರ್ಧರಿಸಲು ಇದು ಒಂದು ಪ್ರಮುಖ ಕಾರಣವಾಗಿದೆ. ಹೈಸ್ಪೀಡ್ ರೈಲ್ವೇಯಲ್ಲಿ ಪ್ರತಿ ಕಿಲೋಮೀಟರ್‌ಗೆ ರೂ. 6.00 ಟಿಕೆಟ್ ದರ ನಿಗದಿಪಡಿಸಲಾಗಿದೆ. ಆದರೆ ಸೆಮಿ ಹೈಸ್ಪೀಡ್ ರೈಲ್ವೇಗೆ ಅನುಗುಣವಾದ ದರವು 2020 ರ ದರದ ದರಗಳ ಪ್ರಕಾರ ಪ್ರತಿ ಕಿಲೋಮೀಟರ್‌ಗೆ ಕೇವಲ ರೂ. 2.75.

ವಿವರವಾದ ಯೋಜನಾ ವರದಿಯ ಪ್ರಕಾರ, ಸಿಲ್ವರ್‌ಲೈನ್‌ನ ವೆಚ್ಚ ರೂ. 63,940 ಕೋಟಿ ಆಗಿದೆ. ರೈಲ್ವೆಗೆ ಸೇರಿದ ಭೂಮಿಯ ಬೆಲೆ ರೂ. 975 ಕೋಟಿಗಳು. ಇದರ ಜೊತೆಗೆ ರೂ.2,150 ಕೋಟಿಗಳು ಕೇಂದ್ರ ಪಾಲು. ರಾಜ್ಯದ ಪಾಲು ರೂ.3,225 ಕೋಟಿಗಳು. ಸಾರ್ವಜನಿಕ ಶೇರು ಪಾಲುದಾರಿಕೆಯಿಂದ ರೂ. 4,252 ಕೋಟಿ ಗಳನ್ನು ಪಡೆಯಲಾಗುವುದು. ವೆಚ್ಚವನ್ನು ಪೂರೈಸಲು ಅಂತರರಾಷ್ಟ್ರೀಯ ಏಜೆನ್ಸಿಗಳ ಸಹಾಯವನ್ನು ಸಹ ಬಳಸಲಾಗುತ್ತದೆ. ಹುಡ್ಕೋ ಈಗಾಗಲೇ ರೂ. 3,000 ಕೋಟಿಗಳನ್ನು ಮಂಜೂರು ಮಾಡಿದೆ.


ವಿಶ್ವಸಂಸ್ಥೆಯ 'ವಿಪತ್ತು ಅಪಾಯ ಕಡಿತ' (ಡಿಸಾಸ್ಟರ್ ರಿಸ್ಕ್ ರಿಡಕ್ಷನ್)ದ ಕಚೇರಿಯ ಮುಖ್ಯಸ್ಥ ಮುರಳಿ ತುಮ್ಮರುಕುಡಿ ಅವರ ಪ್ರಕಾರ, ಬದಲಾವಣೆಗಳು ಅಗಾಧವಾಗಿರುತ್ತವೆ ಮತ್ತು ಅವುಗಳು ಹಲವಾರು ಹಂತಗಳಲ್ಲಿ ಗ್ರಹಿಕೆಗೆ ಬರುತ್ತವೆ. "ಎರ್ನಾಕುಲಂನಿಂದ ಯಾರಾದರೂ ಯಾವುದೇ ವ್ಯವಹಾರವನ್ನು ನಡೆಸಲು ತಿರುವನಂತಪುರಕ್ಕೆ ಬಂದರೆ, ರಾತ್ರಿಯ ತಂಗುವಿಕೆ ಅನಿವಾರ್ಯವಾದ ಕಾರಣ ಅದನ್ನು ಪೂರ್ಣಗೊಳಿಸಲು ಕನಿಷ್ಠ ಎರಡು ದಿನಗಳು ಬೇಕಾಗುತ್ತದೆ. ಹೇಗಾದರೂ, ದೂರವನ್ನು ಒಂದೂವರೆ ಅಥವಾ ಎರಡು ಗಂಟೆಗಳಲ್ಲಿ ಕ್ರಮಿಸಲು ಸಾಧ್ಯವಾದರೆ, ಅದು ನಿಸ್ಸಂದೇಹವಾಗಿ ನಮ್ಮ ಆರ್ಥಿಕ ಚಟುವಟಿಕೆಗಳನ್ನು ವೇಗಗೊಳಿಸುತ್ತದೆ. ಅಂತಹ ಸೂಪರ್‌ಫಾಸ್ಟ್ ರೈಲು ನಿಜವಾಗಿಯೂ ನಮಗೆ ಅಗತ್ಯವಿದೆಯೇ ಎಂದು ನಾವು ಯೋಚಿಸಬಹುದು. ಸಂಚಾರ ದಟ್ಟಣೆ ಅತೀ ಹೆಚ್ಚಿರುವಾಗ, ಒಸಾಕಾ ಮತ್ತು ಟೋಕಿಯೊ ನಡುವೆ ಪ್ರತಿ ಮೂರು ನಿಮಿಷಗಳಿಗೊಮ್ಮೆ ಅತೀ ವೇಗದ ಅಥವಾ ಬುಲೆಟ್ ರೈಲು (ಜಪಾನ್‌ನಲ್ಲಿ ಶಿಂಕಾನ್ಸೆನ್ ಎಂದು ಕರೆಯಲ್ಪಡುತ್ತದೆ) ಓಡುತ್ತವೆ. ಕೇರಳ ಆರ್ಥಿಕ ಶಕ್ತಿಯಾಗಿ ವೇಗವಾಗಿ ಬೆಳೆಯುತ್ತಿದೆ. ರಾಜ್ಯದ ಜಿಡಿಪಿ ಪ್ರತಿ ವರ್ಷ ಏರುತ್ತಿದೆ. ಆದ್ದರಿಂದ, ಮೂಲಸೌಕರ್ಯ ಅಭಿವೃದ್ಧಿಯನ್ನು ನಾವು ಇಂದು ನೋಡುತ್ತಿರುವ ಕೇರಳಕ್ಕೆ ಯೋಜಿಸಬಾರದು ಆದರೆ 2030 ಅಥವಾ 2040 ಅಥವಾ 2050 ರ ಕೇರಳಕ್ಕೆ ಯೋಜಿಸಬೇಕಾಗಿದೆ. ನಾವು ಇಂದಿನಂತೆ ಆಗಲೂ 10 ರಿಂದ 12 ಗಂಟೆಗಳ ಪ್ರಯಾಣದಲ್ಲಿ ಕಳೆಯಬೇಕೇ?" ಎಂದು ಮುರಳಿ ಕೇಳುತ್ತಾರೆ.

ಸಿಲ್ವರ್ ಲೈನ್ ಯೋಜನೆಯಿಂದ ಮನೆ, ಕಟ್ಟಡಗಳಿಗೆ ದೊಡ್ಡ ಪ್ರಮಾಣದಲ್ಲಿ ಹಾನಿಯಾಗಲಿದೆ ಎಂದು ಅಪಪ್ರಚಾರ ಮಾಡಲಾಗುತ್ತಿದೆ. ಸರಿಸುಮಾರು 9,314 ಕಟ್ಟಡಗಳು ಉದ್ದೇಶಿತ ಜೋಡಣೆಯ ಮಾರ್ಗದಲ್ಲಿ ಬರುತ್ತವೆ ಎಂಬುದು ನಿಜವಾದರೂ, ಆ ಸಂಖ್ಯೆಯನ್ನು ಮತ್ತಷ್ಟು ಕಡಿಮೆ ಮಾಡಲು ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಇದಲ್ಲದೆ, ಸಂಪೂರ್ಣ ಮನೆಗಳನ್ನು ಸ್ಥಳಾಂತರಿಸಲು ತಾಂತ್ರಿಕ ಪರಿಣತಿಯನ್ನು ಹುಡುಕಲಾಗುತ್ತಿದೆ, ಅವುಗಳನ್ನು ಹಾಗೆಯೇ ಇರಿಸಲಾಗುತ್ತದೆ. ಭೂಸ್ವಾಧೀನದ ಪ್ರದೇಶವನ್ನು ಕಡಿಮೆ ಮಾಡಲು, 'ಕಟ್ ಅಂಡ್ ಕವರ್' ನಿರ್ಮಾಣ ಶೈಲಿಯನ್ನು ಅಳವಡಿಸಿಕೊಳ್ಳಲಾಗುತ್ತದೆ. ಪುನರ್ವಸತಿ ಕಾನೂನುಗಳ ಪ್ರಕಾರ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವಾಗ, ಗ್ರಾಮೀಣ ಪ್ರದೇಶಗಳಲ್ಲಿ ಮಾರುಕಟ್ಟೆ ಬೆಲೆಯ ನಾಲ್ಕು ಪಟ್ಟು ಮತ್ತು ನಗರ ಪ್ರದೇಶಗಳಲ್ಲಿ ಮಾರುಕಟ್ಟೆ ಬೆಲೆಯ ಎರಡು ಪಟ್ಟು ಪರಿಹಾರವನ್ನು ಪಾವತಿಸಲಾಗುತ್ತದೆ. ಭೂಸ್ವಾಧೀನ ಸೇರಿದಂತೆ ಒಟ್ಟು ರೂ.13,265 ಕೋಟಿಗಳನ್ನು ಹಾನಿ ಪರಿಹಾರಕ್ಕೆ ಮೀಸಲಿಡಲಾಗಿದೆ. ಇದರಲ್ಲಿ ರೂ. 1,730 ಕೋಟಿಗಳನ್ನು ಪುನರ್ವಸತಿ ಹಾಗೂ ರೂ.4,460 ಕೋಟಿಗಳನ್ನು ಮನೆಗಳ ಪರಿಹಾರಕ್ಕಾಗಿ ನೀಡಲಾಗುವುದು. ಈ ವಿಷಯದ ಬಗ್ಗೆ ಹಣಕಾಸು ಸಂಸ್ಥೆಗಳೊಂದಿಗೆ ಚರ್ಚೆಯನ್ನು ಪ್ರಾರಂಭಿಸಲಾಗಿದೆ. ಕೊಚುವೇಲಿಯಿಂದ ಚೆಂಗನ್ನೂರು ವರೆಗಿನ ಸಿಲ್ವರ್‌ಲೈನ್‌ಗಾಗಿ ಮೊದಲ ಹಂತದ ಭೂಸ್ವಾಧೀನಕ್ಕಾಗಿ ಹುಡ್ಕೊ ಈಗಾಗಲೇ ರೂ.3,000 ಕೋಟಿ ಮುಂಗಡ ನೀಡಿದೆ.


ಈ ಯೋಜನೆಯನ್ನು ವಿರೋಧಿಸಿ ಕಾಂಗ್ರೆಸ್ ನೇತೃತ್ವದ ಯುನೈಟೆಡ್ ಡೆಮಾಕ್ರಟಿಕ್ ಫ್ರಂಟ್ ಮತ್ತು ಬಿಜೆಪಿ ನಿರಂತರವಾಗಿ ಪ್ರತಿಭಟನೆ ನಡೆಸುತ್ತಿವೆ. ಪರಿಸರವಾದಿಗಳ ಒಂದು ವಿಭಾಗ 'ಸಿಲ್ವರ್‌ಲೈನ್ ವಿರುಧ ಜನಕೀಯ ಸಮಿತಿ' ನೇತೃತ್ವದಲ್ಲಿ ಪ್ರತ್ಯೇಕ ಪ್ರತಿಭಟನೆಯಲ್ಲಿ ಭಾಗವಹಿಸುತ್ತಿದೆ. ಸಿಲ್ವರ್ ಲೈನ್ ಯೋಜನೆಯಿಂದ ರಾಜ್ಯದ ಸಾಲ ಹೆಚ್ಚಾಗಲಿದ್ದು, ಭಾರೀ ಹಗರಣ ನಡೆಯುವ ಸಾಧ್ಯತೆ ಇದೆ ಎಂದು ವಿರೋಧ ಪಕ್ಷಗಳು ಆರೋಪಿಸುತ್ತಿವೆ. ಈ ಯೋಜನೆಯು ಆರ್ಥಿಕವಾಗಿ ದುಸ್ತರವಾಗಿದೆ ಮತ್ತು ಇದು 30,000 ಕ್ಕೂ ಹೆಚ್ಚು ಕುಟುಂಬಗಳನ್ನು ಸ್ಥಳಾಂತರಿಸಲು ಕಾರಣವಾಗುತ್ತದೆ ಎಂದು ವಿರೋಧ ಪಕ್ಷದ ಸಂಸದರು ಸಹಿ ಮಾಡಿದ ಮನವಿಯಲ್ಲಿ ತಿಳಿಸಲಾಗಿದೆ. ಪ್ರಸ್ತಾವಿತ ಮಾರ್ಗವು ಅಮೂಲ್ಯವಾದ ಜೌಗು ಪ್ರದೇಶಗಳು, ಭತ್ತದ ಗದ್ದೆಗಳು ಮತ್ತು ಬೆಟ್ಟಗಳ ಮೂಲಕ ಸಾಗುವುದರಿಂದ ಸಿಲ್ವರ್‌ಲೈನ್ ರಾಜ್ಯದ ಪರಿಸರಕ್ಕೆ ಹಾನಿಕಾರಕವಾಗಿದೆ ಎಂದು ಪರಿಸರವಾದಿಗಳು ವಾದಿಸುತ್ತಾರೆ.

"ರಚನಾತ್ಮಕ ಟೀಕೆಗಳನ್ನು ಕೇಳಲು ಸರ್ಕಾರ ಸದಾ ಸಿದ್ಧವಿದೆ. ಆದರೆ ಅಭಿವೃದ್ಧಿ ಯೋಜನೆಗಳನ್ನು ಅಡ್ಡಿಪಡಿಸುವ ಉದ್ದೇಶದಿಂದ ಯಾವುದೇ ವಿರೋಧವು ಜನರಿಗೆ ನಾವು ನೀಡಿದ ಭರವಸೆಯನ್ನು ಈಡೇರಿಸದಂತೆ ತಡೆಯುವುದಿಲ್ಲ. ಕೇರಳದ ಅಭಿವೃದ್ಧಿಗಾಗಿ ನಾವು ಒಗ್ಗಟ್ಟಾಗಿ ನಿಲ್ಲಬೇಕಾಗಿದೆ. ಅಂತಹ ಅಭಿವೃದ್ಧಿ ಯೋಜನೆಗಳನ್ನು ಹಳಿತಪ್ಪಿಸಲು ಪ್ರಯತ್ನಿಸಿದರೆ, ಅದು ನಮ್ಮ ಮುಂದಿನ ಪೀಳಿಗೆಯ ಮೇಲೆ ಪರಿಣಾಮ ಬೀರುತ್ತದೆ, ಅದನ್ನು ನಾವು ಅವಕಾಶ ಕೊಡುವುದಿಲ್ಲ" ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಹೇಳಿದ್ದಾರೆ.

ತಿರುವನಂತಪುರದಿಂದ ಕಾಸರಗೋಡಿಗೆ ಪ್ರಯಾಣಿಸಲು 16 ಗಂಟೆಗಳಿಗಿಂತ ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ. ಸಿಲ್ವರ್‌ಲೈನ್ ಯೋಜನೆಯನ್ನು ಈ ಸಮಸ್ಯೆಗೆ ಪರಿಹಾರವಾಗಿ ಕೈಗೆತ್ತಿಕೊಳ್ಳಲಾಗಿದೆ. ಏಕೆಂದರೆ ಯೋಜನೆಯು ಸಾಕಾರವಾದರೆ ಅದು ಕೇವಲ ನಾಲ್ಕು ಗಂಟೆಗಳಿಗೆ ಇಳಿಯುತ್ತದೆ.
ಈ ಯೋಜನೆಯು ರಾಜ್ಯದಲ್ಲಿನ ಹೆಚ್ಚಿನ ಜನಸಾಂದ್ರತೆಯನ್ನು ಪರಿಗಣಿಸಿ ಪ್ರತಿ 50 ಕಿಲೋಮೀಟರ್‌ಗಳಿಗೆ ಒಂದರಂತೆ 11 ನಿಲ್ದಾಣಗಳನ್ನು ಕಲ್ಪಿಸುತ್ತದೆ.
ಪ್ರತಿ ಕಿಲೋಮೀಟರ್‌ಗೆ ರೂ. 120 ಕೋಟಿ ವೆಚ್ಚದಲ್ಲಿ ಬರುವ ಹೈಸ್ಪೀಡ್ ರೈಲ್ವೆಯಲ್ಲಿ ಪ್ರತಿ ಕಿಲೋಮೀಟರ್‌ಗೆ ರೂ. 6.00 ಟಿಕೆಟ್ ದರ ನಿಗದಿಪಡಿಸಲಾಗಿದೆ. ಆದರೆ ಸೆಮಿ ಹೈಸ್ಪೀಡ್ ರೈಲ್ವೇಗೆ ಅನುಗುಣವಾದ ದರವು 2020 ರ ದರಗಳ ಪ್ರಕಾರ ಪ್ರತಿ ಕಿಲೋಮೀಟರ್‌ಗೆ ರೂ. 2.75.



ಬಜೆಟ್ ಮೌನಗಳು ಜನರಿಗೆ ದುರದೃಷ್ಟಕರ ಮಾತ್ರವಲ್ಲ; ದೇಶಕ್ಕೆ ಅನಿಷ್ಟಕರವೂ ಕೂಡ



ದೇಶದಲ್ಲಿ ಸಮಸ್ಯೆಗಳಿವೆ ಎಂಬುದನ್ನೇ ಬಜೆಟ್‌ನಲ್ಲಿ ಗುರುತಿಸಿಲ್ಲ. ಅರ್ಥವ್ಯವಸ್ಥೆಯನ್ನು ಉತ್ತೇಜಿಸುವ ಸಲುವಾಗಿ ಬೇಡಿಕೆಯನ್ನು ಹೆಚ್ಚಿಸುವಂತಹ ಯಾವ ಕೆಲಸವನ್ನೂ ಬಜೆಟ್ ಮಾಡಿಲ್ಲ. ಆದರೆ ಭಾರತದ ಅರ್ಥವ್ಯವಸ್ಥೆ ಮತ್ತು ಬಾಹ್ಯ ಬೆಳವಣಿಗೆಗಳು ಇವೆರಡೂ ಸಂಬಂಧ ಹೊಂದಿರುವ ಕಾರಣಗಳಿಂದಾಗಿ ಜನಗಳ ಸಂಕಷ್ಟಗಳು ಇನ್ನಷ್ಟು ಹೆಚ್ಚಲಿವೆ. ಆದರೆ, ಭಾವ ಶೂನ್ಯ ಮೋದಿ ಸರ್ಕಾರವು ಜನರ ಸಮಸ್ಯೆಗಳನ್ನು ಗುರುತಿಸಿ ಅವುಗಳನ್ನು ಪರಿಹರಿಸುವ ಗೋಜಿಗೆ ಹೋಗುವುದೇ ಇಲ್ಲ. ಸರ್ಕಾರದ ಈ ವರ್ತನೆಯೇ ಅನಿಷ್ಟಕರವಾಗಿದೆ. ಅದು ಮೋದಿ ಸರಕಾರ ಐಎಂಎಫ್‌ಗೆ ಓಡುವಂತೆ ಮಾಡುತ್ತದೆ. ಐಎಂಎಫ್ ಪ್ಯಾಕೇಜನ್ನು ಒಪ್ಪಿಕೊಂಡದ್ದರಿಂದಾಗಿ ಗ್ರೀಸ್ ದೇಶವು ಅನುಭವಿಸಿದ ದುಃಸ್ಥಿತಿಯನ್ನು ಭಾರತವು ಇಲ್ಲಿಯವರೆಗೆ ತಪ್ಪಿಸಿಕೊಂಡಿತ್ತು. ಆದರೆ, ಅರ್ಥಶಾಸ್ತ್ರದ ವಿಕೃತ ತಿಳುವಳಿಕೆ ಹೊಂದಿರುವ ಸರ್ಕಾರವು ನಮ್ಮನ್ನು ಈ ದಿಕ್ಕಿನಲ್ಲಿ ತಳ್ಳುತ್ತದೆ. ಹಾಗಾಗಿ, ಪ್ರಮುಖ ಸಮಸ್ಯೆಗಳ ಬಗ್ಗೆ ಬಜೆಟ್ ಮೌನಗಳು ಜನರಿಗೆ ದುರದೃಷ್ಟಕರ ಮಾತ್ರವಲ್ಲ; ಅವು ದೇಶಕ್ಕೆ ಅನಿಷ್ಟಕರವೂ ಹೌದು.

ಪ್ರೊ.ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ಅರ್ಥವ್ಯವಸ್ಥೆಯು ಸಂಕಷ್ಟದಲ್ಲಿರುವ ಇಂದಿನ ಪರಿಸ್ಥಿತಿಯಲ್ಲಿ ಬಜೆಟ್ ಮಂಡನೆಯಾಗಿದೆ. ನಿರುದ್ಯೋಗ ಪರಿಸ್ಥಿತಿ ಎಷ್ಟು ಭೀಕರವಾಗಿದೆ ಎಂದರೆ, ನೇಮಕಾತಿಗೆ ಸಂಬಂಧಿಸಿ ಬಿಹಾರ ಮತ್ತು ಉತ್ತರ ಪ್ರದೇಶ ರಾಜ್ಯಗಳಲ್ಲಿ ಗಲಭೆಗಳು ನಡೆದಿವೆ. ವರಮಾನ ಮತ್ತು ಸಂಪತ್ತಿನ ಅಸಮಾನತೆಗಳು ವಿಶ್ವದಲ್ಲೇ ಅತಿ ಹೆಚ್ಚಿನ ಮಟ್ಟದಲ್ಲಿವೆ. ಕೊರೊನಾ ಮತ್ತು ಸಂಬಂಧಿತ ಲಾಕ್‌ಡೌನ್‌ನಿಂದಾಗಿ ಕೋಟಿಗಟ್ಟಲೆ ಮಂದಿ ಬಡತನಕ್ಕೆ ತಳ್ಳಲ್ಪಟ್ಟಿದ್ದಾರೆ. ಭಾರಿ ನಿರುದ್ಯೋಗದ ನಡುವೆಯೂ ಹಣದುಬ್ಬರವು ತೀವ್ರಗೊಳ್ಳುತ್ತಿದೆ. ಹಾಗಾಗಿ, ಸಂಕಷ್ಟದಲ್ಲಿರುವ ಅರ್ಥವ್ಯವಸ್ಥೆಯನ್ನು ಉತ್ತೇಜಿಸುವ, ಬಡವರಿಗೆ ಪರಿಹಾರ ಒದಗಿಸುವ ಮತ್ತು ಹಣದುಬ್ಬರಕ್ಕೆ ಕಡಿವಾಣ ಹಾಕುವ ಒಂದು ಕಾರ್ಯತಂತ್ರವನ್ನು ಅಳವಡಿಸಿಕೊಳ್ಳುವುದು ಇಂದಿನ ತುರ್ತು ಅಗತ್ಯವಿರುವ ಕಾರಣದಿಂದಾಗಿ ಅಂತಹ ಒಂದು ಕಾರ್ಯತಂತ್ರವನ್ನು ಈ ವರ್ಷದ (2022–23) ಕೇಂದ್ರ ಬಜೆಟ್ ಅಳವಡಿಸಿಕೊಳ್ಳಬಹುದೆಂಬ ನಿರೀಕ್ಷೆ ಇತ್ತು. ಆದರೆ, ಬಜೆಟ್ ವಿವರಗಳನ್ನು ಪರಿಶೀಲಿಸಿದಾಗ ಅಂತಹ ಯಾವ ಸೂಚನೆಗಳೂ ಕಾಣಸಿಗುವುದಿಲ್ಲ. ಮಾತ್ರವಲ್ಲ, ದೇಶದಲ್ಲಿ ಸಮಸ್ಯೆಗಳಿವೆ ಎಂಬುದನ್ನೇ ಬಜೆಟ್‌ನಲ್ಲಿ ಗುರುತಿಸಿಲ್ಲ. ಬಜೆಟ್ ಮಂಡನೆಯಾದ ಹಿಂದಿನ ದಿನ ಸಂಸತ್ತಿನಲ್ಲಿ ಮಂಡಿಸಿದ ಆರ್ಥಿಕ ಸಮೀಕ್ಷೆಯು ದೇಶದ ಆರ್ಥಿಕ ಪರಿಸ್ಥಿತಿಯ ಬಗ್ಗೆ ಸಂತೃಪ್ತ ಭಾವವನ್ನು ಪ್ರಕಟಿಸಿತ್ತು. ಅದೇ ಭಾವನೆಯ ಮುಂದುವರಿಕೆಯಾಗಿದೆ ಈ ಬಜೆಟ್.

ಬಜೆಟ್ ಪ್ರಕಾರ, 2022–23ರಲ್ಲಿ ಸರ್ಕಾರದ ಒಟ್ಟು ವೆಚ್ಚಗಳು 39.45 ಲಕ್ಷ ಕೋಟಿ ರೂ.ಗಳು. ಇದು 2021–22ರ ಪರಿಷ್ಕೃತ ಅಂದಾಜಿಗಿಂತ ಕೇವಲ ಶೇ.4.6ರಷ್ಟು ಹೆಚ್ಚಿಗೆ ಇದೆ. ಅಂದರೆ. ಈ ಹೆಚ್ಚಳವು ಹಣದುಬ್ಬರ ಏರುವ ದರಕ್ಕಿಂತ ಕಡಿಮೆ ಇದೆ. ಅಂದರೆ, ಬೆಲೆ–ಏರಿಕೆಯಿಂದಾಗಿ, ಅದರ ನಿಜ ಮೌಲ್ಯದಲ್ಲಿ ಕುಸಿತವಿರುತ್ತದೆ. ಹಾಗಾಗಿ, ಆರ್ಥಿಕ ಸಮೀಕ್ಷೆಯು ಭಾವಿಸಿರುವ ನಿಜ ಜಿಡಿಪಿಯ ಬೆಳವಣಿಗೆಯು ಅಂದಾಜು ಮಾಡಿದ ಶೇಕಡಾ 8–8.5 ಗಿಂತ ಕಡಿಮೆಯೇ ಆಗುತ್ತದೆ. ಪರಿಸ್ಥಿತಿ ಹೀಗಿರುವಾಗ, ತನ್ನ ಖರ್ಚು–ವೆಚ್ಚಗಳು ಅರ್ಥವ್ಯವಸ್ಥೆಯನ್ನು ಉತ್ತೇಜಿಸುತ್ತವೆ ಎಂಬುದನ್ನು ಸರ್ಕಾರವೇ ಪರಿಗಣಿಸಿಲ್ಲ. ಹಾಗಾಗಿ, ಆರ್ಥಿಕ ಚಟುವಟಿಕೆಗಳ ಗಾತ್ರ ಕುಗ್ಗುತ್ತದೆ. ಸರ್ಕಾರದ ಬಂಡವಾಳ ವೆಚ್ಚಗಳು ಶೇಕಡಾ 35 ರಷ್ಟು ಏರುತ್ತವೆ ಎಂಬುದೇನೊ ನಿಜ. ಆದರೆ, ಒಟ್ಟು ಬೇಡಿಕೆಯ ದೃಷ್ಟಿಯಲ್ಲಿ, ಒಟ್ಟಾರೆ ವೆಚ್ಚಗಳು ಮುಖ್ಯವೇ ವಿನಃ, ಬಂಡವಾಳ ವೆಚ್ಚಗಳ ಹೆಚ್ಚಳವಲ್ಲ.

ಅರ್ಥವ್ಯವಸ್ಥೆಯನ್ನು ಉತ್ತೇಜಿಸುವ ಸಲುವಾಗಿ ಬೇಡಿಕೆಯನ್ನು ಹೆಚ್ಚಿಸುವಂತಹ ಯಾವ ಕೆಲಸವನ್ನೂ ಬಜೆಟ್ ಮಾಡಿಲ್ಲ. ದುಡಿಯುವ ಜನರಿಗೆ ಪರಿಹಾರ ಒದಗಿಸುವ ಪ್ರಸ್ತಾಪವನ್ನೂ ಮಾಡಿಲ್ಲ. 2021–22ರ ಪರಿಷ್ಕೃತ ಅಂದಾಜುಗಳಿಗೆ ಹೋಲಿಸಿದರೆ, ಬಡವರಿಗೆ ಪರಿಹಾರ ಒದಗಿಸುವ ಕಾರ್ಯಕ್ರಮಗಳ ವೆಚ್ಚವನ್ನು ವಾಸ್ತವವಾಗಿ ಕಡಿತಗೊಳಿಸಲಾಗಿದೆ. ಉದ್ಯೋಗ ಖಾತ್ರಿ ಯೋಜನೆಗೆ 2021–22ರಲ್ಲಿ 98,000 ಕೋಟಿ ರೂ.ಗಳನ್ನು ಮತ್ತು 2020–21ರಲ್ಲಿ 1,11,000 ಕೋಟಿ ರೂ.ಗಳನ್ನು ನಿಗದಿಪಡಿಸಲಾಗಿತ್ತು. ಆದರೆ, ಈ ವರ್ಷ ಕೇವಲ 73,000 ಕೋಟಿ ರೂ.ಗಳನ್ನು ನಿಗದಿಪಡಿಸಲಾಗಿದೆ. ಉದ್ಯೋಗ ಖಾತ್ರಿ ಯೋಜನೆಯು ಒಂದು ಬೇಡಿಕೆ–ಚಾಲಿತ ಕಾರ್ಯಕ್ರಮ ವಾಗಿರುವುದರಿಂದ, ಅಗತ್ಯವಿದ್ದರೆ ಹಣ ಒದಗಿಸಲಾಗುವುದು ಎಂದು ಸರ್ಕಾರ ಹೇಳುತ್ತದೆ. ಆದರೆ, ಹಣ ಬಿಡುಗಡೆ ಮಾಡುವಲ್ಲಿ ಸರ್ಕಾರವು ವಿಪರೀತ ತಡ ಮಾಡುವುದರಿಂದ ಮತ್ತು ಕೆಲಸ ಮಾಡಿದವರಿಗೆ ಕೂಲಿ ಪಾವತಿ ಮಾಡುವಲ್ಲಿ ತಿಂಗಳುಗಟ್ಟಲೆ ತಡವಾಗುತ್ತಿರುವ ಪರಿಸ್ಥಿತಿಯಲ್ಲಿ, ಬಜೆಟ್‌ನಲ್ಲಿ ನಿಗದಿಪಡಿಸಿರುವ ಅತಿ ಕಡಿಮೆ ಮೊತ್ತವು ಉದ್ಯೋಗಗಳ ಮೇಲಿನ ಬೇಡಿಕೆಯನ್ನು ಕಡಿಮೆ ಮಾಡುವ ಪರಿಣಾಮ ಬೀರುತ್ತದೆ. ಏಕೆಂದರೆ, ಕಾರ್ಮಿಕರು ವೇತನ ಪಡೆಯಲು ಮಿತಿ ಇಲ್ಲದೆ ತಾಳ್ಮೆಯಿಂದ ಕಾಯಬೇಕಾಗುವುದರಿಂದ, ಕೆಲಸ ಬಯಸಿ ಅರ್ಜಿ ಸಲ್ಲಿಸಲು ಜನರು ನಿರುತ್ಸಾಹಗೊಳ್ಳುತ್ತಾರೆ. ಅದೇ ರೀತಿಯಲ್ಲಿ, 2021–22ರ ಪರಿಷ್ಕೃತ ಅಂದಾಜಿಗೆ ಹೋಲಿಸಿದರೆ, ಆಹಾರ ಸಬ್ಸಿಡಿಯನ್ನು ಶೇಕಡಾ 28ರಷ್ಟು, ರಸಗೊಬ್ಬರ ಸಬ್ಸಿಡಿಯನ್ನು ಶೇಕಡಾ 25ರಷ್ಟು, ಪೆಟ್ರೋಲಿಯಂ ಸಬ್ಸಿಡಿಯನ್ನು ಶೇಕಡಾ 11ರಷ್ಟು ಮತ್ತು ಇತರ ಸಬ್ಸಿಡಿಗಳನ್ನು ಶೇಕಡಾ 31ರಷ್ಟು ಕಡಿತಗೊಳಿಸಲಾಗಿದೆ. ಮಧ್ಯಾಹ್ನದ ಊಟದ ಯೋಜನೆ ಮತ್ತು ಪಿಎಂ–ಕಿಸಾನ್ ಯೋಜನೆಗಾಗಿ ಮಾಡಿರುವ ಹಂಚಿಕೆಗಳು ವಾಸ್ತವವಾಗಿ ಬದಲಾಗಿಲ್ಲ. ಅಂದರೆ, ಹಣದುಬ್ಬರವನ್ನು ಲೆಕ್ಕಕ್ಕೆ ತೆಗೆದುಕೊಂಡಾಗ(ಅಂದರೆ, ನಿಜ ಅರ್ಥದಲ್ಲಿ) ಅದು ಕುಸಿತವೇ.

ಅವಮಾನಕರವಾದ ಒಂದು ವಿಷಯವೆಂದರೆ, ಎರಡು ವರ್ಷಗಳಿಂದಲೂ ಜನರನ್ನು ಸತತವಾಗಿ ಬಾಧಿಸುತ್ತಿರುವ ಕೊರೊನಾ ಸಾಂಕ್ರಾಮಿಕದ ನಡುವೆಯೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣದ ಬಜೆಟ್‌ನಲ್ಲಿ, ನಿಜವಾದ ಅರ್ಥದಲ್ಲಿ ಕಡಿತವಾಗಿದೆ. ಸರ್ಕಾರವೇ ಹಿಂದೆ ನೀಡಿದ್ದ ಭರವಸೆಯ ಪ್ರಕಾರ ಆರೋಗ್ಯದ ಬಾಬ್ತು ಹಂಚಿಕೆಯನ್ನು ಕಾಲ ಕ್ರಮೇಣ ಜಿಡಿಪಿಯ ಶೇಕಡಾ 3 ರ ಮಟ್ಟಕ್ಕೆ ಹೆಚ್ಚಿಸುವುದರ ಬದಲು, ಈಗ ಆರೋಗ್ಯದ ಮೇಲಿನ ಹಂಚಿಕೆಯನ್ನು, ಜಿಡಿಪಿಯ ಹೋಲಿಕೆಯಲ್ಲಿ, ಕಡಿಮೆ ಮಾಡಿದೆ. ಶಿಕ್ಷಣದ ಮೇಲಿನ ಹಂಚಿಕೆಯನ್ನು ಶೇಕಡಾ 18.5 ರಷ್ಟು ಹೆಚ್ಚಿಸಲಾಗಿದೆ ಎಂಬುದೇನೊ ಸರಿ. ಆದರೆ, ಅದರಲ್ಲಿ ಹೆಚ್ಚಿನದು ಡಿಜಿಟಲ್ ಶಿಕ್ಷಣಕ್ಕಾಗಿ. ಅದೂ ಅಲ್ಲದೆ, ಈ ಹೆಚ್ಚಳವು ಶಿಕ್ಷಣದ ಪಾಲನ್ನು ಜಿಡಿಪಿಯ ಶೇಕಡಾ 3.1ರ ಮಟ್ಟದಿಂದ ಮೇಲಕ್ಕೆ ಕೊಂಡೊಯ್ದಿಲ್ಲ. ಅದನ್ನು ಉದ್ದೇಶಿತ ಶೇಕಡಾ 6ಕ್ಕೆ ಏರಿಸುವ ಸಾಧ್ಯತೆಯಂತೂ ದೂರದ ಮಾತಾಗುತ್ತದೆ. ಸಾಮಾಜಿಕ ವಲಯದ ಮೇಲಿನ ವೆಚ್ಚಗಳನ್ನು ತೀವ್ರವಾಗಿ ಕಡಿತಗೊಳಿಸಿದೆ ಮಾತ್ರವಲ್ಲ, ರಾಜ್ಯಗಳಿಗೆ ಹಂಚಿಕೆಯಾಗುವ ಸಂಪನ್ಮೂಲಗಳನ್ನೂ ಸಹ ಕಡಿತಗೊಳಿಸಲಾಗಿದೆ: ಈ ಹಂಚಿಕೆಯು ನಾಮಮಾತ್ರದ ಪರಿಭಾಷೆಯಲ್ಲಿ ಶೇಕಡಾ 9.6 ರಷ್ಟು ಹೆಚ್ಚಾಗಲಿದೆ. ಆದರೆ, ಹಣದುಬ್ಬರಕ್ಕೆ ಹೋಲಿಸಿದ ಲೆಕ್ಕಾಚಾರದಲ್ಲಿ ಶೇಕಡಾ 6.25ಕ್ಕೆ ಬರುತ್ತದೆ ಮತ್ತು 2021–22ರ ಪರಿಷ್ಕೃತ ಅಂದಾಜು ಶೇಕಡಾ 6.91 ಕ್ಕಿಂತಲೂ ಕಡಿಮೆ ಇದೆ. ಹಾಗಾಗಿ, ಜಿಡಿಪಿಯಲ್ಲಿ ಶಿಕ್ಷಣದ ಪಾಲು ಕುಸಿಯುತ್ತದೆ.


ಈ ಹಂಚಿಕೆಗಳನ್ನು ಮನಸ್ಸಿಗೆ ತೋಚಿದಂತೆ ಮಾಡಲಾಗಿದೆ ಎನ್ನುವುದಕ್ಕಿಂತ ಹೆಚ್ಚಾಗಿ, ಮೋದಿ ಸರ್ಕಾರವು ಕಳೆದ ಕೆಲವು ವರ್ಷಗಳಿಂದಲೂ ಅನುಸರಿಸುತ್ತಿರುವ ವಿತ್ತೀಯ ನೀತಿಯ ಕಾರ್ಯತಂತ್ರವನ್ನು ಬಿಂಬಿಸುತ್ತವೆ. ಖಾಸಗಿ ಹೂಡಿಕೆಯನ್ನು ಉತ್ತೇಜಿಸುವ ನಿರೀಕ್ಷೆಯಲ್ಲಿ ಕಾರ್ಪೊರೇಟ್‌ಗಳಿಗೆ ತೆರಿಗೆ ರಿಯಾಯಿತಿಗಳನ್ನು ನೀಡುವ ಮತ್ತು ಈ ರಿಯಾಯಿತಿಗಳಿಂದ ಉಂಟಾದ ಆದಾಯದ ಖೋತಾವನ್ನು ಸರಿದೂಗಿಸಲು ಪರೋಕ್ಷ ತೆರಿಗೆಗಳನ್ನು ಹೆಚ್ಚಿಸುವ, ಅದರಲ್ಲೂ ವಿಶೇಷವಾಗಿ ಪೆಟ್ರೊ ತೈಲಗಳ ಬೆಲೆಗಳ ಏರಿಕೆ ಮತ್ತು ಅದೂ ಸಾಕಾಗದಿದ್ದರೆ ತಾನು ಕೈಗೊಳ್ಳಬೇಕಿದ್ದ ಖರ್ಚು ವೆಚ್ಚವನ್ನು ಮೊಟಕುಗೊಳಿಸುವ ಕ್ರಮಗಳು, ಇಂದು ನಾವು ನೋಡುತ್ತಿರುವ ಹಣದುಬ್ಬರದ ಜೊತೆಯಲ್ಲಿ ಆರ್ಥಿಕ ಹಿಂಜರಿತಕ್ಕೆ ಪ್ರಮುಖ ಕಾರಣವಾಗಿವೆ. ಆದ್ದರಿಂದ ಅರ್ಥವ್ಯವಸ್ಥೆಯು ಎದುರಿಸುತ್ತಿರುವ ಬಿಕ್ಕಟ್ಟಿನಿಂದ ಅದು ಹೊರಬರಬೇಕು ಎಂದಾದರೆ, ಈ ಕ್ರಮಗಳನ್ನು ಹಿಂದಕ್ಕೆ ತಳ್ಳಿ ತಿರುಗುಮುರುಗುಗೆ ೞಳಿಸಬೇಕಾಗುತ್ತದೆ. ಆದರೆ, ಈ ವರೆಗೆ ಒದಗಿಸಿದ ತೆರಿಗೆ ರಿಯಾಯಿತಿಗಳು ಖಾಸಗಿ ಹೂಡಿಕೆಯನ್ನು ಉತ್ತೇಜಿಸುವುದರ ಬದಲಾಗಿ ಬರಲಿರುವ ಆರ್ಥಿಕ ಹಿಂಜರಿತದದಿಂದಾಗಿ ಕುಗ್ಗುತ್ತವೆ ಎಂಬುದು ಈಗಾಗಲೇ ಸ್ಪಷ್ಟವಾಗಿದ್ದರೂ ಸಹ, ಮೋದಿ ಸರ್ಕಾರವು ತಾನು ಅನುಸರಿಸುತ್ತಿರುವ ಈ ವಿಕೃತ ಕಾರ್ಯತಂತ್ರದಿಂದ ಆಚೆ ದೃಷ್ಟಿ ಹಾಯಿಸುವಲ್ಲಿ ಅಸಮರ್ಥವಾಗಿದೆ. ಪ್ರಸ್ತುತ ಬಜೆಟ್‌ನಲ್ಲಿಯೂ ಸಹ ಈ ಕಾರ್ಯತಂತ್ರವೇ ವಿಜೃಂಭಿಸುತ್ತಿದೆ: ಸಬ್ಸಿಡಿಗಳನ್ನು ಕಡಿತಗೊಳಿಸುತ್ತಿರುವ ಸಮಯದಲ್ಲೇ ಮಿಶ್ರಣಮಾಡದೆ ಬಳಕೆಯಾಗುವ ಭಾರತದ ಬಹುಪಾಲು ಇಂಧನದ ಮೇಲಿನ ಹೆಚ್ಚುವರಿ ಅಬಕಾರಿ ಸುಂಕವನ್ನು ಪ್ರತಿ ಲೀಟರ್‌ಗೆ 2 ರೂನಷ್ಟು ಹೆಚ್ಚಿಸಲಾಗಿದೆ. ಈ ಕ್ರಮವು ಪರೋಕ್ಷ ತೆರಿಗೆಗಳ ಏರಿಕೆಗೆ ಸಮಾನವಾಗುತ್ತದೆ.

ಈ ವಿಕೃತ ಕಾರ್ಯತಂತ್ರದಲ್ಲಿ ಯಾವುದೇ ಚೇತರಿಕೆಗಾಗಲಿ ಅಥವಾ ಯಾವುದೇ ಪರಿಹಾರಕ್ಕಾಗಲಿ ಅವಕಾಶವಿಲ್ಲ. ಹೆಚ್ಚೆಂದರೆ, ಸರ್ಕಾರವು ಒಂದಿಷ್ಟು ಹಣವನ್ನು ಒಂದು ಖಾತೆಯಿಂದ ಮತ್ತೊಂದು ಖಾತೆಗೆ ವರ್ಗಾಯಿಸಬಹುದು ಮತ್ತು ನಂತರ ಸರ್ಕಾರವು ಎಷ್ಟೊಂದು ಉದಾರವಾಗಿದೆ ಎಂದು ಬಿಂಬಿಸಿ ಬೀಗುವ ಸಲುವಾಗಿ ತನಗೆ ಡೊಗ್ಗು ಸಲಾಮು ಹೊಡೆಯುವ ಮಾಧ್ಯಮವನ್ನು ಬಳಸಿಕೊಳ್ಳಬಹುದು. ಇಂತಹ ಚಾಲಾಕಿತನವನ್ನು ನಿರೀಕ್ಷಿಸಬಹುದಾಗಿದ್ದರೂ ಈ ಬಜೆಟ್‌ನಲ್ಲಿ ಅದೂ ಇಲ್ಲ ಎಂಬುದು ಗಮನಾರ್ಹವಾಗಿದೆ. ಆದಾಯ ತೆರಿಗೆ ದರಗಳಲ್ಲಿ ಬದಲಾವಣೆ ಇಲ್ಲ. ಆದಾಯ ತೆರಿಗೆ ಪಾವತಿಸುವ ಮಧ್ಯಮ ವರ್ಗಕ್ಕೆ ಯಾವ ರಿಯಾಯಿತಿಯನ್ನೂ ತೋರಿಸಿಲ್ಲ. ಹಣದುಬ್ಬರ ದರವನ್ನು ಕೆಳಗಿಳಿಸುವ ಸಲುವಾಗಿ ಪರೋಕ್ಷ ತೆರಿಗೆಗಳಲ್ಲಿ ಕಡಿತವನ್ನೂ ಮಾಡಿಲ್ಲ. ಜೊತೆಗೆ, ಹಲವು ಹತ್ತು ಸಾಮಾಜಿಕ ಕಾರ್ಯಕ್ರಮಗಳ ಮೇಲಿನ ವೆಚ್ಚಗಳನ್ನು ಕಡಿತಗೊಳಿಸಲಾಗಿದೆ. ಜನರು ಅಭೂತಪೂರ್ವ ಸಂಕಷ್ಟಗಳನ್ನು ಎದುರಿಸುತ್ತಿರುವ ಸಮಯದಲ್ಲಿ ಮತ್ತು ಐದು ರಾಜ್ಯಗಳಲ್ಲಿ ಚುನಾವಣೆಗಳು ಕೆಲವೇ ದಿನಗಳಲ್ಲಿ ನಡೆಯಲಿರುವ ಸಮಯದಲ್ಲಿ ಸರ್ಕಾರವು ಇದನ್ನು ಮಾಡುವ ಧೈರ್ಯ ತೋರಿಸುತ್ತಿದೆ ಎಂಬ ಅಂಶವು ಅದು ಕೋಮು ಧ್ರುವೀಕರಣದ ಬಲದ ಮೇಲೆ ಮತಗಳನ್ನು ಸೆಳೆಯಬಹುದು ಎಂಬ ವಿಶ್ವಾಸ ಹೊಂದಿರುವುದನ್ನು ಸೂಚಿಸುತ್ತದೆ.

ಬಜೆಟ್ ಈ ಸಂಕಷ್ಟಗಳನ್ನು ಪರಿಹರಿಸದಿದ್ದರೂ, ಭಾರತದ ಅರ್ಥವ್ಯವಸ್ಥೆ ಮತ್ತು ಬಾಹ್ಯ ಬೆಳವಣಿಗೆಗಳು ಇವೆರಡೂ ಸಂಬಂಧ ಹೊಂದಿರುವ ಕಾರಣಗಳಿಂದಾಗಿ ಈ ಸಂಕಷ್ಟಗಳು ಇನ್ನಷ್ಟು ಹೆಚ್ಚಲಿವೆ. ಮುಖ್ಯ ಆಂತರಿಕ ಅಂಶವೆಂದರೆ, ಖಾಸಗಿ ಬಳಕೆಯ ಇಳಿಕೆ. ನಿಜವಾಗಿ ಹೇಳುವುದಾದರೆ, ಬಳಕೆಯು 2019–20 ಮಟ್ಟಕ್ಕಿಂತ ಕೆಳಗಿದೆ. ಇದರರ್ಥವೆಂದರೆ, ಬಳಕೆಯ ಸರಕುಗಳ ಉತ್ಪಾದನಾ ಸಾಮರ್ಥ್ಯವು 2019–20ರ ಮಟ್ಟದಲ್ಲಿದ್ದರೂ, ಇನ್ನೂ ಬಳಕೆಯಾಗದ ಸಾಮರ್ಥ್ಯವು ಹೆಚ್ಚಿನ ಮಟ್ಟದಲ್ಲಿರುತ್ತದೆ. ಅದೂ ಅಲ್ಲದೆ, 2019–20 ರ ಮೊದಲು ನೀಡಲಾದ ಹೂಡಿಕೆ ಆದೇಶಗಳು ಅಂದಿನಿಂದ ಇಂದಿನವರೆಗೆ ಈಡೇರುತ್ತಿರುವುದರಿಂದ ಈ ವಲಯಗಳಲ್ಲಿ ಸಾಮರ್ಥ್ಯಕ್ಕೆ ಸ್ವಲ್ಪ ಸೇರ್ಪಡೆಯಾಗುತ್ತದೆ. ಆದ್ದರಿಂದ, ಈ ವಲಯಗಳಲ್ಲಿ ಬಳಕೆಯಾಗದ ಸಾಮರ್ಥ್ಯವು

ಪುಟ 14 ನೋಡಿ

ಉದ್ಯೋಗರಹಿತ ರೈತ ದಿನಗೂಲಿ ಮಧ್ಯಮವರ್ಗ ಎಂಎಸ್‌ಎಂಇ



ಖುಶಿಪಡಿರಪ್ಪಾ! ಡಿಜಿಟೈಸ್ಡ್ ಮಾನಸಿಕ ಆರೋಗ್ಯ ಸಲಹಾ ಕಾರ್ಯವನ್ನು ಆರಂಭಿಸುವುದಾಗಿ ಬಜೆಟ್–2022 ಪ್ರಕಟಿಸಿದೆ

ವ್ಯಂಗ್ಯಚಿತ್ರ: ಸಂದೀಪ ಅಧ್ವರ್ಯು, ಟೈಂಸ್ ಆಫ್ ಇಂಡಿಯ

ಲಖಿಂಪುರ ಖೇರಿ ಹತ್ಯಾಕಾಂಡದ ಪ್ರಮುಖ ಆರೋಪಿಗೆ ಜಾಮೀನು ಅತ್ಯಂತ ದುರದೃಷ್ಟಕರ–ಎಐಕೆಎಸ್

ಅಕ್ಟೋಬರ್ 3, 2021 ರಂದು ಉತ್ತರ ಪ್ರದೇಶದ ಲಖಿಂಪುರ ಖೇರಿಯಲ್ಲಿ ನಾಲ್ವರು ರೈತರು ಮತ್ತು ಒಬ್ಬ ಪತ್ರಕರ್ತನ ಪ್ರಮುಖ ಹಂತಕ ಆಶಿಶ್ ಮಿಶ್ರಾ ಟೆನಿಗೆ ಅಲಹಾಬಾದ್ ಹೈಕೋರ್ಟ್ ಜಾಮೀನು ನೀಡಿರುವ ಬಗ್ಗೆ ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ತೀವ್ರ ಆಘಾತವನ್ನು ವ್ಯಕ್ತಪಡಿಸಿದೆ. ಆತ ಮತ್ತು ಆತನ ಬಿಜೆಪಿ ಗೂಂಡಾಗಳು ತಮ್ಮ ಕಾರಿನಡಿಯಲ್ಲಿ ಐದು ಜನರನ್ನು ಜಜ್ಜಿಹಾಕಿ ಕಗ್ಗೊಲೆ ನಡೆಸಿದ್ದರು. ಆಶಿಶ್ ಮಿಶ್ರಾ ಮತ್ತು ಇತರರ ವಿರುದ್ಧ ಐಪಿಸಿಯ ಸೆಕ್ಷನ್ 302 (ಕೊಲೆ), ಸೆಕ್ಷನ್ 307 (ಕೊಲೆ ಯತ್ನ) ಮತ್ತು ಇತರ ಅತ್ಯಂತ ಗಂಭೀರವಾದ ಸೆಕ್ಷನ್‌ಗಳ ಅಡಿಯಲ್ಲಿ ಆರೋಪ ಹೊರಿಸಲಾಗಿದೆ.

ಈ ಅತ್ಯಂತ ದುರದೃಷ್ಟಕರ ಹೈಕೋರ್ಟಿನ ತೀರ್ಪು ನ್ಯಾಯದ ಘೋರ ಗರ್ಭಪಾತ ಮಾತ್ರವಲ್ಲ, ಪ್ರತಿ ಮಾನ್ಯತೆ ಪಡೆದ ನ್ಯಾಯದ ನಿಯಮಗಳಿಗೆ ವಿರುದ್ಧವಾಗಿದೆ.

ಈ ಘೋರ ಅಪರಾಧದ ತನಿಖೆ ನಡೆಸಿದ ಸುಪ್ರೀಂ ಕೋರ್ಟ್ ನೇಮಿಸಿದ ಎಸ್‌ಐಟಿ ಇದು ಅಪಘಾತವಲ್ಲ, ಆದರೆ ಸ್ಪಷ್ಟವಾದ ಪಿತೂರಿ ಎಂದು ತೀರ್ಮಾನಿಸಿತು. ಎಸ್‌ಐಟಿಯ ಈ ತೀರ್ಮಾನದ ನಡುವೆಯೂ ಇಂದು ಬಂದಿರುವ ತೀರ್ಪು ಜನರಲ್ಲಿ ತೀವ್ರ ಬೇಸರ ಮೂಡಿಸಿದೆ.

ಲಖಿಂಪುರ ಖೇರಿ ಹತ್ಯಾಕಾಂಡದ ನಂತರ, ಎಸ್‌ಕೆಎಂ ಮತ್ತು ಎಐಕೆಎಸ್ ತಕ್ಷಣವೇ ಈ ಹತ್ಯಾಕಾಂಡದ ಕ್ರಿಮಿನಲ್ ಮಾಸ್ಟರ್‌ಮೈಂಡ್ ಮತ್ತು ಕೇಂದ್ರ ಗೃಹ ವ್ಯವಹಾರಗಳ ರಾಜ್ಯ ಸಚಿವ ಅಜಯ್ ಮಿಶ್ರಾ ಟೆನಿಯನ್ನು ಸಂಪುಟದಿಂದ ವಜಾಗೊಳಿಸುವಂತೆ ಮತ್ತು ಕೊಲೆ ಮತ್ತು ಪಿತೂರಿಯ ಆರೋಪದಡಿಯಲ್ಲಿ ಇತರ ಎಲ್ಲ ಕ್ರಿಮಿನಲ್‌ಗಳನ್ನು ಬಂಧಿಸುವಂತೆ ಕರೆ ನೀಡಿದ್ದವು.

ಈ ಭೀಕರ ಹತ್ಯಾಕಾಂಡ ನಡೆದು ನಾಲ್ಕು ತಿಂಗಳು ಕಳೆದರೂ, ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರು ಎಲ್ಲಾ ರಾಜಕೀಯ ನೈತಿಕತೆಯನ್ನು ಗಾಳಿಗೆ ತೂರಿದ್ದಾರೆ ಮತ್ತು ನಾಚಿಕೆಯಿಲ್ಲದೆ ಕೊಲೆಗಾರ ಮತ್ತು ಸಂಚುಕೋರ ಅಜಯ್ ಮಿಶ್ರಾ ತೇನಿಯನ್ನು ಕೇಂದ್ರ ಸಚಿವರನ್ನಾಗಿ ಉಳಿಸಿಕೊಂಡಿದ್ದಾರೆ. ಅದರ ಮೇಲೆ ಇಂದು ಆಶಿಶ್ ಮಿಶ್ರಾ ಟೆನಿಗೆ ಜಾಮೀನು ನೀಡುವ ತೀರ್ಪು ಬಂದಿದೆ.

ಉತ್ತರ ಪ್ರದೇಶ, ಉತ್ತರಾಖಂಡ, ಪಂಜಾಬ್, ಗೋವಾ ಮತ್ತು ಮಣಿಪುರದ ರೈತರು ಮತ್ತು ಜನರು ಮುಂಬರುವ ವಿಧಾನಸಭಾ ಚುನಾವಣೆಗಳಲ್ಲಿ ಜನವಿರೋಧಿ, ಕಾರ್ಪೊರೇಟ್ ಪರ, ಕೋಮುವಾದಿ, ಸರ್ವಾಧಿಕಾರಶಾಹಿ ಮತ್ತು ಅನೈತಿಕ ಬಿಜೆಪಿಯನ್ನು ದೊಡ್ಡ ಪ್ರಮಾಣದಲ್ಲಿ ಸೋಲಿಸುವ ತಮ್ಮ ಸಂಕಲ್ಪವನ್ನು ದ್ವಿಗುಣಗೊಳಿಸಬೇಕು ಮತ್ತು ತಮ್ಮ ಪ್ರಯತ್ನಗಳನ್ನು ಅಗಾಧವಾಗಿ ಹೆಚ್ಚಿಸಬೇಕು ಎಂದು ಎಐಕೆಎಸ್ ಕರೆ ನೀಡಿದೆ.

2022ರ ವಿಧಾನಸಭಾ ಚುನಾವಣೆಗಳಲ್ಲಿ ಸಿಪಿಐ(ಎಂ) ಅಭ್ಯರ್ಥಿಗಳು



ಉತ್ತರಾಖಂಡದ ಚಮೋಲಿ ಜಿಲ್ಲೆಯ ಥರಾಲಿಯಲ್ಲಿ ಸಿಪಿಐ(ಎಂ) ಚುನಾವಣಾ ಪ್ರಚಾರ

ಐದು ರಾಜ್ಯಗಳಲ್ಲಿ ಫೆಬ್ರುವರಿ–ಮಾರ್ಚ್ 2022ರಲ್ಲಿ ನಡೆಯಲಿರುವ ಚುನಾವಣೆಗಳಲ್ಲಿ ಸಿಪಿಐ(ಎಂ)ನಿಂದ ಪಂಜಾಬಿನಲ್ಲಿ 14 ಅಭ್ಯರ್ಥಿಗಳು, ಹಾಗೂ ಉತ್ತರಪ್ರದೇಶ ಮತ್ತು ಉತ್ತರಾಖಂಡದಿಂದ ತಲಾ 4 ಅಭ್ಯರ್ಥಿಗಳು ಸ್ಪರ್ಧಿಸುತ್ತಿದ್ದಾರೆ. ವಿವರಗಳು ಹೀಗಿವೆ:

ಪಂಜಾಬ್

1.	ಮೇಲಾ ಸಿಂಗ್	ಫಿಲ್ಲೌರ್ (ಮೀ.)
2.	ಗುರ್ಮೇಲ್ ಸಿಂಗ್ ನಹಾಲ್	ನಾಕೋದರ್
3.	ಜಸ್ಕರನ್ ಸಿಂಗ್	ಶಾಹಕೋಟ್
4.	ಬಲ್ಬೀರ್ ಸಿಂಗ್	ಗಿಲ್ (ಮೀ.)
5.	ದೇವಿಂದರ್ ಸಿಂಗ್ ಕೋಟ್ಲಿ	ಮಾಲೌಟ್
6.	ಮಾಸ್ಟರ್ ಪ್ರೇಮ್ ಚಂದ್	ಬಾಲಾಚೌರ್
7.	ಬಲ್ಬೀರ್ ಸಿಂಗ್	ಭದೌರ್ (ಮೀ.)
8.	ಅಬ್ದುಲ್ ಸತ್ತಾರ್	ಮಲೇರಕೋಟ್ಲ
9.	ಕುಲ್ವಿಂದರ್ ಸಿಂಗ್ ಉದ್ದತ್	ಶರ್ದುಲ್‌ಗರ್
10.	ಭೂಪಿಂದರ್ಜಿತ್ ಸಿಂಗ್ ಭಿನಾ	ರಾಜಸಾನ್ಸಿ
11.	ಸುರ್ಜಿತ್ ಸಿಂಗ್ ಗಗ್ರಾ	ಧರಂಕೋಟ್
12.	ಮೊಹಿಂದರ್ ಕುಮಾರ್	ಗರ್ಶಂಕರ್
13.	ಗುರುದೇವ್ ಸಿಂಗ್ ಬಗ್ಗಿ	ಆನಂದಪುರಸಾಹಿಬ್
14.	ಕುಲ್ಬೀರ್ ಸಿಂಗ್	ಅಮೃತಸರ (ಕೇಂದ್ರ)

ಉತ್ತರ ಪ್ರದೇಶ

1.	ಕುನ್ವರ್ ರಾಮ್	ಥರಾಲಿ–ಚಮೋಲಿ ಜಿ.
2.	ಆರ್ ಸಿ ಧಿಮಾನ್	ಬಿಹೆಚ್‌ಇಎಲ್ ರಾಣಿಪುರ, ಹರಿದ್ವಾರ
3.	ಕಮ್ರುದ್ದೀನ್ ಸೆಹೆಸ್ಪುರ್	ಡೆಹ್ರಾಡೂನ್
4.	ರಾಜಾ ರಾಮ್ ಸೆಂವಾಲ್	ಕೇದಾರನಾಥ ರುದ್ರಪ್ರಯಾಗ ಜಿ.

ಉತ್ತರಾಖಂಡ

1.	ಸತೀಶ್ ಕುಮಾರ್	ಸೇಲಂಪುರ್(ಮೀ.) ದೇವರಿಯಾ ಜಿಲ್ಲೆ
2.	ಜೈನಾಥ್	ಚಾಕಿಯಾ(ಮೀ.) ಚಂದೌಲಿ ಜಿಲ್ಲೆ
3.	ಚಿರಂಜೀ ಲಾಲ್ ಕೋಲ್ ಕೊರಾನ್(ಮೀ.)	ಪ್ರಯಾಗ್‌ರಾಜ್ ಜಿಲ್ಲೆ
4.	ಸುರೇಶ್ ಮದಿಹನ್	ಮಿರ್ಜಾಪುರ ಜಿಲ್ಲೆ

ಬಜೆಟ್ ಮೌನಗಳು ದೇಶಕ್ಕೆ ಅನಿಷ್ಟಕರ........

ಪುಟ 13 ರಿಂದ

ಹೆಚ್ಚಾಗಿದೆ, ಅಂದರೆ, ಪ್ರಸ್ತುತ ಸಂಭವಿಸುವ ಹೂಡಿಕೆ–ಚಾಲಿತ ಚೇತರಿಕೆಯನ್ನೂ ಸಹ ಉಳಿಸಿಕೊಳ್ಳಲು ಸಾಧ್ಯವಿಲ್ಲ. ಆರ್ಥಿಕ ಹಿಂಜರಿತ ಮತ್ತು ನಿರುದ್ಯೋಗ ಪರಿಸ್ಥಿತಿ ಇನ್ನಷ್ಟು ಹದಗೆಡುತ್ತದೆ.

ಅದೇ ರೀತಿಯಲ್ಲಿ ಹಣದುಬ್ಬರ ಸಮಸ್ಯೆಯನ್ನೂ ನಿಭಾಯಿಸಲಾಗದು. ಹಣದುಬ್ಬರವನ್ನು ನಿಭಾಯಿಸುವ ಪ್ರಯತ್ನದಲ್ಲಿ ಆರ್ಥಿಕ ಹಿಂಜರಿತ ಮತ್ತು ನಿರುದ್ಯೋಗ ಇವು ಮತ್ತಷ್ಟು ಹದಗೆಡುತ್ತವೆ. ಏಕೆಂದರೆ, ಬಾಹ್ಯ ಬೆಳವಣಿಗೆಗಳಿಗೂ ಮತ್ತು ನಮ್ಮ ಅರ್ಥವ್ಯವಸ್ಥೆಗೂ ಪರಸ್ಪರ ಸಂಬಂಧವಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ತೈಲ ಬೆಲೆಗಳು ಏರುತ್ತಿವೆ. ಅಮೆರಿಕಾದಲ್ಲಿ ಉಲ್ಬಣಗೊಳ್ಳುತ್ತಿರುವ ಹಣದುಬ್ಬರವು ಅಲ್ಲಿ ಬಡ್ಡಿದರಗಳ ಏರಿಕೆಗೆ ಕಾರಣವಾಗುತ್ತಿದೆ. ಅನೇಕ ವರ್ಷಗಳ ಕಾಲದಿಂದಲೂ ಶೂನ್ಯ ಮಟ್ಟದಲ್ಲೇ ಇದ್ದ ಬಡ್ಡಿ ದರಗಳು ಮೇಲೇರುತ್ತವೆ. ಅವು ಶೂನ್ಯ ಮಟ್ಟದಲ್ಲಿದ್ದಾಗ ಭಾರತದಂತಹ ದೇಶಗಳು ತಮ್ಮ ಪಾವತಿ ಶೇಷ (ವಿದೇಶ ವ್ಯಾಪಾರದ ಬಾಕಿ ಚುಕ್ತಾ) ಸಮಸ್ಯೆಯನ್ನು ಸರಿದೂಗಿಸಲು ಜಾಗತಿಕ ಹಣಕಾಸು ಹರಿವನ್ನು ಸುಲಭವಾಗಿ ಪಡೆಯುತ್ತಿದ್ದವು. ಆದರೆ, ಈಗ ಅಮೆರಿಕ ಮತ್ತು ಇತರೆಡೆಗಳಲ್ಲಿ ಬಡ್ಡಿ ದರಗಳು ಏರುತ್ತಿದ್ದಂತೆಯೇ ಪಾವತಿ ಶೇಷ ಸಮತೋಲನವನ್ನು ನಿರ್ವಹಿಸುವುದು ಕಷ್ಟಕರವಾಗುತ್ತದೆ. ಡಾಲರ್ ಬೆಲೆ ಏರುತ್ತದೆ. ಪರಿಣಾಮವಾಗಿ, ರೂಪಾಯಿಯ ಬಾಹ್ಯ ಮೌಲ್ಯವು ಕುಸಿಯುತ್ತದೆ. ತೈಲವನ್ನು ಡಾಲರ್ ಕರೆನ್ಸಿಯಲ್ಲೇ ಕೊಳ್ಳಬೇಕು. ಆದ್ದರಿಂದ, ತೈಲದ ಆಮದು ಬೆಲೆಗಳು ರೂಪಾಯಿ ಲೆಕ್ಕದಲ್ಲಿ ಹೆಚ್ಚಾಗುತ್ತವೆ. ಈ ಏರಿಕೆಯನ್ನು ಗ್ರಾಹಕರಿಗೆ ವರ್ಗಾಯಿಸಲಾಗುತ್ತದೆ. (ಈ ರೀತಿ ವರ್ಗಾಯಿಸುವುದೇ ಸರ್ಕಾರದ ಕಾರ್ಯತಂತ್ರ). ಹಾಗಾಗಿ, ಹಣದುಬ್ಬರ ಮತ್ತಷ್ಟು ಉಲ್ಬಣಗೊಳ್ಳುತ್ತದೆ.

ಜನರು ಈ ರೀತಿಯಲ್ಲಿ ಹೆಚ್ಚು ಹೆಚ್ಚು ಸಂಕಷ್ಟಗಳನ್ನು ಅನುಭವಿಸುವಂತಾಗಿದೆ. ಆದರೆ, ಭಾವ ಶೂನ್ಯ ಮೋದಿ ಸರ್ಕಾರವು ಜನರ ಸಮಸ್ಯೆಗಳನ್ನು ಗುರುತಿಸಿ ಅವುಗಳನ್ನು ಪರಿಹರಿಸುವ ಗೋಜಿಗೆ ಹೋಗುವುದೇ ಇಲ್ಲ. ಸರ್ಕಾರದ ಈ ವರ್ತನೆಯೇ ಅನಿಷ್ಟಕರವಾಗಿದೆ. ಏಕೆಂದರೆ, ಏಕೆಂದರೆ ಪಾವತಿ ಶೇಷ ಸಮಸ್ಯೆಯನ್ನು ನಿರ್ವಹಿಸಲು ಸಾಧ್ಯವಾಗದಿದ್ದಾಗ ಮೋದಿ ಸರ್ಕಾರವು ಒಂದು ರಕ್ಷಣಾ ಪ್ಯಾಕೇಜ್ ಒದಗಿಸುವಂತೆ ಕೋರಲು ಐಎಂಎಫ್‌ಗೆ ಓಡುತ್ತದೆ. ತನ್ನ ಪ್ಯಾಕೇಜನ್ನು ಒಪ್ಪಿಕೊಂಡಾಗ, ಐಎಂಎಫ್ ದೇಶದ ಮೇಲೆ "ಮಿತವ್ಯಯ" ನೀತಿಗಳನ್ನು ಹೇರುತ್ತದೆ ಮತ್ತು ಭಾರತದ ಸ್ಥಾನಮಾನವನ್ನು ಮೂರನೇ ಜಗತ್ತಿನ ಸಾಲಗಾರರ ಮಟ್ಟಕ್ಕೆ ಇಳಿಸುತ್ತದೆ. ದೇಶದ ನೀತಿ ನಿರೂಪಣಾ ಸ್ವಾಯತ್ತತೆಯನ್ನು ಜಾಗತೀಕರಣಗೊಂಡ ಹಣಕಾಸು ಬಂಡವಾಳವು ಈಗಾಗಲೇ ಕಸಿದುಕೊಂಡಿದ್ದರೂ ಸಹ, ಅದರ "ವಿಶ್ವಾಸವನ್ನು" ಉಳಿಸಿಕೊಳ್ಳುವ ಭರದಲ್ಲಿ, ಐಎಂಎಫ್‌ನ ಕಪಿ ಮುಷ್ಟಿಯಲ್ಲಿ ಸಿಕ್ಕಿಹಾಕಿಕೊಂಡು ಅಳಿದುಳಿದ ಸ್ವಾಯತ್ತತೆಯನ್ನೂ ಸಂಪೂರ್ಣವಾಗಿ ಕಳೆದುಕೊಳ್ಳಬೇಕಾಗುತ್ತದೆ. ಸ್ವಾಯತ್ತತೆಯನ್ನು ಕಳೆದುಕೊಳ್ಳುವುದರಿಂದ ಏನಾಗುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಗ್ರೀಸ್ ದೇಶವು ಒಂದು ಅತ್ಯುತ್ತಮ ಉದಾಹರಣೆಯಾಗುತ್ತದೆ. ಐಎಂಎಫ್ ಪ್ಯಾಕೇಜನ್ನು ಒಪ್ಪಿಕೊಂಡದ್ದರಿಂದಾಗಿ ಗ್ರೀಸ್ ದೇಶವು ಅನುಭವಿಸಿದ ದುಃಸ್ಥಿತಿಯನ್ನು ಭಾರತವು ಇಲ್ಲಿಯವರೆಗೆ ತಪ್ಪಿಸಿಕೊಂಡಿತ್ತು. ಆದರೆ, ಅರ್ಥಶಾಸ್ತ್ರದ ವಿಕೃತ ತಿಳುವಳಿಕೆ ಹೊಂದಿರುವ ಸರ್ಕಾರವು ನಮ್ಮನ್ನು ಈ ದಿಕ್ಕಿನಲ್ಲಿ ತಳ್ಳುತ್ತದೆ. ಹಾಗಾಗಿ, ಪ್ರಮುಖ ಸಮಸ್ಯೆಗಳ ಬಗ್ಗೆ ಬಜೆಟ್ ಮೌನಗಳು ಜನರಿಗೆ ದುರದೃಷ್ಟಕರ ಮಾತ್ರವಲ್ಲ; ಅವು ದೇಶಕ್ಕೆ ಅನಿಷ್ಟಕರವೂ ಹೌದು.

ರಾಷ್ಟ್ರೀಯ ಮಹಿಳಾ ಆಯೋಗ ಮಹಿಳೆಯರ ಪ್ರಶ್ನೆಗಳಿಗೆ, ಆತಂಕಗಳಿಗೆ ದನಿ ನೀಡಬೇಕು–ಮಹಿಳಾ ಸಂಘಟನೆಗಳ ಜಂಟಿ ಮನವಿ

ಪುಟ 2 ರಿಂದ

ಕಳಿಸಿರುವ 'ಚರ್ಚೆಯ ಅಂಶ'ಗಳಿಗೆ ಈ ಮೂರು ಸಂಘಟನೆಗಳ ಉತ್ತರಗಳನ್ನು ತಿಳಿಸಿದೆ.

ಅವುಗಳ ಮುಖ್ಯಾಂಶಗಳು ಹೀಗಿವೆ:

* ಕೌಟುಂಬಿಕ ಹಿಂಸಾಚಾರ ಕುರಿತ ಸೆಕ್ಷನ್498–ಎ ಯನ್ನು ಅದರ ವ್ಯಾಪ್ತಿ, ಶಿಕ್ಷೆ, ಜಾಮೀನು ಇತ್ಯಾದಿಗಳಿಗೆ ಸಂಬಂಧಪಟ್ಟಂತೆ ತಿದ್ದುಪಡಿ ಮಾಡಬೇಕಾಗಿದೆ ಎಂದು ಆಯೋಗ ಸೂಚಿಸುತ್ತದೆ. ಆದರೆ ಇಂತಹ ಯಾವುದೇ ತಿದ್ದುಪಡಿ ಈ ಸೆಕ್ಷನನ್ನು ದುರ್ಬಲಗೊಳಿಸುತ್ತವೆ, ಆದ್ದರಿಂದ ಇದನ್ನು ಒಪ್ಪಲು ಸಾಧ್ಯವಿಲ್ಲ ಎಂದಿರುವ ಮನವಿ ಇದಕ್ಕೆ ಕಾರಣಗಳನ್ನೂ ವಿವರಿಸಿದೆ.
* ಐಪಿಸಿ ಸೆಕ್ಷನ್ 375ರಲ್ಲಿ 'ಸಮ್ಮತಿ'ಯ ವ್ಯಾಖ್ಯೆಯನ್ನು ಬಹಳ ವಿಚಾರ–ವಿಮರ್ಶೆ ಮತ್ತು ಮಹಿಳಾ ಹಕ್ಕುಗಳ ಹೋರಾಟ–ಪ್ರಚಾರಗಳ ನಂತರ ತರಲಾಗಿದೆ. ಇದನ್ನು ಬದಲಿಸಬಾರದು. ವಿವಾಹದೊಳಗಿನ ಅತ್ಯಾಚಾರವನ್ನು ಸೆಕ್ಷನ್ 375ರಿಂದ ಹೊರಗಿಡಬೇಕು ಮತ್ತು ಇಲ್ಲಿ ಲಿಂಗ ತಟಸ್ಥ ಪದಗಳ ಬಳಕೆಯ ಅಗತ್ಯವಿಲ್ಲ. **ನಿರ್ಭಯಾ ಪ್ರಕರಣದ ನಂತರ ರಾಷ್ಟ್ರೀಯ ಒಮ್ಮತದಿಂದ ತಂದಿರುವ ತಿದ್ದುಪಡಿಗಳಲ್ಲಿ ಆಯೋಗ ಕೈಯಾಡಿಸಬಾರದು, ಅದು ಮಹಿಳೆಯರ ರಕ್ಷಣೆಯ ಬದಲು ಪುರುಷರ ರಕ್ಷಣೆಯ ಹೆಸರಲ್ಲಿ ಕಾನೂನನ್ನು ದುರ್ಬಲಗೊಳಿಸುವುದನ್ನು ಬೆಂಬಲಿಸಬಾರದು.**
* ಸೆಕ್ಷನ್ 494ರಲ್ಲಿ ದ್ವಿಪತ್ನಿತ್ವ/ದ್ವಿಪತಿತ್ವದ ಅಪರಾಧವನ್ನು ಜತೆಗೆ ಜೀವಿಸುವ(ಲಿವ್–ಇನ್) ಸಂಬಂಧಗಳಿಗೆ ವಿಸ್ತರಿಸುವುದು ತಪ್ಪು ಇದು ಮಹಿಳೆಯರಿಗೆ ಕಿರುಕುಳಕ್ಕೆ ದಾರಿ ಮಾಡಿಕೊಡುತ್ತದೆ ಎಂದಿರುವ ಜಂಟಿ ಮನವಿ ವಾಸ್ತವವಾಗಿ ದೇಶ ಈಗ ಇಂತಹ ಸಂಬಂಧಗಳಲ್ಲಿ **ಮಹಿಳೆಯರ ಹಕ್ಕುಗಳನ್ನು ಖಾತ್ರಿಪಡಿಸಲು ಅದನ್ನು ಮಾನ್ಯ ಮಾಡುವ ದಿಕ್ಕಿನಲ್ಲಿ ಸಾಗುತ್ತಿರುವಾಗ ಇಂತಹ ಕ್ರಮ ಪ್ರತಿಗಾಮಿಯಾಗುತ್ತದೆ** ಎಂದು ಮಹಿಳಾ ಸಂಘಟನೆಗಳು ಅಭಿಪ್ರಾಯ ಪಟ್ಟಿವೆ.
* ದಂಡ ಸಂಹಿತೆಯ (ಐಪಿಸಿ) ಸೆಕ್ಷನ್ 125ರ ಉಪಸೆಕ್ಷನ್ 4 ಮತ್ತು 5ನ್ನು ತೆಗೆದು ಹಾಕಬೇಕು, ಏಕೆಂದರೆ ವಿಚ್ಛೇದನದ ನಂತರ ಜೀವನಾಂಶ ಮಹಿಳೆ ಕುಟುಂಬದಲ್ಲಿ ವಹಿಸುವ ಪಾತ್ರದಿಂದಾಗಿ ಒಂದು ಹಕ್ಕಾಗಿ ಆಕೆಗೆ ಲಭ್ಯವಾಗುತ್ತದೆ. ಸುಪ್ರಿಂ ಕೋರ್ಟ್ ಈಗಾಗಲೇ ಜೀವನಾಂಶದ ಮಾನದಂಡಗಳನ್ನು ವಿಧಿಸಿದೆ. ಕೆಳಗಿನ ಕೋರ್ಟ್‌ಗಳು ಅವನ್ನು ಜಾರಿಗೊಳಿಸಬೇಕು ಎಂದು ಮನವಿ ಹೇಳಿದೆ.
* ಹಿಂಬಾಲಿಸುವ ಅಪರಾಧವನ್ನು ಕುರಿತ ಸೆಕ್ಷನ್ 354–ಡಿಯನ್ನು ಲಿಂಗ–ತಟಸ್ಥಗೊಳಿಸಲಿಕ್ಕಾಗಿ ತಿದ್ದುಪಡಿ ಮಾಡಬೇಕೆಂಬುದು ಸರಿಯಲ್ಲ. ಇದು ಮಹಿಳೆಯರ ವಿರುದ್ಧ ಹೋಗುತ್ತದೆ, ಪುರುಷರು ಇದನ್ನು ಮಹಿಳೆಯರ ಮೇಲೆ ಸುಳ್ಳು ಕೇಸು ಹಾಕಲು ಬಳಸುತ್ತಾರೆ.
* ಸ್ತ್ರೀದ್ವೇಷಿ ಟಿಪ್ಪಣಿಗಳನ್ನು ಕೇವಲ 'ಮನನೋಯಿಸುವ' ಟಿಪ್ಪಣಿ ಎಂದು ಪರಿಗಣಿಸದೆ ದ್ವೇಷಭಾಷಣ ಎಂದೇ ಪರಿಗಣಿಸಿ ಶಿಕ್ಷಿಸಬೇಕು.
* ರಾಜದ್ರೋಹ ಕುರಿತಾದ ಸೆಕ್ಷನ್ 124–ಎ ನಲ್ಲಿ "ಉತ್ತಮ ವರ್ತನೆ' ಕುರಿತಾದ ಒಂದು ಅಂಶವನ್ನು ಸೇರಿಸಬೇಕು ಎಂಬ ಮಹಿಳಾ ಆಯೋಗದ ಸೂಚನೆಯನ್ನೂ ಒಪ್ಪಲಾಗದು. ಏಕೆಂದರೆ ಈ ರಾಜದ್ರೋಹದ ಅಂಶವನ್ನು ಭಿನ್ನ ಮತಗಳನ್ನು ಅಥವ ಟೀಕೆಗಳನ್ನು ದಮನ ಮಾಡಲು ಬಳಸಲಾಗುತ್ತಿದೆ, ಇದನ್ನು ತೆಗೆದೇ ಹಾಕಬೇಕು ಎಂಬುದು ತಮ್ಮ ಅಭಿಪ್ರಾಯ ಎಂದು ಮಹಿಳಾ ಸಂಘಟನೆಗಳು ಹೇಳಿವೆ.

ಈ ಜಂಟಿ ಮನವಿಗೆ (ಎಐಡಿಡಬ್ಲ್ಯುಎ) ಅಧ್ಯಕ್ಷರಾದ ಮಾಲಿನಿ ಭಟ್ಟಾಚಾರ್ಯ, ಪ್ರಧಾನ ಕಾರ್ಯದರ್ಶಿ ಮರಿಯಮ್ ಧವಳೆ, ಎನ್‌ಎಫ್‌ಐಡಬ್ಲು ಅಧ್ಯಕ್ಷರಾದ ಅರುಣಾ ರಾಯ್, ಪ್ರಧಾನ ಕಾರ್ಯದರ್ಶಿ ಆನಿ ರಾಜ ಮತ್ತು ಎಐಪಿಡಬ್ಲ್ಯುಎ ಪ್ರಧಾನ ಕಾರ್ಯದರ್ಶಿ ಕವಿತಾ ಕೃಷ್ಣನ್ ಸಹಿ ಹಾಕಿದ್ದಾರೆ.

ಅಂತರ್ರಾಷ್ಟ್ರೀಯ ಬೆಳವಣಿಗೆಗಳು 2018–21

ಕಳೆದ 4 ವರ್ಷಗಳ ಅಂತರ್ರಾಷ್ಟ್ರೀಯ ಬೆಳವಣಿಗೆಗಳನ್ನು ಸಿಪಿಐ(ಎಂ) ಕೇಂದ್ರ ಸಮಿತಿ ವಿಶ್ಲೇಷಿಸಿ ಅಂತರ್ರಾಷ್ಟ್ರೀಯ ಪರಿಸ್ಥಿತಿಯ ಒಟ್ಟು ಅರ್ಥೈಸುವಿಕೆಯನ್ನು ರೂಪಿಸಿದೆ. ಇದನ್ನು 23 ನೆಯ ಮಹಾಧಿವೇಶನಕ್ಕೆ ತಯಾರಿಸಲಾದ ಕರಡು ರಾಜಕೀಯ ನಿರ್ಣಯದಲ್ಲಿ ನಿರೂಪಿಸಲಾಗಿದೆ. ಈ ನಿರ್ಣಯದ ಕೆಲವು ಆಯ್ದ ಭಾಗಗಳನ್ನು ಈ ಕೆಳಗೆ ಕೊಡಲಾಗಿದೆ. ಇವು ಕಳೆದ 4 ವರ್ಷಗಳ ಪಕ್ಷಿನೋಟ ನೀಡುತ್ತವೆ.

ಪ್ರಮುಖವಾದ ವಿಶ್ವ ಸಾಮಾಜಿಕ ವೈರುಧ್ಯಗಳು

1.31 ಬೆಳೆಯುತ್ತಿರುವ ಚೀನಾ–ಯುಎಸ್ ಸಂಘರ್ಷ ಹಾಗೂ ಕ್ಯೂಬಾ ಮತ್ತು ಉತ್ತರ ಕೊರಿಯಾ (ಡಿ.ಪಿ.ಆರ್.ಕೆ)ಗಳತ್ತ ಮುಂದುವರಿದಿರುವ ಯು.ಎಸ್. ಸಾಮ್ರಾಜ್ಯಶಾಹಿಯ ಆಕ್ರಮಣಕಾರಿ ನಿಲುವುಗಳು, ಸಾಮ್ರಾಜ್ಯಶಾಹಿ ಮತ್ತು ಸಮಾಜವಾದದ ನಡುವಿನ ಕೇಂದ್ರ ವೈರುಧ್ಯಗಳು ಹರಿತಗೊಳ್ಳುತ್ತಿರುವುದರ ಮೇಲೆ ಪರಿಣಾಮ ಬೀರುತ್ತಿವೆ.

1.32 ಸಾಮ್ರಾಜ್ಯಶಾಹಿಗಳ ನಡುವಿನ ವೈರುಧ್ಯಗಳ ವಲಯದಲ್ಲಿ, ಪ್ರಮುಖವಾಗಿ ಟ್ರಂಪ್ ನ ನೀತಿಗಳಿಂದಾಗಿ ಸಾಮ್ರಾಜ್ಯಶಾಹಿ ಮೈತ್ರಿಯ ಒಗ್ಗಟ್ಟಿನ ಮೇಲೆ, ಹೆಚ್ಚು ವ್ಯತಿರಿಕ್ತ ಪರಿಣಾಮ ಬೀರಿತ್ತು ಎಂದು ನಮ್ಮ 22ನೇ ಮಹಾಧಿವೇಶನದಲ್ಲಿ ನಾವು ಗಮನಿಸಿದ್ದೆವು. ರಷ್ಯಾ ಮತ್ತು ಚೀನಾ ವಿರುದ್ಧ ಎಲ್ಲ ಯುರೋಪಿಯನ್ ಒಕ್ಕೂಟ ಮತ್ತು ನ್ಯಾಟೋ ಮಿತ್ರರಾಷ್ಟ್ರಗಳನ್ನು ಒಟ್ಟುಗೂಡಿಸಲು ಬಿಡೆನ್ ಆಡಳಿತ ಪ್ರಯತ್ನಿಸುತ್ತಿದ್ದರೂ ಸಹಾ, ವ್ಯತ್ಯಾಸಗಳು ಹಾಗೆಯೇ ಉಳಿದಿವೆ.

1.33 ಸಾಮ್ರಾಜ್ಯಶಾಹಿ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳ ನಡುವಿನ ವೈರುಧ್ಯಗಳು ಸಹ, ಲ್ಯಾಟಿನ್ ಅಮೇರಿಕಾ, ಪಶ್ಚಿಮ ಏಷ್ಯಾ ಮತ್ತು ಆಫ್ರಿಕಾಗಳಲ್ಲಿ ಯು.ಎಸ್ ಸಾಮ್ರಾಜ್ಯಶಾಹಿಯ ಆಕ್ರಮಣಶೀಲ ಮಧ್ಯಪ್ರವೇಶದ ಮೂಲಕ ಬೆಳೆಯುತ್ತಿವೆ. ಅಭಿವೃದ್ಧಿಶೀಲ ದೇಶಗಳ ಸಾಲದ ಹೊರೆಯು ತಾಳಲಾರದ ಮಟ್ಟ ಮುಟ್ಟಿದೆ. ಶ್ರೀಮಂತ ರಾಷ್ಟ್ರಗಳು ಜಾಗತಿಕ ತಾಪಮಾನ ಏರಿಕೆಯ ಚಾರಿತ್ರಿಕ ಜವಾಬ್ದಾರಿಯನ್ನು ಹೊರಲು ನಿರಾಕರಿಸುತ್ತಿವೆ ಮತ್ತು ಹವಾಮಾನ ಹೊಂದಾಣಿಕೆ ಕ್ರಮಗಳಿಗೆ ಹಣಕಾಸು ನೀಡಲು ನಿರಾಕರಿಸುತ್ತಿವೆ.

1.34 ಕಾರ್ಮಿಕರ ಹಕ್ಕುಗಳ ಮೇಲೆ ಹೆಚ್ಚಿದ ಆಕ್ರಮಣಗಳು, ಕಾರ್ಮಿಕ ವರ್ಗ ಮತ್ತು ದುಡಿಯುವ ಜನರ ಮೇಲೆ ಕಠಿಣ ಮಿತವ್ಯಯ ಕ್ರಮಗಳು, ಉದ್ಯೋಗ ನಷ್ಟಗಳು ಮತ್ತು ಕಾರ್ಮಿಕರ ಬದಲಿಗೆ ಹೊಸ ತಂತ್ರಜ್ಞಾನಗಳ ಅಳವಡಿಸುವಿಕೆಗಳೊಂದಿಗೆ ತೀವ್ರಗೊಂಡ ಶೋಷಣೆಯ ಜತೆಗೆ, ಬಂಡವಾಳಶಾಹಿಯ 'ಕಾರ್ಮಿಕ ಮತ್ತು ಬಂಡವಾಳ'ಗಳ ನಡುವಿನ ಮೂಲಭೂತ ವೈರುಧ್ಯವು ತೀವ್ರಗೊಳ್ಳುತ್ತಿದೆ. ಈ ಆಕ್ರಮಣಗಳ ವಿರುದ್ದ ಕಾರ್ಮಿಕ ವರ್ಗದಿಂದ ಪ್ರತಿರೋಧವೂ ಬೆಳೆದಿದೆ.

ಯು.ಎಸ್. ಸಾಮ್ರಾಜ್ಯಶಾಹಿಯ ಆಕ್ರಮಣಶೀಲತೆ

1.35 ಪ್ರಪಂಚದ ವಿವಿಧ ಭಾಗಗಳಲ್ಲಿ, ಸಾಮ್ರಾಜ್ಯಶಾಹಿಯು ತನ್ನ ಜಾಗತಿಕ ಪ್ರಾಬಲ್ಯವನ್ನು ಕಾಪಾಡಿಕೊಳ್ಳಲು ಆಕ್ರಮಣಕಾರಿಯಾಗಿ ಮಧ್ಯಪ್ರವೇಶಿಸುತ್ತಿದೆ. 2020 ರಲ್ಲಿ, ಯುಎಸ್ ಮಿಲಿಟರಿ ವೆಚ್ಚವು ಅಂದಾಜು 778 ಶತಕೋಟಿ ಡಾಲರ್ ತಲುಪಿತು. ಇದು 2019 ಕ್ಕಿಂತ 4.4 ಶೇಕಡಾ ಹೆಚ್ಚಳವಾಗಿದೆ; ಇದು ಯುಎಸ್ ಮಿಲಿಟರಿ ವೆಚ್ಚದ ಹೆಚ್ಚಳದ ಸತತ ಮೂರನೇ ವರ್ಷವಾಗಿದೆ. ಆದಾಗ್ಯೂ, ಪ್ರಪಂಚದ ಅನೇಕ ಭಾಗಗಳಲ್ಲಿ, ಸಾಮ್ರಾಜ್ಯಶಾಹಿ ಬೆಂಬಲಿತ ಸರಕಾರಗಳ ವಿರುದ್ಧ ಪ್ರತಿರೋಧಗಳು ಸಹ ಬೆಳೆಯುತಿವೆ ಮತ್ತು ಯುಎಸ್ ಸಾಮ್ರಾಜ್ಯಶಾಹಿಯ ಯಜಮಾನಿಕೆಗೆ ಸವಾಲು ಒಡ್ಡುತ್ತಿವೆ.

ಲ್ಯಾಟಿನ್ ಅಮೆರಿಕ

1.36 22ನೇ ಮಹಾಧಿವೇಶನದ ನಂತರದ ಅವಧಿಯಲ್ಲಿ ಲ್ಯಾಟಿನ್ ಅಮೇರಿಕಾವು ಬಲಪಂಥೀಯ ಪ್ರತಿದಾಳಿಗೆ ಸಾಕ್ಷಿಯಾಯಿತು. ಬ್ರೆಜಿಲ್ ನಲ್ಲಿ, 2018 ರಲ್ಲಿ ನಡೆದ ಅಧ್ಯಕ್ಷೀಯ ಚುನಾವಣೆಯಲ್ಲಿ ಬಲಪಂಥೀಯ ಅಭ್ಯರ್ಥಿಯಾಗಿ ಜೈರ್ ಬೋಲ್ಸೊನಾರೊ ಗೆದ್ದರು. ಇವರು ಬಲಪಂಥೀಯ ನಿರಂಕುಶ ಆಡಳಿತವನ್ನು ಸ್ಥಾಪಿಸಲು ಮುಂದಾದರು. ಬೊಲಿವಿಯಾದಲ್ಲಿ, 2019 ರ ಚುನಾವಣೆಯಲ್ಲಿ MAS ನ ಇವೊ ಮೊರೇಲ್ ಗೆದ್ದ ನಂತರ ಯು.ಎಸ್ ಬೆಂಬಲಿತ ಕ್ಷಿಪ್ರದಂಗೆ ನಡೆಯಿತು. ದಂಗೆ ನಡೆದ ಕಾರಣ ಮೊರೇಲ್ ದೇಶ ತೊರೆಯಬೇಕಾಯಿತು. ಹೊಂಡುರಾಸ್ ನಲ್ಲಿ ನಡೆದ ಚುನಾವಣೆಯಲ್ಲಿ ದೊಡ್ಡ ಪ್ರಮಾಣದ ಅಕ್ರಮಗಳ ಆರೋಪಗಳ ಹೊರತಾಗಿಯೂ, ಯು.ಎಸ್ ಮಧ್ಯಪ್ರವೇಶದಿಂದ ಅಧ್ಯಕ್ಷರನ್ನು ಮರುಸ್ಥಾಪಿಸಲಾಯಿತು. ವೆನೆಜುವೆಲಾದಲ್ಲಿ, ಯು.ಎಸ್ ಬೆಂಬಲಿತ ಬಲಪಂಥೀಯ ಶಕ್ತಿಗಳು ನಿಕೋಲಸ್ ಮಡುರೊ ಸರ್ಕಾರವನ್ನು ಉರುಳಿಸಲು ಗಂಭೀರವಾಗಿ ಪ್ರಯತ್ನಿಸುತ್ತಿವೆ.

1.37 ಇದಕ್ಕೆ ವಿರುದ್ಧವಾಗಿ, ಜನಪ್ರಿಯ ಮತ್ತು ಎಡ ಶಕ್ತಿಗಳು ಸರ್ವಾಧಿಕಾರ ಮತ್ತು ಬಲಪಂಥೀಯ ಆರ್ಥಿಕ ನೀತಿಗಳ ವಿರುದ್ದ ನಿರಂತರವಾಗಿ ಹೋರಾಡುತ್ತಿವೆ. ಇದರಿಂದ ಎಡಪಕ್ಷಗಳು ಮತ್ತೆ ನೆಲೆಗಳನ್ನು ಪಡೆಯುತ್ತಿದ್ದು ಮುನ್ನಡೆಗಳನ್ನು ಸಾಧಿಸುತ್ತಿವೆ. ಅರ್ಜೆಂಟೀನಾದಲ್ಲಿ, ಪ್ರಸ್ತುತ ಬಲಪಂಥೀಯ ಅಧ್ಯಕ್ಷರನ್ನು 2019 ರಲ್ಲಿ ಪೆರೋನಿಸ್ಟ್ ಅಭ್ಯರ್ಥಿಯಿಂದ ಸೋಲಿಸಲಾಯಿತು. ಅತ್ಯಂತ ಗಮನಾರ್ಹ ಹೋರಾಟವು ಬೊಲಿವಿಯಾದಲ್ಲಿ ನಡೆಯಿತು. ಅಲ್ಲಿ ಅಕ್ಟೋಬರ್ 2020 ರಲ್ಲಿ, ಅಧ್ಯಕ್ಷೀಯ ಚುನಾವಣೆಯಲ್ಲಿ MAS ಅಭ್ಯರ್ಥಿ ಭರ್ಜರಿ ಜಯಗಳಿಸಿದ್ದಾರೆ. ಈ ವಿಜಯದಿಂದಾಗಿ, ಹೊಸ ಸರ್ಕಾರವು ಪ್ರತಿಗಾಮಿ ಆಡಳಿತದ ನೀತಿಗಳನ್ನು ಹಿಂದಕ್ಕೆ ತಳ್ಳಿದೆ. ಆ ನಂತರ, ಎಡ ಮತ್ತು ನಡು–ಎಡ ಅಭ್ಯರ್ಥಿಗಳು ಪೆರು ಮತ್ತು ಹೊಂಡುರಾಸ್ ನಲ್ಲಿ ಗೆದ್ದಿದ್ದಾರೆ. (ಎರಡು ದೇಶಗಳು ಸರ್ವಾಧಿಕಾರಿ ಆಡಳಿತಗಳು ಮತ್ತು ಕ್ಷಿಪ್ರದಂಗೆಗಳ ಇತಿಹಾಸವನ್ನು ಹೊಂದಿವೆ).

1.38 ಡಿಸೆಂಬರ್ 2021 ರಲ್ಲಿ, ಚಿಲಿಯ ಅಧ್ಯಕ್ಷೀಯ ಚುನಾವಣೆಯಲ್ಲಿ ಎಡ ಮೈತ್ರಿಕೂಟದ ಅಭ್ಯರ್ಥಿ ಗೇಬ್ರಿಯಲ್ ಬೋರಿಕ್ ಗೆಲುವು, ಒಂದು ಪ್ರಮುಖ ಮೈಲಿಗಲ್ಲಾಗಿದೆ. ಸಂವಿಧಾನವನ್ನು ಬದಲಾಯಿಸುವ ಚಳುವಳಿಯ ಗೆಲುವು ಮತ್ತು ಎಡ ಮತ್ತು ಪ್ರಗತಿಪರ ಶಕ್ತಿಗಳ ಪ್ರಾಬಲ್ಯವಿರುವ ಸಂವಿಧಾನ ಸಭೆಯ ಆಯ್ಕೆಯ ಹಿನ್ನೆಲೆಯಲ್ಲಿ ಈ ಯಶಸ್ಸು ಬಂದಿದೆ. ಈ ಪ್ರಗತಿಶೀಲ ಫಲಿತಾಂಶಗಳಿಗೆ ಈಕ್ವೆಡಾರ್ ಮಾತ್ರ ಹೊರತಾಗಿದೆ. ಅಲ್ಲಿ ಬಲಪಂಥೀಯರು ಅಧ್ಯಕ್ಷ ಸ್ಥಾನವನ್ನು ಗೆದ್ದಿದ್ದಾರೆ.

1.39 ಬ್ರೆಜಿಲ್ ನಲ್ಲಿ, ಹೆಚ್ಚುತ್ತಿರುವ ಜನತೆಯ ಪ್ರತಿಭಟನೆಗಳನ್ನು ಬೋಲ್ಸನಾರೊ ಅವರ ವಿನಾಶಕಾರಿ ಆಡಳಿತವು ಎದುರಿಸುತ್ತಿದೆ. ಮಾಜಿ ಅಧ್ಯಕ್ಷ ಲೂಲಾರವರು ಭ್ರಷ್ಟಾಚಾರ ಆರೋಪದಿಂದ ಮುಕ್ತರಾಗಿದ್ದು, 2022 ರಲ್ಲಿ ನಡೆಯುವ ಬ್ರೆಜಿಲ್ ಅಧ್ಯಕ್ಷೀಯ ಚುನಾವಣೆಯಲ್ಲಿ ಬೋಲ್ಸನಾರೊ ಅವರು ಲುಲಾರಿಂದ ಪ್ರಬಲ ಸವಾಲನ್ನು ಎದುರಿಸಲಿದ್ದಾರೆ. ಲುಲಾ ಅವರ ಗೆಲುವು ಯು.ಎಸ್ ಬೆಂಬಲಿತ ಬಲಪಂಥೀಯ ಶಕಿಗಳ ವಿರುದ್ಧ ನಡೆಯುತ್ತಿರುವ ಹೋರಾಟಗಳ ಮೇಲೆ ದೊಡ್ಡ ಪರಿಣಾಮ ಬೀರಲಿವೆ. ಕೊಲಂಬಿಯಾ ದೀರ್ಘಕಾಲದಿಂದ ಯು.ಎಸ್ ಬೆಂಬಲಿತ ಬಲಪಂಥೀಯ ಶಕ್ತಿಗಳ ಭದ್ರ ಕೋಟೆಯಾಗಿದೆ. ಎಡ ನೇತೃತ್ವದ ಕಾರ್ಮಿಕ ವರ್ಗದ ಹೋರಾಟಗಳಿಗೆ ಕೊಲಂಬಿಯಾ ಇದೀಗ ಸಾಕ್ಷಿಯಾಗಿದೆ. ಇಲ್ಲಿ ಎಡ ಪಂಥೀಯರು 2022ರ ಅಧ್ಯಕ್ಷೀಯ ಚುನಾವಣೆಯಲ್ಲಿ ದೊಡ್ಡ ಸವಾಲನ್ನು ಒಡ್ಡಲಿದ್ದಾರೆ.

1.40 ವೆನೆಜುವೆಲಾ, ಯುಎಸ್ ಮತ್ತು ಬಲಪಂಥೀಯ ಶಕಿಗಳು ಆರಂಭಿಸಿದ ಹೈಬ್ರಿಡ್ ಯುದ್ಧವನ್ನು ಧೈರ್ಯದಿಂದ ಎದುರಿಸಿದೆ. ಅವು ನಿರ್ಬಂಧಗಳ ಮೂಲಕ ಮಡೊರೊ ಸರ್ಕಾರವನ್ನು ಅಸ್ಥಿರಗೊಳಿಸಲು ಪ್ರಯತ್ನಿಸಿದವು. ವಿದೇಶದಲ್ಲಿ ಅದರ ಆಸ್ತಿಗಳನ್ನು ಕಿತ್ತುಕೊಳ್ಳುವುದು, ಸಶಸ್ತ್ರ ಗುಂಪುಗಳನ್ನು ಉತ್ತೇಜಿಸುವುದು ಮತ್ತು ಸಾಮಾಜಿಕ ಮತ್ತು ಆರ್ಥಿಕ ಅಶಾಂತಿಯ ಪ್ರಯತ್ನಗಳು, ಆಹಾರ, ಇಂಧನ ಮತ್ತು ಅಗತ್ಯ ಸರಕುಗಳ ತೀವ್ರ ಕೊರತೆಯ ಹೊರತಾಗಿಯೂ, ಜನಪ್ರಿಯ ಶಕ್ತಿಗಳು ಒಗ್ಗಟ್ಟಿನಿಂದ ಉಳಿದಿವೆ ಮತ್ತು ಅಶಾಂತಿಯನ್ನು ಉತ್ತೇಜಿಸುವ ಎಲ್ಲಾ ಪ್ರಯತ್ನಗಳನ್ನು ವಿಫಲಗೊಳಿಸಲಾಗಿದೆ. ಇದರ ನಡುವೆ ನವೆಂಬರ್ 2021 ರಲ್ಲಿ ನಡೆದ ಪ್ರಾಂತೀಯ ಚುನಾವಣೆಯಲ್ಲಿ, ಆಡಳಿತಾರೂಢ ಯುನೈಟೆಡ್ ಸೋಷಿಯಲಿಸ್ಟ್ ಪಾರ್ಟಿ (PSUV) 23 ಗವರ್ನರ್ ಹುದ್ದೆಗಳಲ್ಲಿ 19 ನ್ನು ಗೆದ್ದಿದೆ.

ಪಶ್ಚಿಮ ಏಷ್ಯಾ

1.41 ಪಶ್ಚಿಮ ಏಷ್ಯಾದಲ್ಲಿನ ವಿದ್ಯಮಾನಗಳ ಪ್ರಮುಖವಾದ ಲಕ್ಷಣವೆಂದರೆ, ಪ್ಯಾಲೇಸ್ಟಿನ್ ಮತ್ತು ಇರಾನ್ ವಿರುದ್ಧ ಇಸ್ರೇಲ್ ಆಕ್ರಮಣಕಾರಿ ಆಕ್ರಮಣಕಾರಿ ನಿಲುವು ಮುಂದುವರಿದಿರುವುದು. ಟ್ರಂಪ್ ಆಡಳಿತದಿಂದ ಜೆರುಸೆಲೆಮ್ ಇಸ್ರೇಲಿನ ರಾಜಧಾನಿಯಾಗಿ ಮಾನ್ಯತೆ ಮತ್ತು ಪಶ್ಚಿಮ ದಂಡೆಯಲ್ಲಿ ಕಾನೂನು ಬಾಹಿರ ವಸತಿಗಳ ಅನುಮೋದನೆಗಳಿಂದ ಕುಮ್ಮಕ್ಕು ಪಡೆದ ನೆತನ್ಯಾಹು ನೇತೃತ್ವದಲ್ಲಿ ಇಸ್ರೇಲ್ ಪೂರ್ವ ಜೆರುಸಲೆಮ್ ಮತ್ತು ಅಲ್–ಅಕ್ಸಾ ಮಸೀದಿಯಲ್ಲಿ ಹೊಸ ಪ್ರಚೋದನೆಯನ್ನು ಉಂಟು ಮಾಡಿತು. ಗಾಜಾ ಪಟ್ಟಿಯ ವಿರುದ್ಧ ಆಕ್ರಮಣ ಮತ್ತೊಂದು ದಾಖಲೆಯಾಗಿದೆ. ನಾಲ್ಕು ಅರಬ್ ದೇಶಗಳು – ಯು.ಎ.ಇ, ಮೊರಾಕೊ, ಬಹ್ರೇನ್ ಮತ್ತು ಸುಡಾನ್ – ಇಸ್ರೇಲ್ ನೊಂದಿಗೆ ರಾಜತಾಂತ್ರಿಕ ಸಂಬಂಧಗಳನ್ನು ಸ್ಥಾಪಿಸಲು ನೆರವು ನೀಡುವ ಮೂಲಕ, ಇಸ್ರೇಲಿಗೆ ಮತ್ತೊಂದು ರಾಜತಾಂತ್ರಿಕ ಯಶಸ್ಸನ್ನು ಯುಎಸ್ ಸುಗಮಗೊಳಿಸಿತು.

1.42 ಟ್ರಂಪ್ ಏಕಪಕ್ಷೀಯವಾಗಿ ಪರಮಾಣು ಒಪ್ಪಂದದಿಂದ ಹಿಂದೆ ಸರಿದ ನಂತರ, ಯುಎಸ್ ಹೇರಿದ ನವೀಕೃತ ನಿರ್ಬಂಧಗಳನ್ನು ಇರಾನ್ ಎದುರಿಸುತ್ತಿದೆ. ಬಿಡೆನ್ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ನಂತರ, ಪರಮಾಣು ಒಪ್ಪಂದದ ಪುನರುಜ್ಜೀವನದ ಬಗ್ಗೆ ಮಾತುಕತೆ ನಡೆಯುತಿದೆ. ಆದರೆ, ಮೊದಲು ನಿರ್ಬಂಧಗಳನ್ನು ಹಿಂತೆಗೆದುಕೊಳ್ಳಲು ಯು.ಎಸ್ ಹಿಂಜರಿಯುತ್ತಿರುವುದರಿಂದ, ಇಲ್ಲಿಯವರೆಗೆ ಯಾವುದೇ ಪ್ರಗತಿಯಾಗಿಲ್ಲ. ಹೊಸ ಅಧ್ಯಕ್ಷ ಇಬ್ರಾಹಿಂ ರೈಸಿ ಅವರ ಆಡಳಿತದಲ್ಲಿ ಇರಾನ್ ತೀವ್ರ ಆರ್ಥಿಕ ಸಂಕಷ್ಟ ಎದುರಿಸುತ್ತಿದೆ. ಚೀನಾದೊಂದಿಗೆ ವ್ಯೂಹಾತ್ಮಕ ಮತ್ತು ಆರ್ಥಿಕ ಸಂಬಂಧಗಳ 25 ವರ್ಷಗಳ ದೂರಗಾಮಿ ಒಪ್ಪಂದಕ್ಕೆ ಇರಾನ್ ಸಹಿ ಮಾಡಿದೆ.

1.43 ಕಳೆದ ಎರಡು ದಶಕಗಳಲ್ಲಿ ಪಶ್ಚಿಮ ಏಷ್ಯಾವು, ಸಾಮ್ರಾಜ್ಯಶಾಹಿ ಆಕ್ರಮಣಶೀಲತೆ ಮತ್ತು ಯು.ಎಸ್ ನಿಂದ ದೇಶಗಳ ಸ್ವಾಧೀನ ಪಡಿಸಿಕೊಳ್ಳುವಿಕೆಗಳ ಅತ್ಯಂತ ಕೆಟ್ಟದಾದ ರೂಪಗಳನ್ನು ಕಂಡ ಪ್ರದೇಶವಾಗಿದೆ. ಮೊದಲು ಇರಾಕ್, ನಂತರ ಲಿಬಿಯಾ ಮತ್ತು ಸಿರಿಯಾ ಇವುಗಳಿಗೆ ಸಾಕ್ಷಿಯಾದವು. ಯು.ಎಸ್ ಪಡೆಗಳು ವಾಪಸಾದ ನಂತರ, ಇರಾಕ್ ಇನ್ನೂ ಪಂಥೀಯ ಕಲಹಗಳು ಹಾಗೂ ಅಲ್ ಖೈದಾ ಮತ್ತು ISIS ವಿರುದ್ಧ ಸುದೀರ್ಘ ಹೋರಾಟಗಳ ನಡುವೆ ಸ್ಥಿರಗೊಳ್ಳಲು ಹೆಣಗಾಡುತ್ತಿದೆ. ಹಲವು ವರ್ಷಗಳ ಅಂತರ್ಯುದ್ಧದ ನಂತರ ಲಿಬಿಯಾ ಶಾಂತಿಯನ್ನು ಸ್ಥಾಪಿಸಲು ಮತ್ತು ಏಕೀಕೃತ ಪ್ರಭುತ್ವವನ್ನು ರಚಿಸಲು, ಅನಿಶ್ಚಿತ ಪ್ರಯತ್ನದಲ್ಲಿ ತೊಡಗಿದೆ. ಆದರೆ, ಪ್ರತಿಸ್ಪರ್ಧಿ ಶಸ್ತ್ರಾಸ್ತ್ರ ಸುಸಜ್ಜಿತವಾದ ಬಣಗಳು ಹಿಡಿತ ಸಾಧಿಸುತ್ತಿವೆ. ಸಿರಿಯಾದಲ್ಲಿ, ಅಲ್ಲಿನ ಸರಕಾರ ಬದಲಾವಣೆ ಮಾಡುವಲ್ಲಿ ಯು.ಎಸ್ ನ ವೈಫಲ್ಯದ ಮತ್ತು ಏಳು ವರ್ಷಗಳ ವಿನಾಶಕಾರಿ ಅಂತರ್ಯುದ್ಧಗಳ ನಂತರ, ಅಸ್ಸಾದ್ ಸರ್ಕಾರವು ಒಂದು ಪ್ರಾಂತ್ಯ ಬಿಟ್ಟರೆ ಇಡೀ ದೇಶದಲ್ಲಿ ತನ್ನ ಹಿಡಿತವನ್ನು ಕ್ರೋಢೀಕರಿಸಿದೆ. ಟರ್ಕಿಯ ಗಡಿಯಲ್ಲಿರುವ ಪ್ರಾಂತ ಇನ್ನೂ ಉಗ್ರಗಾಮಿ ಬಂಡುಕೋರರ ನಿಯಂತ್ರಣದಲ್ಲಿ ಇದೆ.

1.44 ಈ ಎಲ್ಲಾ ಮೂರು ದೇಶಗಳು ಮತ್ತು ಇತರ ಪ್ರದೇಶಗಳು ಗಂಭೀರ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿವೆ. ಲೆಬನಾನ್ ಆರ್ಥಿಕ ಕುಸಿತದತ್ತ ಸಾಗಿದೆ.

ಆಫ್ರಿಕಾ

1.45 ಆಫ್ರಿಕಾದ ಹಲವು ಭಾಗಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಶಸ್ತ್ರ ಇಸ್ಲಾಮಿಸ್ಟ್ ಗುಂಪುಗಳ ವಿರುದ್ಧ ಹೋರಾಡುವ, ಮತ್ತು ಆಫ್ರಿಕನ್ ಖಂಡದಲ್ಲಿ ಚೀನಿಯರ ವ್ಯಾಪಕ ಪ್ರಭಾವವನ್ನು ಎದುರಿಸುವ ಹೆಸರಿನಲ್ಲಿ, 'ಆಫ್ರಿಕಾಮ್' (ಯು.ಎಸ್ ಸೇನೆಯ ಆಫ್ರಿಕನ್ ಕಮಾಂಡ್ ಅಥವಾ ವಿಭಾಗ) ಮೂಲಕ ತನ್ನ ಮಿಲಿಟರಿ ಹೆಜ್ಜೆಗುರುತನ್ನು ಯು.ಎಸ್ ಹೆಚ್ಚಿಸಿಕೊಂಡಿದೆ. ಆಫ್ರಿಕದ 15 ದೇಶಗಳ 29 ಸ್ಥಳಗಳಲ್ಲಿ ಯು.ಎಸ್ ನ ವಿಶೇಷ ಸೇನಾ ನೆಲೆಗಳಿವೆ. ಪಶ್ಚಿಮದಲ್ಲಿ ಸಹೇಲಿಯನ್ ಪ್ರದೇಶದ ಮತ್ತು ಪೂರ್ವದಲ್ಲಿ ಹಾರ್ನ್ ಆಫ್ ಆಫ್ರಿಕಾದ ಹೆಚ್ಚಾಗಿ ಕೇಂದ್ರೀಕೃತವಾಗಿದೆ. ಇದು ಈಗಾಗಲೇ ಪಶ್ಚಿಮ ಆಫ್ರಿಕಾದ ವಿವಿಧ ದೇಶಗಳಲ್ಲಿ ನೆಲೆಗೊಂಡಿರುವ ಫ್ರೆಂಚ್ ಪಡೆಗಳನ್ನು ಹೊರತುಪಡಿಸಿ ಇರುವ ಮಿಲಿಟರಿ ನೆಲೆಗಳು.

ಸಮಾಜವಾದಿ ದೇಶಗಳು–ಯು.ಎಸ್ ಸಾಮ್ರಾಜ್ಯಶಾಹಿಯ ಪ್ರತಿಕೂಲ ಚಲನೆಗಳು

1.46 ಮಹಾಸೋಂಕಿನ ಬಿಕ್ಕಟ್ಟನ್ನು ಅವಕಾಶವಾಗಿ ಬಳಸಿಕೊಂಡು, ಆರು ದಶಕಗಳ ಹಿಂದಿನ ಆರ್ಥಿಕ ದಿಗ್ಬಂಧನವನ್ನು ಬಿಗಿಗೊಳಿಸಿ, ಸಮಾಜವಾದಿ ಕ್ಯೂಬಾವನ್ನು ಅಸ್ಥಿರಗೊಳಿಸಲು ಯು.ಎಸ್ ಸಾಮ್ರಾಜ್ಯಶಾಹಿ ಪ್ರಯತ್ನಿಸುತ್ತಿದೆ. ಕ್ಯೂಬಾದೊಂದಿಗೆ ಆರ್ಥಿಕ ಸಂಬಂಧಗಳನ್ನು ಹೊಂದುವ, ವಿಶ್ವದ ಯಾವುದೇ ದೇಶಗಳ ಮೇಲೆ ಆರ್ಥಿಕ ನಿರ್ಬಂದಗಳನ್ನು ಹೇರುವುದಾಗಿ ಬೆದರಿಕೆ ಹಾಕುತ್ತಾ, ಕ್ಯೂಬಾದ ಕೆಲವು ವಿಭಾಗಗಳ ಜನರನ್ನು ಕಮ್ಯುನಿಸ್ಟ್ ಪಕ್ಷ ಮತ್ತು ಸಮಾಜವಾದದ ವಿರುದ್ಧ ಬಂಡಾಯವೇಳಲು ಯು.ಎಸ್ ಪ್ರಚೋದಿಸಿದೆ. ದಿಗ್ಬಂದನದ ಹೇರಿಕೆಯಿಂದ ಕ್ಯೂಬಾ ಎದುರಿಸಿದ ಆರ್ಥಿಕ ಸಂಕಷ್ಟವನ್ನು ಬಳಸಿಕೊಳ್ಳಲು ಪ್ರತಿ–ಕ್ರಾಂತಿಕಾರಿ ಶಕ್ತಿಗಳ ಮೂಲಕ ಪ್ರಯತ್ನಿಸಲಾಯಿತು. ಆದಾಗ್ಯೂ, ಆ ಪ್ರಯತ್ನಗಳು ವಿಫಲವಾಗಿವೆ. ಕ್ಯೂಬಾ ಮತ್ತು ಉತ್ತರ ಕೊರಿಯಾ (DPRK) ಗಳನ್ನು ಭಯೋತ್ಪಾದನೆಯನ್ನು ಪ್ರಾಯೋಜಿಸುತ್ತಿರುವ ದೇಶಗಳೆಂದು ಮತ್ತೊಮ್ಮೆ ವರ್ಗೀಕರಿಸಲಾಗಿದೆ. ಪರಮಾಣು–ಅಸ್ತ್ರ ಸಜ್ಜಿತ ವಲಯವಾದ ಕೊರಿಯನ್ ಪರ್ಯಾಯ ದ್ವೀಪದಲ್ಲಿ ಯು.ಎಸ್ ಪ್ರಚೋದನಕಾರಿ ಮಿಲಿಟರಿ ವ್ಯಾಯಾಮಗಳನ್ನು ನಡೆಸುತ್ತಿದೆ. ತನ್ನ ಆರ್ಥಿಕ ನಿರ್ಬಂಧಗಳನ್ನು ತೆಗೆದುಹಾಕಲು ಯುಎಸ್ ನಿರಾಕರಿಸಿದ್ದರಿಂದ ಯುಎಸ್–ಉತ್ತರ ಕೊರಿಯಾ (ಡಿ.ಪಿ.ಆರ್.ಕೆ) ಮಾತುಕತೆ ವಿಫಲವಾಗಿದೆ.

ದಕ್ಷಿಣ ಏಷ್ಯಾದ ದೇಶಗಳು

1.47 ಈ ಪ್ರದೇಶದ ಪ್ರಮುಖವಾದ ಜಾಗತಿಕ ಬೆಳವಣಿಗೆ ಎಂದರೆ, ಅವಮಾನಕರ ರೀತಿಯಲ್ಲಿ ಯುಎಸ್ ಅಫ್ಘಾನಿಸ್ತಾನದಿಂದ ತನ್ನ ಸೇನಾ ಪಡೆಗಳ ವಾಪಸಾತಿ. ಇದು 20 ವರ್ಷಗಳ ಸುದೀರ್ಘ ಯುದ್ಧವನ್ನು ಕೊನೆಗೊಳಿಸಿತು. ಇದರಿಂದ ಯು.ಎಸ್ ಸಾಮ್ರಾಜ್ಯಶಾಹಿಗೆ ಹಿನ್ನಡೆಯಾಗಿದೆ. ಯುಎ.ಸ್–ನ್ಯಾಟೊ ಪಡೆಗಳ ವಾಪಸಾತಿಯಿಂದಾಗಿ ಅಶ್ರಫ್ ಘನಿ ಸರ್ಕಾರದ ಪತನವಾಯಿತು ಮತ್ತು ಆಗಸ್ಟ್ 2021 ರಲ್ಲಿ ತಾಲಿಬಾನ್ ದೇಶದ ನಿಯಂತ್ರಣ ಪಡೆಯಲು ಕಾರಣವಾಯಿತು. ತಾಲಿಬಾನ್ ಸರ್ಕಾರದ ರಚನೆ, ಅದರ ಹಿಂದಿನ ಆಡಳಿತದ ಕರಾಳ ಅನುಭವದಿಂದಾಗಿ ಗಂಭೀರ ಆತಂಕಕ್ಕೆ ಕಾರಣವಾಗಿದೆ. ರಷ್ಯಾ, ಚೀನಾ, ಇರಾನ್ ಮತ್ತು ಮಧ್ಯ ಏಷ್ಯಾ, ಅಫ್ಘಾನಿಸ್ತಾನದೊಂದಿಗೆ ಗಡಿಯನ್ನು ಹೊಂದಿರುವ ದೇಶಗಳಾಗಿವೆ. ತಾಲಿಬಾನ್ ಜೊತೆಗಿನ ಇವರ ಪರಸ್ಪರ ಪ್ರತಿಕ್ರಿಯೆಗಳ ಮಟ್ಟಗಳು ವಿಭಿನ್ನವಾಗಿವೆ. ಪಾಕಿಸ್ತಾನವು, ತಾಲಿಬಾನ್ ನ ಸ್ಥಿರ ಬೆಂಬಲಿಗ ದೇಶ. ತಾಲಿಬಾನ್ ಆಡಳಿತದ ಅಂತರಾಷ್ಟ್ರೀಯ ಸಂಬಂಧಗಳನ್ನು ಸುಗಮಗೊಳಿಸಲು ಪಾಕಿಸ್ಥಾನವು ಇದೀಗ ಪ್ರಮುಖ ಪಾತ್ರ ವಹಿಸುತ್ತದೆ. ಅಫ್ಘಾನಿಸ್ತಾನದಲ್ಲಿನ ಈ ಬೆಳವಣಿಗೆಗಳ ಕುರಿತಂತೆ ಭಾರತ ಒಂಟಿಯಾಗಿಸಲ್ಪಟ್ಟಿದೆ. ಈಗ ಮಾನವೀಯ ನೆರವು ಒದಗಿಸುವ ಮೂಲಕ ಆ ದೇಶದೊಂದಿಗೆ ಮರು–ಸಂಪರ್ಕದ ಮಾರ್ಗಗಳನ್ನು ಹುಡುಕುತ್ತಿದೆ.

1.48 ದಕ್ಷಿಣ ಏಷ್ಯಾದಲ್ಲಿನ ಬೆಳವಣಿಗೆಗಳಲ್ಲಿ ಭಾರತದ ಪ್ರತ್ಯೇಕತೆ ಮತ್ತೊಂದು ಅಭಿವ್ಯಕ್ತಿಯನ್ನು ಕಂಡುಕೊಂಡಿತು, 8 ಸಾರ್ಕ್ ಸದಸ್ಯರಲ್ಲಿ 5 ಸದಸ್ಯ ದೇಶಗಳು–ಅಫ್ಘಾನಿಸ್ತಾನ, ಬಾಂಗ್ಲಾದೇಶ, ನೇಪಾಳ, ಪಾಕಿಸ್ತಾನ ಮತ್ತು ಶ್ರೀಲಂಕಾ–ಚೀನಾ ಆರಂಭಿಸಿದ ದಕ್ಷಿಣ ಏಷ್ಯಾ ಫೋರಂ ಗೆ ಸೇರಿದವು. 2014 ರಿಂದ ಸಾರ್ಕ್ ನ ಯಾವುದೇ ಶೃಂಗಸಭೆಗಳು ನಡೆದಿಲ್ಲ. 2016 ರಲ್ಲಿ ಸಾರ್ಕ್ ಶೃಂಗಸಭೆಯಲ್ಲಿ ಭಾಗವಹಿಸಲು ಭಾರತ ನಿರಾಕರಿಸಿತು. ಭಾರತವು ಸಾರ್ಕ್ ಅನ್ನು ಪುನರುಜ್ಜೀವನಗೊಳಿಸಲು ಉತ್ಸುಕವಾಗಿಲ್ಲ ಎಂಬ ಅನಿಸಿಕೆ ಬಲವಾಗಿದೆ. ಬದಲಾಗಿ, ಬಂಗಾಳ ಕೊಲ್ಲಿ ತೀರವನ್ನು ಹಂಚಿಕೊಳ್ಳುವ ಭಾರತದ 7 ನೆರೆಯ ದೇಶಗಳನ್ನು ಒಳಗೊಂಡ, 'ಬಹು ವಲಯಗಳ ತಾಂತ್ರಿಕ ಮತ್ತು ಆರ್ಥಿಕ ಸಹಕಾರ ಬಂಗಾಳ ಕೊಲ್ಲಿ ಉಪಕ್ರಮ' (BIMSTEC) ದಲ್ಲಿ ಹೆಚ್ಚಿನ ಆಸಕ್ತಿ ಹೊಂದಿದೆ.

JANASHAKTHI KANNADA VARA PATRIKE FEBRUARY 14-20, 2022 Price: Rs. 10/- Date of Publication: 11 FEBRUARY 2022 RNI No. KARKAN /2006/17926 Posted on 14-02-2022
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate** - Rs. 2

'ಹಿಜಾಬ್–ಕೇಸರಿ ಶಾಲು: ಅನಗತ್ಯ ವಿವಾದವನ್ನು ನಿಲ್ಲಿಸಿ' ರಾಜ್ಯಾದ್ಯಂತ ಪ್ರತಿಭಟನೆ


ಉಡುಪಿ



ಚಿಕ್ಕಬಳ್ಳಾಪುರ


ರಾಯಚೂರು


ಕೊಪ್ಪಳ



ತುಮಕೂರು



ಕಲಬುರಗಿ



ಗದಗ


ಯಾದಗಿರಿ


ಮೈಸೂರು

ವಿವಿಧ ಬೇಡಿಕೆಗಳನ್ನು ಈಡೇರಿಸಬೇಕೆಂದು ಕಟ್ಟಡ ಕಾರ್ಮಿಕರಿಂದ ರಾಜ್ಯಾದ್ಯಂತ ಪ್ರತಿಭಟನೆ

ರಾಜ್ಯದ ಕಟ್ಟಡ ನಿರ್ಮಾಣ ವಲಯ ಸಾವಿರಾರು ಕಾರ್ಮಿಕರು ಇಂದು ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕ ಫೆಡರೇಶನ್(ಸಿಐಟಿಯು) ನೇತೃತ್ವದಲ್ಲಿ ತಮ್ಮ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಕಾರ್ಮಿಕ ಕಚೇರಿಗಳ ಮುಂಭಾಗ ಹಾಗೂ ಬೆಂಗಳೂರಿನ ಹಲವಡೆ ಮನೆ ಮನೆ ಮುಂದೆಯೂ ಹಾಗೂ ಕೆಲಸದ ಸ್ಥಳಗಳಲ್ಲಿಯೂ ಪ್ರತಿಭಟನೆ ನಡೆಸಿದರು.

ಬಾಕಿ ಕೋವಿಡ್ ಪರಿಹಾರ ನೀಡಬೇಕು, ವೈದ್ಯಕೀಯ ನೆರವು–ಶಿಕ್ಷಣ, ಮದುವೆ, ಪಿಂಚಣಿ ಅರ್ಜಿಗಳನ್ನು ಕೂಡಲೇ ಇತ್ಯರ್ಥಪಡಿಸಬೇಕು, ಮಂಡಳಿಯಿಂದ ಸಿಐಟಿಯು ಸಂಘಟನೆಗೆ ನೇಮಕಾತಿ, ಕಟ್ಟಡ ಕಾರ್ಮಿಕ ಕಾನೂನು ಸೆಸ್ ಕಾನೂನು ರಕ್ಷಣೆ, ಕಟ್ಟಡ ಸಾಮಾಗ್ರಿಗಳ ಮೇಲೆ ತೆರಿಗೆ ಕಡಿತ ಮಾಡಬೇಕು ಹಾಗೂ ಕಟ್ಟಡ ಕಾರ್ಮಿಕ ಕಲ್ಯಾಣ ನಿಧಿ ದುರುಪಯೋಗ ತಡೆ ಹಾಗೂ ತನಿಖೆಗಾಗಿ ಆಗ್ರಹಿಸಿ ಈ ಹೋರಾಟಕ್ಕೆ ಕರೆ ನೀಡಲಾಗಿತ್ತು.

ಕಟ್ಟಡ ಕಾರ್ಮಿಕರಿಗೆ ನೊಂದಣಿ ಪ್ರಕ್ರಿಯೆಗಳು ಸ್ಥಗಿತಗೊಂಡಿದ್ದು, ಕೂಡಲೇ ಆರಂಭಿಸಬೇಕು. ಸೌಲಭ್ಯ ಮಂಜೂರಾದ ಫಲಾನುಭವಿಗಳಿಗೆ ಒಂದು ತಿಂಗಳ ಒಳಗಾಗಿ ಹಣ ವರ್ಗಾವಣೆ ಮಾಡಬೇಕು ವಿವಿಧ ಸೌಲಭ್ಯಕ್ಕೆ ಅರ್ಜಿ ಸಲ್ಲಿಸಿ, ನಿರ್ಮಾಣ ಕಾರ್ಮಿಕರು ಅಲ್ಲ ಎಂದು ತಿರಸ್ಕೃತಗೊಂಡಿರುವ ನಿಜವಾದ ಕಟ್ಟಡ ಕಾರ್ಮಿಕರ ಅರ್ಜಿಗಳನ್ನು ಮರು ಪರಿಶೀಲನೆಗೆ ಈಗಾಗಲೇ ಮನವಿ ಸಲ್ಲಿಸಿದ್ದು, ತಕ್ಷಣ ಕ್ರಮಕೈಗೊಳ್ಳಬೇಕು ಎಂದು ಒತ್ತಾಯಿಸಿದೆ.

ಕಾರ್ಮಿಕರ ಸಹಜ ಮರಣ ಪರಿಹಾರದ ಮೊತ್ತ ರೂ.2 ಲಕ್ಷಕ್ಕೆ ಹೆಚ್ಚಿಸಬೇಕು. ಅಪಘಾತ ಮರಣ ಪರಿಹಾರದ ಮೊತ್ತವನ್ನು ರೂ.10 ಲಕ್ಷ ಕ್ಕೆ ಹೆಚ್ಚಿಸಬೇಕು. ಬೋಗಸ್ ಕಾರ್ಡ್‌ಗಳಿಗೆ ನಿಯಂತ್ರಣ ಹಾಕಿ ತಪ್ಪಿತಸ್ಥರಿಗೆ ಶಿಕ್ಷೆಯಾಗಲಿ. ಸಕ್ರಮಗೊಳಿಸಲಾದ ಅನಧಿಕೃತ ಕಟ್ಟಡಗಳಿಂದ ಸೆಸ್ ಸಂಗ್ರಹಕ್ಕೆ ಕ್ರಮವಹಿಸಬೇಕು. ಕಾರ್ಮಿಕ ಮಂಡಳಿಯಲ್ಲಿ ಹಾಗೂ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆ ಭರ್ತಿ ಮಾಡಬೇಕು. ರೇಷನ್ ಕಿಟ್, ಟೂಲ್ ಕಿಟ್, ಸುರಕ್ಷಾ ಕಿಟ್, ಬೂಸ್ಟರ್ ಕಿಟ್ ಖರೀದಿಯಲ್ಲಿನ ಅಕ್ರಮ ಕುರಿತು ತನಿಖೆಗೆ ಒತ್ತಾಯಿಸಿದೆ.

ರಾಜ್ಯದ ಬೀದರ ಜಿಲ್ಲೆಯಿಂದ ಹಿಡಿದು ಬೆಂಗಳೂರಿನವರೆಗೆ ಹಾಗೂ ಕುಂದಾಪುರದಿಂದ ಕೋಲಾರದವರೆಗೂ ಕಾರ್ಮಿಕರು ನೂರಾರು ಸಂಖ್ಯೆಯಲ್ಲಿ ಸೇರಿ ಪ್ರತಿಭಟನೆ ನಡೆಸಿ ಸರ್ಕಾರಕ್ಕೆ ಮನವಿ ಸಲ್ಲಿಸಿ ಹೋರಾಟ ಯಶಸ್ವಿಗೊಳಿಸಿದ್ದಾರೆ.













JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and
Printed at : Kriya Prakashana, No. 12, 18th Cross, Sampangirama Nagar, Bangalore 560027
Editor : **NITYANANDASWAMI**